
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

26 ಆಗಸ್ಟ್ 2015 ಪುಟ 20 ರೂ. 15/-



ಗಂಡು ಗುರುತಿಸಬೇಕಾದ ಹೆಣ್ಣು ಹೆಜ್ಜೆ



ಈಗ ಅರಣ್ಯ ಸ್ವಾಹಾ!

ಬನ್ನಂಜೆ ಕಂಪೆನಿ ಬಂದ್



ಮಳವಳ್ಳಿ: ಡಿವೈಎಸ್ಪಿ ಎತ್ತಂಗಡಿ ಯತ್ನದಲ್ಲಿ ಮರಳು ಮಾಫಿಯಾ?

ಮಾರನ್ ಸಾಮ್ರಾಜ್ಯಕ್ಕೆ 'ಸನ್' ಸ್ಟ್ರೋಕ್!

ದಾವಣಗೆರೆ: ಬಿಜೆಪಿಗಳ 'ಬಂದ್'ಗೆ ಭರ್ಜರಿ ಮುಖಭಂಗ

ಗಂಡು ಗುರುತಿಸಬೇಕಾದ 'ಹೆಣ್ಣುಹೆಜ್ಜೆ'

ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಹನುಮಸಾರ ಗ್ರಾಮದಲ್ಲಿ ಹುಟ್ಟಿ ಕೊಪ್ಪಳದಲ್ಲಿ ಬೆಳೆದು ಈಗ ಕೊಪ್ಪಳ ತಾಲ್ಲೂಕಿನ ಆಳವಂಡಿ ಗ್ರಾಮದಲ್ಲಿ ನೆಲೆಸಿರುವ ಸಾವಿತ್ರಿ ಮುಜುಮದಾರ (ಮೊಬೈಲ್: 9886922815) ಸತ್ಯಕಥೆಗಾರ್ತಿಯಾಗಿ ಸಾಧನೆ ಮಾಡಿದ ಕ್ರಮ ಬಹಳ ಸಾಹಸಮಯವಾದುದಾಗಿದೆ. ಈ 'ಹೆಣ್ಣುಹೆಜ್ಜೆ' ಪುಸ್ತಕ 30 ಸತ್ಯಘಟನೆಗಳ ಸಂಗ್ರಹವಾಗಿದೆ. ಇಲ್ಲಿನ ಪ್ರತಿಯೊಂದು ಘಟನೆ ಹೃದಯವಿದ್ರಾವಕವಾಗಿದೆ. ಈ ದಾರುಣ ಕಥೆಗಳು ಒಳಭಾರತದ ನಿಜರೂಪವನ್ನು ಹೊರಗೆ ಹಾಕುತ್ತ ಓದುಗರನ್ನು ಬೆಚ್ಚಿಬೀಳಿಸುತ್ತವೆ. ಭಾರತ ಮಾತೆಯ ಮಕ್ಕಳಿಗೆ ಗ್ರಾಮೀಣ ಮಾತೆಯರ ಒಡಲುರಿಯ ಪರಿಚಯ ಮಾಡಿಸುತ್ತವೆ.

ಕನ್ನಡ ಸಾಹಿತ್ಯದಲ್ಲಿ ಹಳ್ಳಿಗಾಡಿನ ವಾತಾವರಣದ ಹಿನ್ನೆಲೆಯಲ್ಲಿ ಮನುಷ್ಯತ್ವದ ಬಗ್ಗೆ ಇಷ್ಟೊಂದು ತೀವ್ರವಾಗಿ ಪರಿಚಯ ಮಾಡಿಕೊಡುವ ಪುಸ್ತಕಗಳು ಕಡಿಮೆ. ಈ 'ಹೆಣ್ಣುಹೆಜ್ಜೆ'ಯಲ್ಲಿನ ಘಟನೆಗಳು ಓದುಗರ ಮನದಾಳದಲ್ಲಿ ಮಾನವೀಯತೆಯನ್ನು ಅಚ್ಚೊತ್ತದೆ ಮುಂದೆ ಸಾಗುವುದಿಲ್ಲ. ಮನಸ್ಸು ಬಹಳ ಕಾಲದವರೆಗೆ ಅವುಗಳ ಸುತ್ತ ತಿರುಗುತ್ತ ತಳಸಮುದಾಯಗಳ ಬದುಕಿನ ಬಗ್ಗೆ ಅರಿಯದೆ ಇರುವುದಕ್ಕೆ ನಾಚಿಕೆಪಟ್ಟುಕೊಳ್ಳುವಂತಾಗುತ್ತದೆ. ಒಬ್ಬ ಹೆಣ್ಣುಮಗಳು



ತನ್ನೆಲ್ಲ ಕೌಟುಂಬಿಕ ಜವಾಬ್ದಾರಿಗಳನ್ನು ನಿಭಾಯಿಸುತ್ತ ಅದು ಹೇಗೆ ಇಷ್ಟೆಲ್ಲ ಹಂಗುಹರಿದು ತದೇಕಚಿತ್ತದಿಂದ ಅನಾಥ ಮತ್ತು ಅಸಹಾಯಕ ಜೀವಗಳಲ್ಲಿ ಚೈತನ್ಯ ತುಂಬದಳು ಎಂಬ ಪ್ರಶ್ನೆ ಉದ್ಭವಿಸದೆ ಇರದು. ಹೊಸ ಬದುಕಿನ ದಾರಿ ಹುಡುಕಿ ಗುರಿ ಸಾಧಿಸುವ ಇಲ್ಲಿನ ನಿಜಕಥೆಗಳ ನೈಜಪಾತ್ರಗಳು ನಮ್ಮ ಮಧ್ಯೆಯೆ ಇರುವ ನರಕಸದೃಶ ವ್ಯವಸ್ಥೆಯ ಬದಲಾವಣೆಗೆ ಪೂರಕವಾಗಿ ನಿಲ್ಲುತ್ತವೆ.

ಮೂಢರ ದೇವತೆ

ಕೊಪ್ಪಳದ ಸಮೀಪದ ಹಳ್ಳಿಯೊಂದರಲ್ಲಿ ತಂದೆಯನ್ನು ಕಳೆದುಕೊಂಡ 20ರ ಹರೆಯದ ಯುವತಿಯೊಬ್ಬಳಿಗೆ ರೋಗಗ್ರಸ್ತ ತಾಯಿಯನ್ನು ನೋಡಿಕೊಳ್ಳುವುದೇ ಜೀವನದ ಗುರಿಯಾಗಿತ್ತು. ಕೆಲಸ ಹುಡುಕಿಕೊಂಡು ಹೋದರೆ ಯಾರೂ ಕೆಲಸ ಕೊಡುತ್ತಿರಲಿಲ್ಲ, ಆದರೆ ಒಂದಿಷ್ಟು ಕಾಳುಕಡ್ಡಿ ಕೊಟ್ಟು ಗೌರವದಿಂದ ಕಳುಹಿಸುತ್ತಿದ್ದರು. ಹಳ್ಳಿಯ ಹೋಟೆಲ್‌ನಲ್ಲಿ ತಿಂಡಿ ತಿಂದರೆ ಮಾಲೀಕರು ಹಣ ಪಡೆಯುತ್ತಿರಲಿಲ್ಲ. ಕೈ ಚಾಚಿದರೆ ಕೈಯಲ್ಲಿ ಚಿಲ್ಲರೆ ಸೇರುತ್ತಿತ್ತು; ಕಚ್ಚೆ ಹರುಕರು ಕೂಡ ಇವಳನ್ನು ಮುಟ್ಟುವ ಧೈರ್ಯ ತೋರುತ್ತಿರಲಿಲ್ಲ; ಶುಭಕಾರ್ಯಕ್ಕೆ ತೆರಳುವ ಮಹಿಳೆಯರು ಇವಳ ಪಾದಮುಟ್ಟಿ ಆಶೀರ್ವಾದ ಪಡೆಯುತ್ತಿದ್ದರು. 'ಯಾರಿಗೂ ಇಲ್ಲದ ಗೌರವ ಇವಳಿಗೇಕೆ' ಎಂಬ ಪ್ರಶ್ನೆ ಸಹಜವಾಗಿಯೇ ಮೂಡುತ್ತದೆ. ಏಕೆಂದರೆ ಇವಳ ತಲೆಯಲ್ಲಿ ಜಡೆ ಮೂಡಿದ್ದವು. ತಲೆಯ ಹಿಂದಿನ ಕೂದಲು ಅಂಟು ಅಂಟಾಗಿ ಒಟ್ಟುಗೂಡಿದ್ದವು. ಹೀಗಾಗಿ ಅವಳು ಆ ಹಳ್ಳಿಗರ ಕಣ್ಣಲ್ಲಿ ಎಲ್ಲಮ್ಮ ದೇವಿಯ ಪ್ರತಿರೂಪವಾಗಿದ್ದಳು.


ಹುಲಿಗೆಮ್ಮನ ಜಾತ್ರೆಯಲ್ಲಿ 'ಮಹಿಳಾ ಸಮಖ್ಯಾ' ಸಂಸ್ಥೆಯವರು ಪೊಲೀಸ್ ಇಲಾಖೆಯ ಸಹಕಾರದೊ[...] ವಿನೂತನ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಜಡೆ ಬೆ[...] ಎಂಬ ಕಾರಣದಿಂದ ದೇವರಿಗೆ ಮೀಸಲಾಗಿ ಭಿಕ್ಷ[...] ಮಾಡುವವರನ್ನು ಹಿಡಿದು ವೈಜ್ಞಾನಿಕ ತಿಳಿವಳಿಕೆ ಕೊ[...] ಜಡೆ ಕತ್ತರಿಸುವ ಕಾರ್ಯಕ್ರಮ ಅದಾಗಿತ್ತು. ಈ ಸ[...] ಹೋಗಬೇಕಿದ್ದ ಸಾವಿತ್ರಿಯವರಿಗೆ ತಟ್ಟನೆ ಆ ಹಳ್[...] ಯುವತಿ ನೆನಪಾದಳು. ಆ ಹಳ್ಳಿಗೆ ಹೋಗಿ ಬ[...] ಕಷ್ಟಪಟ್ಟು ಅವಳನ್ನು ಹೊತ್ತುಕೊಂಡು ಬಂದವರ[...] ಬಸ್ಸಿನಲ್ಲಿ ಹಾಕಿಕೊಂಡು ಜಾತ್ರೆ ನಡೆಯುವ ಸ್ಥಳಕ್ಕೆ ಬಂದ[...] ಅಂತೂಇಂತೂ ಜಡೆ ಕತ್ತರಿಸಿದ ನಂತರ ಅವಳಿಗೆ ಉ[...] ಮಾಡಿಸಿ ಬಸ್ಸಿಗೆ ಹತ್ತಿಸಿ ಹಳ್ಳಿಗೆ ಕಳುಹಿಸಲಾಯಿತು[...]

ಆರು ತಿಂಗಳ ನಂತರ ಆ ಯುವತಿ ಸಾವಿತ್ರಿಯ[...] ಮನೆ ಹುಡುಕಿಕೊಂಡು ಬಂದು 'ಜೋರಾಗಿ ಅ[...] ಪ್ರಾರಂಭಿಸಿದಳು. ಹಳ್ಳಿಯಲ್ಲಿ ಅವಳಿಗೆ ಯಾರೂ [...] ಕೊಡಲಿಲ್ಲ, ಅವಳನ್ನು ದೇವಿಯಂತೆ ಕಾಣುತ್ತಿದ್ದ ಹಳ್ಳಿಯ[...] ಜಡೆ ತೆಗೆದ ಮೇಲೆ ರಾಕ್ಷಸಿಯಂತೆ ಕಾಣತೊಡಗಿದ[...] ಯಾರೂ ಹಣ ಕೊಡಲಿಲ್ಲ, ಮನೆಯೊಳಗೆ ಬಿಟ್ಟುಕೊಡ[...] ಹೊಲಗಳಲ್ಲಿ ಕೆಲಸಕ್ಕೆ ಸೇರಿಸಿಕೊಳ್ಳಲಿಲ್ಲ. ಏತ[...] ಅತ್ಯಾಚಾರಿಗಳ ಕಾಟ ಬೇರೆ!

»15

ಅಪ್ಪಿಕೊ ಅಮ್ಮನ ನಂತರ ಬಂದವಳೇ 'ಎತ್ತಿಕೋ' ಮಾ!

ಅದೆಷ್ಟೋ ಲಕ್ಷ ದೇವರುಗಳಿದ್ದರೂ ಹಿಂದೂಗಳಿಗೆ ...ನ್ನೂ ದೇವರುಗಳು ಬೇಕೇನೋ. ಆದಕ್ಕೆ ಅವರು ರೇಪಿಸ್ಟ್ ...ಸಾರಾಮ್‌ನನ್ನು ಬಾಪು ಎಂದು ಸ್ವೀಕರಿಸುತ್ತಾರೆ, ಕಳ್ಳ ...ಮದೇವನನ್ನು ಬಾಬಾ ಎಂದು ಪೂಜಿಸುತ್ತಾರೆ. ಇಂತಹ ...ದೇವಪುರುಷರು ಸಾಲದೆಂಬಂತೆ ಅಪ್ಪಿಕೋ ಹವ್ಯಾಸವನ್ನು ...ಹೊಂದಿರುವ ಅಮೃತಾಮಯಿಯನ್ನು ಅಮ್ಮಾ ಎಂದೂ, ...ರ್ಷ ಐವತ್ತು ದಾಟಿದ್ದರೂ ನೂತನ ವಧುವಿನಂತೆ ...ಅಲಂಕಾರ ಮಾಡಿಕೊಳ್ಳುವ ಸುಖ್ವಿಂದರ್ ಕೌರ್ ...ಎಂಬಾಕೆಯನ್ನು ರಾಧೆ ಮಾ ಎಂದೂ ಅಪ್ಪಿಕೊಳ್ಳುತ್ತಾರೆ. ...ಈಗ ರಾಧೆ ಮಾ ಎಂದೇ ಕುಖ್ಯಾತಿ ಪಡೆದಿರುವ ಸುಖ್ವಿಂದರ್ ...ಕೌರ್ ಎಂಬಾಕೆ ಸುದ್ದಿಯಲ್ಲಿದ್ದಾಳೆ.





ಈಕೆಯನ್ನು ಲಕ್ಷಾಂತರ ಜನರು ಹಿಂದೂ ...ದೇವಮಾನುಷಿ ಎಂದೂ, ದುರ್ಗೆಯ ಅವತಾರ ಎಂದೂ ...ಅಪ್ಪಿಕೊಂಡಿದ್ದಾರೆ ಎಂದು ಆಕೆಯ ವೆಬ್‌ಸೈಟ್ ಹೇಳುತ್ತದೆ. ...ಮಾಷೆ ಎಂದರೆ ವಾಸ್ತವವಾಗಿ ಈಕೆ ಹಿಂದೂ 'ಧರ್ಮ'ಕ್ಕೆ ...ಸೇರಿದವಳೇ ಅಲ್ಲ. ಮೂಲತಃ ಪಂಜಾಬ್ ರಾಜ್ಯದವಳಾದ ...ಸುಖ್ವಿಂದರ್ ಕೌರ್ ಸಿಖ್ ಧರ್ಮಕ್ಕೆ ಸೇರಿದವಳು!

ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಈ ಸುಖ್ವಿಂದರ್ ...ದೊರಾಂಗ್ಲ ಎಂಬ ಹಳ್ಳಿಯಲ್ಲಿ ತನ್ನ ಗಂಡ ಮತ್ತು ...ಮಕ್ಕಳೊಂದಿಗೆ ವಾಸವಿದ್ದಳು. ಗಂಡ ನಡೆಸುತ್ತಿದ್ದ ಸಿಹಿ ...ತಿನಿಸುಗಳ ವ್ಯವಹಾರದಿಂದ ಬರುವ ಆದಾಯ ...ಸಾಕಾಗುತ್ತಿರಲಿಲ್ಲವಾದ್ದರಿಂದ ಈ ಸುಖ್ವಿಂದರ್ ಚಿಕ್ಕಪುಟ್ಟ ...ಕೂಲಿಗೆ ಕೆಲಸ ಮಾಡುತ್ತಾ ಜೀವನ ಸಾಗಿಸುತ್ತಿದ್ದಳು. ...ಹೆಚ್ಚಿನ ಆದಾಯ ಅರಸಿ ಆಕೆಯ ಗಂಡ ಮೋಹನ್ ...ಸಿಂಗ್ ಗಲ್ಫ್ ದೇಶಕ್ಕೆ ಹೋದಾಗ ಈ ಸುಖ್ವಿಂದರ್ ...ಧರ್ಮ ಒಂದು ಲಾಭದಾಯಕ ದಂಧೆ ಎಂಬುದನ್ನು ...ಅರ್ಥಮಾಡಿಕೊಂಡಳು. ಆಗ ಈಕೆ ಎಡತಾಕಲಾರಂಭಿಸಿದ್ದು ...ಲೀಯ ಮಠಮಂದಿರಗಳನ್ನು. ಆಗೊಮ್ಮೆ ಈ ಸುಖ್ವಿಂದರ್ ...ತಾನು ದುರ್ಗಾ ಮಾತೆ ಎಂದು ಆರೋಪಿಸಿಕೊಂಡಾಗ ...ವಿಶ್ವ ಹಿಂದೂ ಪರಿಷತ್ ಈಕೆಯ ವಿರುದ್ಧ ಗಲಭೆ ಮಾಡಿತ್ತು ...ಆಗ ಈಕೆ ಕ್ಷಮೆ ಕೋರಿ ಬಚಾವಾಗಿದ್ದಳು.

ಹತ್ತನೆ ಕ್ಲಾಸ್ ತನಕ ಓದಿರುವ ಈ ಸುಖ್ವಿಂದರ್ ...ಯಾವಾಗ ಮುಂಬೈಗೆ ಬಂದಳೋ, ಅದು ಹೇಗೆ ಗುಪ್ತಾ ...ಎಂಬ ಮಾರ್ವಾಡಿ ಕುಟುಂಬದೊಂದಿಗೆ ಸಂಪರ್ಕ ...ಏರ್ಪಟ್ಟಿತೋ ಬಲ್ಲವರಿಲ್ಲ. ಆದರೆ ಅಂದಿನಿಂದ ಆ ...ಕುಟುಂಬದ ಸಂಪತ್ತು ಮತ್ತು ಸುಖ್ವಿಂದರ್‌ಳ ತಾಕತ್ತು ...ಎರಡೂ ಏರುತ್ತಲೇ ಬಂದಿದೆ.

ಅಮೃತಾಮಯಿಯದ್ದು 'ಅಪ್ಪಿ'ಕೋ ಸಿದ್ಧಾಂತವಾದರೆ ...ಈ ರಾಧೆ ಮಾಳದ್ದು 'ಎತ್ತು'ಕೋ ಸಿದ್ಧಾಂತ. ರಾಧೆಯ ...ಹಿಂಬಾಲಕರು ಆಕೆಯನ್ನು ಎತ್ತಿಕೊಂಡು ಮಕ್ಕಳನ್ನು ...ತೂಗಿಸುವಂತೆ ತೂಗಿಸುತ್ತಾರೆ. ಆಕೆಯನ್ನು ಎತ್ತಿಕೊಂಡು ...ತೂಗುವ ಅವಕಾಶ ಸಿಕ್ಕವರ ಸಮಸ್ಯೆಗಳೆಲ್ಲ ...ಬಗೆಹರಿಯುತ್ತವಂತೆ. ಅಂದಹಾಗೆ ಹೆಚ್ಚು ವಿದ್ಯಾಭ್ಯಾಸವನ್ನು ...ಪಡೆಯದಿರುವ, ಯಾವುದೇ ಧರ್ಮಗ್ರಂಥವನ್ನೂ ಅಭ್ಯಾಸ ...ಮಾಡಿರದ ರಾಧೆ ಮಾ ತನ್ನ ಬೆಂಬಲಿಗರಿಗೆ ಪ್ರವಚನಗಳನ್ನು ...ನೀಡುವುದಿಲ್ಲ, ಬದಲಾಗಿ ಆಕೆ ಒಂದು ಕೈಯಲ್ಲಿ ...ತ್ರಿಶೂಲವನ್ನು, ಇನ್ನೊಂದು ಕೈಯಲ್ಲಿ ಗುಲಾಬಿ ಹೂವನ್ನು ...ಹಿಡಿದು ಕುಣಿಯುತ್ತಾಳೆ! ಇಷ್ಟಬಂದಾಗ ಹಳೆ ಹಿಂದಿ ...ಸಿನಿಮಾದ ಲವ್ ಸಾಂಗ್‌ಗಳಿಗೂ ಮನಸ್ಸೋಇಚ್ಛೆ ಹೆಜ್ಜೆ ...ಹಾಕುತ್ತಾಳೆ!!

ಅಷ್ಟಕ್ಕೂ ಈ ರಾಧೆ ಮಾ ಕಾವಿ ಬಣ್ಣದ ಬಟ್ಟೆ ...ಧರಿಸುವುದಿಲ್ಲ, ಬದಲಾಗಿ ಆಕೆ ಇಷ್ಟಪಡುವುದು ಪಂಜಾಬಿ ...ವಧುಗಳು ಧರಿಸುವ ಕೆಂಪು ಬಣ್ಣದ ಉಡುಪುಗಳು. ...ಜೊತೆಗೆ ಮುಖದ ತುಂಬಾ ಮೇಕಪ್, ರಕ್ತದಂತೆ ಕಾಣಿಸುವ ...ಲಿಪ್‌ಸ್ಟಿಕ್, ಕುಂಕುಮ, ಲಕ್ಷಾಂತರ ಬೆಲೆ ಬಾಳುವ ...ಒಡವೆಗಳು ಈಕೆಗೆ ಅಚ್ಚುಮೆಚ್ಚು. ಈಕೆ ತನ್ನ ಅಭಿಮಾನಿಗಳ ...ಮುಂದೆ ಪ್ರತ್ಯಕ್ಷವಾಗುವುದೂ ಸಾಮಾನ್ಯ ರೀತಿಯಲ್ಲಲ್ಲ. ರಾಕ್‌ಸ್ಟಾರ್‌ಗಳು ಅಥವಾ ಸಿನಿಮಾ ನಟರು ಲೈವ್ ಶೋಗಳಲ್ಲಿ ಆಕಾಶದಿಂದ ಹಾರಿಬರುತ್ತಾರಲ್ಲ, ಹಾಗೆ ರಾಧೆ ಮಾ ಕೂಡ ಗ್ರಾಂಡ್ ಆಗಿ ಪ್ರತ್ಯಕ್ಷವಾಗುತ್ತಾಳೆ.

ಇಲ್ಲಿ ಕಳ್ಳ ರಾಘು ಸ್ವಾಮಿ ಕದ್ದುಮುಚ್ಚಿ ಮಹಿಳೆಯರ ಸಂಗ ಮಾಡುತ್ತಿದ್ದರೆ ರಾಧೆ ಮಾ ಹಾಗೆಲ್ಲ ಕಳ್ಳಾಟ ಮಾಡುವುದಿಲ್ಲ. ಆಕೆ 'ದೇವಮಾನುಷಿ' ಆಗಿದ್ದೂ ತನ್ನ ಗಂಡ, ಮಕ್ಕಳು, ಸೊಸೆ ಮತ್ತು ಮೊಮ್ಮಕ್ಕಳೊಂದಿಗೇ ಈಗಲೂ ಜೀವನ ನಡೆಸುತ್ತಿದ್ದಾಳೆ. ಆಕೆ ದುರ್ಗೆಯ ಅವತಾರವಾದರೂ ಸನ್ಯಾಸಿನಿ ಅಲ್ಲವೇ ಅಲ್ಲ.

ಅಂದಹಾಗೆ ಈ ರಾಧೆ ಮಾ ವಾಸಿಸುವುದು ಯಾವುದೋ ಬಂಗಲೆಯಲ್ಲಲ್ಲ, ಗುಹೆಯಲ್ಲಿ ಅಂದರೆ ಅಚ್ಚರಿ ಆಗಬಹುದು. ಆದರೆ ಅದು ಸತ್ಯ. ಗುಹೆ ಅಂದರೆ ಯಾವುದೋ ನಿರ್ಜನ ಪ್ರದೇಶದಲ್ಲಿರುವ ಗುಹೆ ಅಲ್ಲ. ಬದಲಾಗಿ ಮುಂಬೈನ ಬೊರಿವಲ್ಲಿ ಎಂಬ ಏರಿಯಾದಲ್ಲಿರುವ ಗುಪ್ತಾ ಕುಟುಂಬದ ಆರು ಅಂತಸ್ತಿನ ಕಟ್ಟಡದ ಮೇಲೆ ನಿರ್ಮಿಸಲಾಗಿರುವ ಆಧುನಿಕ ಗುಹೆಯೇ ಈ ದೇವಮಾನುಷಿಯ ವಾಸಸ್ಥಾನ.

"ಅಮ್ಮನನ್ನು ಎತ್ತಿಕೋ" ಎಂದು ತನ್ನ ಅಭಿಮಾನಿಗಳಿಗೆ ಹೇಳುವ ರಾಧೆ ಮಾ ಕೆಂಪು ಬಣ್ಣದ ಮಿನಿಸ್ಕರ್ಟ್ ತೊಟ್ಟು, ಅದರ ಜೊತೆಗೆ ಕೆಂಪು ಬೂಟ್ಸ್ ಮತ್ತು ಕ್ಯಾಪ್ ಹಾಕಿಕೊಂಡಿರುವ ಫೋಟೋ ಮತ್ತು ಆಕೆ ಹಿಂದಿ ಹಾಡಿಗೆ ಕುಣಿಯುತ್ತಿರುವ ವಿಡಿಯೋ ಈಗ ಅಂತರಜಾಲದಲ್ಲಿ ಬಹಳಷ್ಟು ಜನರಿಗೆ ಮನರಂಜನೆ ನೀಡುತ್ತಿವೆ.

ಎರಡು ದಶಕಗಳ ಹಿಂದೆ ಹಳ್ಳಿಯೊಂದರಲ್ಲಿ ಕಸೂತಿ ಮಾಡುತ್ತಿದ್ದ ಸುಖ್ವಿಂದರ್ ಇವತ್ತು ಕೋಟ್ಯಾಧಿಪತಿ. ಆಕೆ ಓಡಾಡುವುದು ಐಶಾರಾಮಿ ಕಾರ್‌ಗಳಲ್ಲಿ. ಆಕೆಯ ಲಕ್ಷಾಂತರ ಭಕ್ತರಲ್ಲಿ ಸಿನಿಮಾರಂಗದವರು, ರಾಜಕಾರಣಿಗಳು, ಉದ್ಯಮಿಗಳು ಇದ್ದಾರೆ. ಈ ರಾಧೆ ಮಾಳನ್ನು ಸಿಗಿದರೂ ನಾಲ್ಕು ಅಕ್ಷರಗಳ ಜ್ಞಾನ ಸಿಗಲಾರದು, ಆದರೂ ಆಕೆಗೆ ಭಕ್ತಿ ಮಾತ್ರವಲ್ಲ, ಅದರ ಜೊತೆಗೆ ಬಂಗಾರ, ಹಣ, ಆಸ್ತಿ ಎಲ್ಲವನ್ನೂ ನೀಡುವ ಪೆದ್ದರಿಗೆ ನಮ್ಮ ದೇಶದಲ್ಲಿ ಬರವಿಲ್ಲ ಎಂದರೆ ಪ್ರಜ್ಞಾವಂತರಿಗೆ ಗಾಬರಿ ಆಗುತ್ತದೆ.

ನಮ್ಮ ದೇಶದ ಜನರಿಗೆ ಏನಾಗಿದೆ? ಚಿಕ್ಕಪುಟ್ಟ ಮ್ಯಾಜಿಕ್ ಟ್ರಿಕ್‌ಗಳನ್ನು ಮಾಡುತ್ತಿದ್ದ ವ್ಯಕ್ತಿಗೆ ಸಾಯಿಬಾಬಾ ಎಂಬ ಪಟ್ಟಕಟ್ಟಿ ದೇವಸ್ಥಾನಗಳನ್ನೇ ನಿರ್ಮಿಸಿದ್ದಾರೆ. ಪೋಲಿ ನಿತ್ಯಾನಂದ ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದರೂ ನಮ್ಮ ಸಮಾಜದಲ್ಲಿ ಬುದ್ಧಿವಂತರು ಎಂದು ಹೇಳಿಕೊಳ್ಳುವ ಮಹಿಳೆಯರು ಆತನ ಪಾದಕ್ಕೆ ಎರಗುತ್ತಾರೆ. ಸಗಣಿ ಸ್ವಾಮಿ ರಾಘುನ ವೀರ್ಯ ಮಹಿಳೆಯ ವಸ್ತ್ರದಲ್ಲಿ ಇದ್ದದ್ದು ಪಕ್ಕಾ ಆದರೂ ನಮ್ಮ ಪೊಲೀಸರು ಆತನ ವಿರುದ್ಧ ಎಫ್‌ಐಆರ್ ದಾಖಲಿಸಲು ಮೀನಾಮೇಷ ಎಣಿಸುತ್ತಾರೆ. ವೈಯ್ಯಾರಿ ರವಿಶಂಕರನನ್ನು ಶಾಂತಿಧೂತ ಎಂದು ಮಾಧ್ಯಮಗಳು ಹೊಗಳುತ್ತವೆ. ಅಮೃತಾಮಯಿ ಎಂಬ ಹೆಂಗಸಿನ ಅಪ್ಪುಗೆಗೆ ಹಾತೊರೆಯುತ್ತಾರೆ. ತಾನು ದುರ್ಗೆಯ ಅವತಾರ ಎಂದು ಹೇಳುವ ಸುಖ್ವಿಂದರ್ ಕೌರ್‌ಳನ್ನು ನಂಬುತ್ತಾರೆ. ಇದೆಲ್ಲದರ ಜೊತೆ ಪ್ರತಿದಿನ ವಾಸ್ತು, ಜ್ಯೋತಿಷ್ಯ, ಗುಡಿ, ದೇವಸ್ಥಾನ, ಪೂಜೆ, ಹೋಮ, ಹವನ ಎಂದೆಲ್ಲ ಸಾಯುತ್ತಿರುತ್ತಾರೆ.

ನಿವೃತ್ತ ನ್ಯಾಯಮೂರ್ತಿ ಮಾರ್ಕಂಡೇಯ ಕಾಟ್ಜು ಅವರು ಹೇಳಿದಂತೆ ನಿಜವಾಗಲೂ ನಮ್ಮ ದೇಶದ ಶೇ. 99 ಜನ 'ಈಡಿಯಟ್'ಗಳು.

* * *

ಆತ ಪೊಲೀಸ್ ಇನ್ಸ್‌ಪೆಕ್ಟರ್, ಹೆಸರು ಇಂದ್ರ ಸೇನ್. ನಾಪತ್ತೆಯಾಗಿರುವ ಯುವಕ ಅರ್ಜುನ್ ಕುರಿತು ಮಾಹಿತಿ ಸಂಗ್ರಹಿಸಲು ಕಲಾವಿದನಾಗಿರುವ ಗೌತಮನ ಮನೆಗೆ ಬರುತ್ತಾನೆ. ಬಾಗಿಲು ತೆರೆಯುವ ಮಹಿಳೆ ಅಪ್ರತಿಮ ಸುಂದರಿ. ಆಕೆಯನ್ನು ಮನೆಯೊಳಗೆ ಹಿಂಬಾಲಿಸುವ ಇಂದ್ರನಿಗೆ ಆಕೆಯ ಮೇಲಿಂದ ಕಣ್ಣು ತೆಗೆಯುವುದೇ ಕಷ್ಟವಾಗುತ್ತದೆ.

ಅವರಿಬ್ಬರೂ ಮನೆಯ ಹಾಲ್ ಹೊಕ್ಕಾಗ ಪಕ್ಕದ ಟೇಬಲ್ ಮೇಲಿರುವ ಬೊಂಬೆಗಳಲ್ಲಿ ಕೆಲವು ಇದ್ದಕ್ಕಿದ್ದಂತೆ ಕೆಳಗೆ ಬೀಳುತ್ತವೆ. ಆಗ ಆ ಸುಂದರಿ "ಇದೊಂದು ವಿಚಿತ್ರ. ಹೊಸಬರು ಮನೆಗೆ ಬಂದರೆ ಈ ಬೊಂಬೆಗಳು ನೆಲಕ್ಕೆ ಬೀಳುತ್ತವೆ" ಎಂದು ಹೇಳಿ ಗೌತಮನನ್ನು ಕರೆಯಲು ಹೋಗುತ್ತಾಳೆ. ಆಗ ಆ ಬೊಂಬೆಗಳಲ್ಲಿ ಒಂದು ತಾನು ಹುಡುಕುತ್ತಿರುವ ಅರ್ಜುನನನ್ನೇ ಹೋಲುವುದನ್ನು ಇನ್ಸ್‌ಪೆಕ್ಟರ್ ಗಮನಿಸುತ್ತಾನೆ.

ಗೌತಮ ಮುದುಕ. ಆತ ಹಾಲ್‌ಗೆ ಬಂದು "ಯಾಕೆ ಹೀಗೆ ಈ ಬೊಂಬೆಗಳು ಬೀಳುತ್ತವೋ ಗೊತ್ತಿಲ್ಲ" ಎಂದಾಗ ಇಂದ್ರ "ಹೌದು ನಿಮ್ಮ ಮಗಳೂ ಅದನ್ನೇ ಹೇಳುತ್ತಿದ್ದಳು" ಎನ್ನುತ್ತಾನೆ. ಅದನ್ನು ಕೇಳಿ ಅಚ್ಚರಿಗೊಳ್ಳುವ ಗೌತಮ "ನನ್ನ ಮಗಳಾ?" ಎನ್ನುತ್ತಾನೆ. ಅದೇ ಹೊತ್ತಿಗೆ ಆ ಮಹಿಳೆ ಚಹಾ ತರುತ್ತಾಳೆ. "ಇವಳಾ? ನೀವು ತಪ್ಪು ತಿಳಿದಿದ್ದೀರಿ. ಈಕೆ ನನ್ನ ಅರ್ಧಾಂಗಿನಿ" ಎಂದು ಮುದಿ ಗೌತಮ ನಗುತ್ತಾನೆ. ಅಷ್ಟೇ ಅಲ್ಲ, "ಈ ಮುದಿಯನ ಜೊತೆ ಯಾಕಿದ್ದೀಯ. ನಿನ್ನ ವಯಸ್ಸಿನವರ ಜೊತೆ ನೀನು ಇರಬೇಕು ಎಂದು ಎಷ್ಟು ಹೇಳಿದರೂ ಇವಳು ಕೇಳುವುದಿಲ್ಲ" ಎಂದು ಗೌತಮ ತಮಾಷೆ ಮಾಡುತ್ತಾನೆ. ಚಹಾ ಕೊಡುವಾಗ ಆ ಮಹಿಳೆ ಇಂದ್ರನ ಕೈಯನ್ನು ಸ್ಪರ್ಶಿಸುತ್ತಾಳೆ. ಆಮೇಲೆ ಆಕೆ ನೆಲದ ಮೇಲೆ ಕೂರುವಾಗಲೂ ಆತನ ಕಾಲಿಗೆ ತನ್ನ ಕಾಲನ್ನು ಆಕಸ್ಮಿಕ ಎನ್ನುವಂತೆ ತಾಗಿಸುತ್ತಾಳೆ.

ತಾನು ಬಂದ ವಿಚಾರವನ್ನು ಇಂದ್ರ ಪ್ರಸ್ತಾಪಿಸಿದಾಗ ಆಕೆ "ನೀವಿಬ್ಬರೂ ಮಾತಾಡಿ, ನಾನು ಮೇಲಿರುತ್ತೇನೆ" ಎಂದು ಹೊರಡುತ್ತಾಳೆ. ಆಕೆ ಹೋಗುವಾಗ ಇಂದ್ರ ಆಕೆಯನ್ನೇ ನೋಡುತ್ತಿರುತ್ತಾನೆ. ಅದನ್ನು ಗಮನಿಸುವ ಗೌತಮ "ತುಂಬಾ ಸುಂದರವಾಗಿದ್ದಾಳಲ್ಲಾ?" ಎಂದು ಪ್ರಶ್ನಿಸುತ್ತಾನೆ.

ನಾಪತ್ತೆಯಾಗಿರುವ ಅರ್ಜುನ್ ಬಗ್ಗೆ ಇಂದ್ರಾ ಕೇಳಿದಾಗ, "ಹೌದು, ಈ ಹುಡುಗ ನನ್ನ ಕಲಾಕೃತಿಗೆ ರೂಪದರ್ಶಿಯಾಗಿ ಇಲ್ಲಿಗೆ ಬಂದಿದ್ದ. ಆತ ಅರ್ಜೆಂಟಾಗಿ ಹಣ ಬೇಕು ಅಂದ. ಹಾ... ಹೀಗೆ ಆಗಬಹುದು ಎಂದು ನಾನು ಹೆದರಿದ್ದೆ" ಎನ್ನುತ್ತಾನೆ.

"ಏನು?"

"ನಾನು ಹೇಳಿದರೆ ನೀವು ನಂಬುತ್ತೀರೋ ಇಲ್ಲವೋ?"


"ಹೇಳಿ."

ಗೌತಮ ಎದ್ದು ಗಾಜಿನ ಪೆಟ್ಟಿಗೆಯಲ್ಲಿಟ್ಟಿರುವ ಕಲ್ಲೊಂದನ್ನು ತೆಗೆದುಕೊಳ್ಳುತ್ತಾ "ಅವತ್ತು ಇವನು ನಮ್ಮ ಮನೆಗೆ ಬಂದಾಗ ಯಾರಿಂದಲೋ ತಲೆತಪ್ಪಿಸಿಕೊಂಡವನಂತೆ ವರ್ತಿಸುತ್ತಿದ್ದ. ಆಗ ನಾನು ಅವನಿಗೆ ಈ ಕಲ್ಲಿಗೆ ಇರುವ ಮಾಂತ್ರಿಕಶಕ್ತಿಯ ಬಗ್ಗೆ ಹೇಳಿದೆ" ಎನ್ನುತ್ತಾನೆ. ಅದೇ ಹೊತ್ತಿಗೆ ಆತನ ಪತ್ನಿ ಅಲ್ಲೇ ಬಿಟ್ಟುಹೋಗಿರುವ ಮೊಬೈಲಿಗೆ ಕರೆಯೊಂದು ಬರುತ್ತದೆ. "ಈ ಹುಡುಗಿ ಯಾವಾಗಲೂ ತನ್ನ ಮೊಬೈಲ್ ಬಿಟ್ಟು ಹೋಗುತ್ತಿರುತ್ತಾಳೆ" ಎಂದು ಗೊಣಗುತ್ತಾನೆ ಗೌತಮ.

ಆಗ ಇಂದ್ರ ತನ್ನ ಮುಂದಿರುವ ಕಲ್ಲನ್ನು ಮುಟ್ಟಲು ಹೋದಾಗ ಗೌತಮ "ಹುಷಾರ್. ಈ ಕಲ್ಲಿಗೆ ಮಾಂತ್ರಿಕ ಶಕ್ತಿ ಇದೆ. ನಿನ್ನ ಹೆಸರನ್ನೇ ಹೊಂದಿದ್ದ ಇಂದ್ರ ದೇವರ ಹತ್ತಿರವೂ ಇಂತಹದ್ದೇ ಮಾಂತ್ರಿಕ ಕಲ್ಲಿತ್ತು. ಆ ಕಲ್ಲಿನ ನೆರವಿನಿಂದ ಇಂದ್ರ ಬೇರೆಯವರ ರೂಪವನ್ನು ಪಡೆದು ತನ್ನ ತೀಟೆಗಳನ್ನು ತೀರಿಸಿಕೊಳ್ಳುತ್ತಿದ್ದ."

"ಹಹಹ. ಈ ಕಲ್ಲಿಗೂ ಅಂತಹ ಶಕ್ತಿ ಇದೆ ಎನ್ನುತ್ತೀರಾ?"

"ನಾನು ಹೇಳಿದರೆ ನೀವು ನಂಬುವುದಿಲ್ಲ ಅಂತ ಮೊದಲೆ ಹೇಳಿದೆನಲ್ಲ?"



• ಗೌರಿ ಲಂಕೇಶ್
editorlankesh@gmail.com

"ಹೋಗಲಿ, ಈ ಕಲ್ಲಿಗೂ ನಾಪತ್ತೆಯಾಗಿರುವ ಯುವಕನಿಗೂ ಏನು ಸಂಬಂಧ?"

"ಅವತ್ತು ಅರ್ಜುನ್ ಈ ಕಲ್ಲನ್ನು ಕೊಡಿ ಎಂದು ಕೇಳಿದ. ನಾನು ನಿರಾಕರಿಸಿದೆ. ಅದೇ ಹೊತ್ತಿಗೆ ಈಗಿನಂತೆ ನನ್ನ ಹೆಂಡತಿಯ ಮೊಬೈಲಿಗೆ ಕರೆ ಬಂತು. ನಾನು ಮೊಬೈಲನ್ನು ಅವಳಿಗೆ ಕೊಟ್ಟು ಬರುವ ಹೊತ್ತಿಗೆ ಅರ್ಜುನ್ ನಾಪತ್ತೆಯಾಗಿದ್ದ. ಕಲ್ಲು ಕೆಳಗೆ ಬಿದ್ದಿತ್ತು" ಎಂದು ಗೌತಮ ವಿವರಿಸುತ್ತಾನೆ.

ಇಂದ್ರನಿಗೆ ರೇಗುತ್ತದೆ. "ಮಾಂತ್ರಿಕ ಕಲ್ಲಿನ ಕತೆ ಹೇಳುತ್ತೀರಾ? ನಡೀರಿ ಪೊಲೀಸ್ ಠಾಣೆಗೆ ನಿಮ್ಮನ್ನು ಅರೆಸ್ಟ್ ಮಾಡುತ್ತಿದ್ದೇನೆ" ಎಂದು ಗದರಿಸುತ್ತಾನೆ.


"ನೀವು ನನ್ನನ್ನು ನಂಬಲ್ಲ ಅಲ್ಲವಾ? ಬೇಕಿದ್ದರೆ ನೀವೇ ಪರೀಕ್ಷಿಸಿ. ಈ ಕಲ್ಲನ್ನು ಹಿಡಿದು ನೀವು ನನ್ನ ರೂಪವನ್ನು ಪಡೆದಿದ್ದೀರಿ ಎಂದುಕೊಂಡು ಮೇಲಿನ ಕೊಠಡಿಯಲ್ಲಿರುವ ನಮ್ಮ ಹೆಂಡತಿಗೆ ಅವಳ ಮೊಬೈಲ್ ಕೊಟ್ಟು ಬನ್ನಿ" ಎನ್ನುತ್ತಾನೆ ಗೌತಮ.


ಇಂದ್ರ ಹಾಗೆಯೇ ಮಾಡುತ್ತಾನೆ. ಸುಂದರಿ ತನ್ನ ಗಂಡ ಗೌತಮನೇ ಬಂದ ಎಂದು ಅವನನ್ನು ಮಂಚದ ಮೇಲೆ ಎಳೆದು "ಅದೆಷ್ಟು ಹೊತ್ತು ಆ ಪೊಲೀಸಪ್ಪನ ಜೊತೆ ಮಾತನಾಡುತ್ತಿದ್ದೀಯ. ಬೇಗ ಅವನನ್ನು ಕಳುಹಿಸಿ ಬಾ" ಎನ್ನುತ್ತಾಳೆ. ಇಂದ್ರ ಎದುರಿಗೆ ಇರುವ ಕನ್ನಡಿಯಲ್ಲಿ ನೋಡಿದಾಗ ಆತ ನಿಜವಾಗಲೂ ಗೌತಮನ ರೂಪ ಪಡೆದಿರುವುದು ಕಾಣಿಸುತ್ತದೆ. ಕ್ಷಣ ಬೆಚ್ಚುವ ಇಂದ್ರ ಕೊಠಡಿಯಿಂದ ಹೊರ ನಡೆಯುತ್ತಾನೆ. ಆದರೆ ಅಷ್ಟು ಹೊತ್ತಿಗೆ ಕಾಮ ಅವನನ್ನು ಆವರಿಸಿರುತ್ತದೆ. ತಡೆಯಲಾಗದೆ ಆತ ಕೊಠಡಿಗೆ ಹಿಂದಿರುಗಿ ಆಕೆಯನ್ನು ಆಲಂಗಿಸುತ್ತಾನೆ.

.... ಇಂದ್ರ ಕಲ್ಲಾಗುತ್ತಾನೆ.


ಇದು ಅಹಲ್ಯೆಯ ಕತೆ. ಆದರೆ ರಾಮಾಯಣದಲ್ಲಿ ಆಗುವಂತೆ ಇಲ್ಲಿ ಅಹಲ್ಯೆ ಕಲ್ಲಾಗುವ ಬದಲು ಇಂದ್ರನೇ ಕಲ್ಲಾಗುತ್ತಾನೆ. ಇದನ್ನು ಕಿರುಚಿತ್ರದ ಮೂಲಕ ಹೇಳಿರುವವರು ಖ್ಯಾತ ನಿರ್ದೇಶಕ ಸುಜೊಯ್ ಘೋಷ್. ಯೂಟ್ಯೂಬ್‌ನಲ್ಲಿ 'ಸುಜೊಯ್ ಘೋಷ್ ಅಹಲ್ಯ' ಎಂದು ಹುಡುಕಿದರೆ ಸುಲಭವಾಗಿ ಸಿಗುತ್ತದೆ.

14 ನಿಮಿಷಗಳ ಈ ಅದ್ಭುತ ಕಿರುಚಿತ್ರ ಅಹಲ್ಯೆಯ ವೃತ್ತಾಂತವನ್ನು ಮಹಿಳಾ ದೃಷ್ಟಿಕೋನದಲ್ಲಿ ನಿರೂಪಿಸಿದೆ. ಅದನ್ನು ನೋಡಿ ಆನಂದಿಸಿ. ●





ಬನ್ನಂಜೆ ಹೆಡೆಮುರಿ ರೆಡಿ! ಬಿಆರ್ ಕಂಪೆನಿ ಬಂದ್


ಬನ್ನಂಜೆ ರಾಜ


ಈಗ ಹೀಗಿದ್ದಾನೆ ಬನ್ನಂಜೆ


ಆಗಸ್ಟ್ 15ರ ಸ್ವಾತಂತ್ರ್ಯ ದಿನಾಚರಣೆಗೆ ವಿಚಿತ್ರ ಕಂಪೆನಿಯೊಂದು 'ಬಂದ್' ಆಗಿ ಬರೋಬ್ಬರಿ ಐದು ತಿಂಗಳಾದಂತಾಗುತ್ತದೆ.

ಅದು ಅಂತಿಂಥಾ ಕಂಪೆನಿಯಲ್ಲ, ಡಿ ಕಂಪೆನಿ, ಸಿಆರ್ ಕಾರ್ಪೊರೇಷನ್, ಎಮ್ಮಾರ್ ಅಸೋಸಿಯೇಟ್ಸ್ ಇತ್ಯಾದಿ ಹೆಸರಲ್ಲಿ ಭೂಗತ ಕೂಟಗಳಿರುವಂತೆ ನಮ್ಮ ಕರಾವಳಿಯನ್ನಾಳಲು ಹೊರಟಿದ್ದು ಬಿಆರ್ ಕಂಪೆನಿಯ ಸಿಆರ್ ಕಾರ್ಪೊರೇಷನ್ ಎಂದರೆ ಛೋಟಾ ರಾಜನ್ ಆಧಿಪತ್ಯದ ಹಂತಕ ಜಾಲವೆಂದು ಬಿಡಿಸಿ ಬೇರೆ ಹೇಳಬೇಕಾಗಿಲ್ಲ!

ಆದರೆ ಬಿ.ಆರ್. ಕಂಪೆನಿಯ ವೈಶಿಷ್ಟ್ಯವೇ ಭಯಾನಕ. ಬೇರೊಬ್ಬ ಡಾನ್ ಹತ್ತೋ ಇಪ್ಪತ್ತೋ ಮೂವತ್ತೋ ವರ್ಷಗಳ ದೀರ್ಘಾವಧಿಯಲ್ಲಿ ಹರಿಸಿದ ರಕ್ತ ಮತ್ತು ಉರುಳಿಸಿದ ತಲೆಗಳ ಪ್ರಮಾಣವನ್ನದು ಕೇವಲ ಐದು ವರ್ಷದಲ್ಲಿ ಹರಿಸಿ-ಉರುಳಿಸಬೇಕಾಯ್ತು. ಅಗದಿ ಕಮ್ಮಿ ರೇಟಿಗೆ. ದಾವೂದ್, ರಾಜನ್, ಶಕೀಲ್ ಇತ್ಯಾದಿಗಳೆಲ್ಲ ಶೂಟರ್ ಒಬ್ಬನಿಗೆ ತಲೆಯೊಂದಕ್ಕೆ ನಿಗದಿಪಡಿಸುವ ಮೊತ್ತ 50 ಲಕ್ಷದಿಂದ ಒಂದು ಕೋಟಿಯಾದರೆ ಬಿಆರ್ ದೊರೆ ಐದೋ ಹತ್ತೋ ಹೆಚ್ಚೆಂದರೆ ಇಪ್ಪತ್ತೈದೋ ಲಕ್ಷ ಕೊಡಬಲ್ಲ. ಅಮ್ಮಮ್ಮಾ ಎಂದರೂ ಯಾವುದೇ ಕಾರಣಕ್ಕದು ಐವತ್ತು ಲಕ್ಷ ದಾಟುವುದಿಲ್ಲ, ಪೂರ್ತಿ ದುಡ್ಡೇನಿದ್ದರೂ ಕೆಲಸದ ನಂತರವೆ. ಮುಂಗಡವಾಗಿ ಹೆಚ್ಚೆಂದರೆ ಐದೋ ಆರೋ ಸಿಕ್ಕರೆ ಅದೇ ಹೆಚ್ಚು.

ಏಕೆಂದರೆ ಬಿ.ಆರ್‌ನ ಮಾರುಕಟ್ಟೆ ಚಿಕ್ಕದು. ಉಡುಪಿ, ಮಂಗಳೂರು, ತೀರ ಇತ್ತೀಚೆಗೆ ಕಾರವಾರ. ಅಷ್ಟಕ್ಕೇ ತೃಪ್ತನಾಗಿದ್ದರೆ ತಾಪತ್ರಯವಿರುತ್ತಿರಲಿಲ್ಲ, ದುಬೈಗೆ ಕೈಯಿಟ್ಟ. ದುಬೈ ಕಂಪನಿಯನ್ನೇ ನುಂಗಿಹಾಕಿದೆ. ಹತ್ತೊಂಬತ್ತು ವರ್ಷಗಳ ಸುದೀರ್ಘ ರಕ್ತಗಾಥೆ ಇನ್ನೇನು ಬನ್ನಂಜೆ ಭಾರತಕ್ಕೆ ಹೆಡೆಮುರಿ ಕಟ್ಟುವುದಷ್ಟೇ ಬಾಕಿ ಉಳಿದಿದೆ. ಆಗಸ್ಟ್ 15ರ ಸ್ವಾತಂತ್ರ್ಯ ದಿನಾಚರಣೆಯನ್ನೇ ಕಾಯುತ್ತಿರಬೇಕು. ಬೆಂಗಳೂರು ಪಶ್ಚಿಮದ ಹೆಚ್ಚುವರಿ ಪೊಲೀಸ್ ಕಮೀಷನರ್ ಪ್ರತಾಪ್ ರೆಡ್ಡಿ ಅಂಥಾ ಚಂದಪ್ಪ ಹರಿಜನನನ್ನೇ ಬಿಟ್ಟವರಲ್ಲ, ಇನ್ನು ಬನ್ನಂಜೆ ರಾಜ ಪ್ರಪಂಚದ ಅದ್ಯಾವ ಹುತ್ತದಲ್ಲಿಡಗಿದರೇನಂತೆ-

48 ಕೇಸ್


ಸದಾನಂದಗೌಡ

ದಾವೂದ್, ರಾಜನ್‌ರಂಥ ಮುಂಬಯಿ ಡಾನ್‌ಗಳಂತಾಗದೇ ಹೋದರೂ ಕನಿಷ್ಠ ರೈನಂತೆ ಕರ್ನಾಟಕದ ಕರಾವಳಿಯನ್ನಾದರೂ ಆಳಬೇಕೆಂಬ ಹುಚ್ಚಿಗೆ ಬಿದ್ದೇ ಕೊಲ್ಲಲು ನಿಂತವನು ಬನ್ನಂಜೆ ರಾಜ. 1991ರಲ್ಲಿ ಶಿಕ್ಷಕ ಕುಶಾಲ ಶೆಟ್ಟಿಯನ್ನು ಕೊಂದ. ಪ್ರದೀಪ್ ಪುಟ್ಟ ಎಂಬ ತನ್ನ ಹಿತೈಷಿಯ ಹೊಟ್ಟೆಗೇ ಚಾಕು ಹಾಕಿದ. 1997ರ ಜುಲೈ 1ರಂದು ಬನಶಂಕರಿಯ ನಡುರಸ್ತೆಯಲ್ಲೇ ಶ್ರೀಧರ್ ಎಂದು ತಪ್ಪಾಗಿ ಭಾವಿಸಿ ಅಮಾಯಕ ಸೀನನ್ನು ಭಯಾನಕವಾಗಿ ಗುಂಡಿಟ್ಟು ಕೊಂದ.

ಬೆಂಗಳೂರಿಗೆ ಗನ್ನು ರಿವಾಲ್ವರನ್ನು ಪರಿಚಯಿಸಿದ್ದು ರೈಯೇ ಆದರೂ ಅದನ್ನು ಬೀದಿಗೆ ತಂದವನು ಬನ್ನಂಜೆ ರಾಜ. ಹಾಡುಹಗಲಲ್ಲೇ ಕದಿರೇನಹಳ್ಳಿ ಕ್ರಾಸ್‌ನಲ್ಲಿ ಕಿಕ್ಕಿರಿದ ಟ್ರಾಫಿಕ್ ನಡುವೆ ಬಚ್ಚನ್ ಕೂತಿದ್ದ ಕಾರಿನ ಚಾಲಕ ಸೀನನನ್ನು ಇನ್ನೊಂದು ಕಾರಿನಲ್ಲಿ ಅಡ್ಡಗಟ್ಟಿ ಆತ ಕೊಂದ ರೀತಿಯಿತ್ತಲ್ಲ, ಅದು ಬೆಂಗಳೂರು ಎಂದೂ ಮರೆಯಲಾಗದ ಭೀಭತ್ಸ. ಅವತ್ತು ದೇಶಬಿಟ್ಟು ದುಬೈ ಸೇರಿಕೊಂಡವನು ತದನಂತರ ಉರುಳಿಸಿದ ತಲೆಗಳೇನು ಕಮ್ಮಿಯಾ? ದುಬೈನ ಪಾತಕಿ ಕೊರಗ ವಿಶ್ವನಾಥ ಶೆಟ್ಟಿಯ ನೆರಳಿಗೆ ಬಂದವನು ದುರ್ಗಾ ಟ್ರಾವಲ್ಸ್ ಧಣಿ ಉಪಾಧ್ಯಾಯ ಭಟ್‌ರನ್ನು ಕೊಲ್ಲಿಸಿದ. ಕರಾವಳಿಯ ಒಬ್ಬೊಬ್ಬರೇ ಉದ್ಯಮಿಗಳನ್ನಾಯ್ದು ಮುಂಬಯಿ ಮಾದರಿಯಲ್ಲಿ ನಡುರಸ್ತೆ ಶೂಟೌಟ್ ಮಾಡಿಸಿದ. ಯಾವ ತಪ್ಪನ್ನೂ ಮಾಡದೆ ತಾನು ಕೇಳಿದಷ್ಟು ರೊಕ್ಕ ಬಿಚ್ಚಲಿಲ್ಲ ಎಂಬ ಒಂದೇ ಕಾರಣಕ್ಕೆ ಅಂಕೋಲದ ಸಹಕಾರಿ ಧುರೀಣ, ಬಡವರ ಬಂಧು ಎಂದೇ ಚಾಲ್ತಿಯಲ್ಲಿದ್ದ ಆರ್.ಎನ್. ನಾಯಕ್‌ರನ್ನು ಆತ ಕೊಲ್ಲಿಸಿದ ರೀತಿಯೇ ಭಯಾನ... 1991ರಲ್ಲಿ ಕೊಕ್ಕಣಿ ಕುಶಾಲಶೆಟ್ಟಿ, 1995ರಲ್ಲಿ ಪಕ... ದೇವದಾಸ್ ಶೆಟ್ಟಿ....

ಈತನಕ 48 ಕ್ರಿಮಿನಲ್ ಪ್ರಕರಣಗಳು, ಈ ಪ... ಐದು ಹತ್ಯೆ ಎರಡು ಡಜನ್ ಕೊಲೆ ಯತ್ನ, ಇಪ್ಪತ್ತ... ಅಧಿಕ ಸುಲಿಗೆಗಳು, ಬ್ಲ್ಯಾಕ್‌ಮೇಲ್, ಕೊಲೆ ಬೆದರಿ... ಬಾಡಿಗೆ ಹಂತಕರನ್ನು ಛೂಬಿಟ್ಟು ಕೊಲ್ಲಿಸಿದ್ದು ಒಂ... ಎರಡಾ?

ಬೆಂಗಳೂರಿನ ಜೆ.ಜೆ.ನಗರ, ಬನಶಂಕ... ಮೈಕೋಲೇಔಟ್, ಉಪ್ಪಾರಪೇಟೆ ಪೊಲೀಸ್ ಠಾಣೆಗಳಿ... ಹಿಡಿದು ಉತ್ತರ ಪ್ರದೇಶದ ತಿವಾರಿಪುರ ಪೊಲೀಸ್ ಠಾ... ಕೇರಳದ ಕೊಟ್ಟಾಯಂನ ಕರಕಚಿಲ್ಲಾ ಪೊಲೀಸ್ ಠಾಣೆಗ... 2013ರಲ್ಲಿ ಆತನ ವಿರುದ್ಧ ದಾಖಲಾದ ಕ್ರಿಮಿನ... ಕೇಸುಗಳು ಬಿ.ಆರ್. ಕಂಪೆನಿಯ ರಕ್ತ ರಾಜ್ಯದ ವಿಸ... ಮತ್ತು ಭಯಾನಕತೆಗೆ ನಿದರ್ಶನಗಳಷ್ಟೆ.

ಇದೆಲ್ಲವನ್ನೂ ದುಬೈನಲ್ಲಿದ್ದುಕೊಂಡೇ ಮಾಡಿಸುತ್ತಿ... ಬನ್ನಂಜೆ ಮೊದಲ ಬಾರಿಗೆ ದುಬೈ ಪೊಲೀಸರ ಕಣ್... ಬಿದ್ದದ್ದು 2009ರಲ್ಲಿ.

ಹೊಕ್ವಾಡಿ ಪ್ರವೀಣ್

ಸಿಬಿಐ, ರಾ ಅಧಿಕಾರಿಗಳನ್ನೂ ಯಾಮಾರಿಸಿ ದು... ಪೊಲೀಸರಿಂದ ಬಚಾವಾದವನು ಈ ಬಾರಿ ತಾಂತ್ರಿಕವಾ... ಮತ್ತಷ್ಟು ಪ್ರಾಬಲ್ಯ ಸಾಧಿಸಿದ. ಇವತ್ತಿಗೂ ರಾಜಶಾಹಿ... ಆಳ್ವಿಕೆಗೊಳಪಟ್ಟ ಆಫ್ರಿಕಾದ ಯಾವುದೋ ಮೂಲೆಯ... ಮೊರಾಕ್ಕೊ ಎಂಬ ಪುಟ್ಟ ದೇಶ ಆತನ ಎಲ್ಲಾ ಕಾರಸ್ಥಾನಗ... ಹೇಳಿ ಮಾಡಿಸಿದಂತಿತ್ತು. ದುಬೈ ಮತ್ತು ಭಾರತದ ನಡು... ಇರುವಂತೆ ಅಪರಾಧಿಗಳ ಹಸ್ತಾಂತರದ ಕರಾ... ಮೊರಾಕ್ಕೋದ ಮಟ್ಟಿಗಿಲ್ಲ. ಇಂಥಾದ್ದೊಂದ... ಅಂತಾರಾಷ್ಟ್ರೀಯ ಅನುಕೂಲ ಕಲ್ಪಿಸಿಕೊಂಡೇ ಮೊರಾಕ್ಕೊ... ಪ್ರಸಿದ್ಧ ಪ್ರವಾಸಿ ತಾಣವಾದ ಕಾಸಾಬ್ಲಾಂಕಾ ನಗರ ಹೊ... ಕೂತ ಬನ್ನಂಜೆ ತನ್ನ ಹೆಸರು, ಚಹರೆ, ಪಾಸ್‌ಪೋರ್ಟ್...

ಮೊರಾಕ್ಕೋ ದೊರೆ ಮತ್ತು ಒಂದು ಕ್ವಿಂಟಾಲ್ ಫ್ರೆಂಚ್ ದಾಖಲೆಗಳು

ಬನ್ನಂಜೆ ಬಂಧಿತನಾಗಿದ್ದು ಫೆಬ್ರವರಿ ಹದಿನೈದಕ್ಕಾದರೂ ಆತನನ್ನು ಭಾರತಕ್ಕೊಪ್ಪಿಸಲು ಮೊರಾಕ್ಕೋ ಸರ್ಕಾರ ಆರು ತಿಂಗಳುಗಳ ಕಾಲ ಕಾಯಿಸಿದ್ದೇಕೆ?


ಮೊರಾಕ್ಕೋ ದೊರೆ ಆರನೇ ಮೊಹಮ್ಮದ್


ಇದು ಮೊರಾಕ್ಕೋ ರಾಜಶಾಹಿಯ ಇಸ್ಲಾಮಿಕ್ ಕಟ್ಟಳೆಗಳ ಪರಿಣಾಮ. ಉತ್ತರ ಆಫ್ರಿಕಾದ ರಣ ಬೆಟ್ಟಗುಡ್ಡಗಳಿಂದಾವೃತ ಮೊರಾಕ್ಕೋದ ಬಹುಭಾಗ ಮರುಭೂಮಿ. ಯಾವತ್ತಿಗೂ ರಣಬಿಸಿಲು. ಬಹುತೇಕ ಸುನ್ನಿ ಮುಸ್ಲಿಮರ ಬುಡಕಟ್ಟು ಸಂಪ್ರದಾಯಗಳ ಮೊರಾಕ್ಕೋದ ಅರೇಬಿಕ್ ಹೆಸರು 'ಅಲ್ ಮಮ್ಲಾಖಾ ಅಲ್ ಮಗ್ರೀಬಿಯಾ.' ರಬತ್ ಅದರ ರಾಜಧಾನಿಯಾದರೂ ಪ್ರವಾಸಿತಾಣವಾದ ಕಾಸಾಬ್ಲಾಂಕಾ ಮೋಜುಮಸ್ತಿಯ ಕಾರಣಕ್ಕೆ ವಿಶ್ವವ್ಯಾಪಿ ಖ್ಯಾತಿ ಗಳಿಸಿದೆ. ಅದನ್ನು 'ಕಿಂಗ್‌ಡಂ ಆಫ್ ಮುರಾಕೇಶ್' ಅಂತಲೂ ಕರೆಯುತ್ತಾರೆ. ಹೇಗೆ ಬ್ರಿಟನ್ Parlimentary Monachy ಅಂದರೆ ಲೋಕತಾಂತ್ರಿಕ ಚಕ್ರಾಧಿಪತ್ಯವಾಗಿ ಅಸ್ತಿತ್ವದಲ್ಲಿದೆಯೋ ಹಾಗೆಯೇ ಮೊರಾಕ್ಕೋ ಪ್ರಜಾತಾಂತ್ರಿಕ ರಾಜಸತ್ತೆಯಾಗೇ ಚಾಲ್ತಿಯಲ್ಲಿದೆ.

ಸದ್ಯ ಮೊರಾಕ್ಕೋದ ದೊರೆ ಆರನೇ ಮೊಹಮ್ಮದ್. ಪ್ರವಾದಿ ಮೊಹಮ್ಮದ್ದರ (ಸ) ತನುಸಂಜಾತರೆಂದೇ ಪ್ರತೀತಿಯ ಮೊರಾಕ್ಕೋ ರಾಜಶಾಹಿಯನ್ನು ಅಲ್ಲಿನ ಜನ ಭಕ್ತಿಭಾವದಿಂದ ಗೌರವಿಸುತ್ತಾರೆ. ಅರೇಬಿಕ್ ಬರ್ಬರ್ ಅಲ್ಲಿನ ಜನರ ಆಡುಭಾಷೆಯಾದರೂ ಹೇಗೆ ನಮ್ಮಲ್ಲಿ ಇಂಗ್ಲಿಷ್ ಆಡಳಿತ ಭಾಷೆಯೋ ಅದೇ ರೀತಿ ಫ್ರೆಂಚ್ ಮೊರಾಕ್ಕೋದ ಆಡಳಿತ ಭಾಷೆ. ಇಂಗ್ಲಿಷ್ ಅವರಿಗೆ ಅರ್ಥವಾಗದು. ಆದ್ದರಿಂದಲೇ ಬನ್ನಂಜೆ ರಾಜನ ಮೇಲೆ ಉಡುಪಿ, ಮಂಗಳೂರು, ಬೆಂಗಳೂರಿನ ಪೊಲೀಸ್ ಠಾಣೆಗಳಲ್ಲಿ ಕನ್ನಡದಲ್ಲಿದ್ದ ದಾಖಲೆಗಳನ್ನೆಲ್ಲ ಮೊದಲು ಇಂಗ್ಲಿಷಿಗೆ ತರ್ಜುಮೆ ಮಾಡಿದ ನಂತರವೇ ಫ್ರೆಂಚ್ ಭಾಷೆಗೆ ರೂಪಾಂತರಿಸಲಾಯಿತು.

ಅದೇನು ಕಮ್ಮಿಯ ಶ್ರಮವಾ? ಪ್ರತಿಯೊಂದು ದಾಖಲೆಯನ್ನು ಕನ್ನಡದಿಂದ ಇಂಗ್ಲಿಷಿಗೆ ಆ ನಂತರ ಫ್ರೆಂಚ್ ಭಾಷೆಗೆ, ನಲವತ್ತಕ್ಕೂ ಅಧಿಕ ಪ್ರಕರಣಗಳು. ಅವುಗಳ ಫೊರೆನ್ಸಿಕ್ ವರದಿ, ಸಾಕ್ಷಿಗಳ ಹೇಳಿಕೆ, ಎಫ್‌ಐಆರ್, ಆನಂತರ ಚಾರ್ಜ್‌ಶೀಟ್, ತದನಂತರ ಸಾಕ್ಷ್ಯಾಧಾರಗಳು. ಅವೆಲ್ಲವನ್ನೂ ಭಾಷಾಂತರಿಸಿ ಮೂಲ ಕನ್ನಡದ ಪ್ರತಿ. ಅವುಗಳ ಇಂಗ್ಲಿಷ್ ಪ್ರತಿ, ಕೊನೆಯಲ್ಲಿ ಫ್ರೆಂಚ್ ಕಾಪಿಗಳೆಲ್ಲವೂ ಸೇರಿ ಬನ್ನಂಜೆ ವಿರುದ್ಧದ ಒಟ್ಟು ದಾಖಲೆಗಳೇ ಒಂದು ಕ್ವಿಂಟಾಲ್ ತೂಕವಾಗುತ್ತಿತ್ತು, ಅದಕ್ಕೊಂದು ಎರಡು ಡಜನ್ ಪೊಲೀಸ್ ಅಧಿಕಾರಿಗಳು, ಭಾಷಾಂತರಕಾರರು ಅಹೋರಾತ್ರಿ ದುಡಿದರೂ ಹಿಡಿದದ್ದು ಮೂರು ತಿಂಗಳುಗಳು.

ಇಂಥ ದಾಖಲೆಗಳನ್ನಿಟ್ಟು ಕಾಸಾಬ್ಲಾಂಕಾದ ಕೋರ್ಟಿನಲ್ಲಿ ವಕೀಲರನ್ನಿಟ್ಟು ವಾದ ಮಂಡಿಸುವುದೂ ಕಮ್ಮಿಯ ಶ್ರಮವಾ? ಅಂತಿಮವಾಗಿ ಮೇ 6ರಂದು ಹೇಮಂತ್ ಹೆಗಡೆಯೇ ಬನ್ನಂಜೆ ರಾಜ ಎಂಬುದನ್ನು ಕೋರ್ಟ್ ಒಪ್ಪಿ ಗಡಿಪಾರಿನ ತೀರ್ಪಿತ್ತಿತು. ಇದರ ವಿರುದ್ಧವೂ ವಕೀಲರನ್ನಿಟ್ಟ ಬನ್ನಂಜೆ ಮೊರಾಕ್ಕೋ ಉಚ್ಚನ್ಯಾಯಾಲಯದ ಮೆಟ್ಟಲೇರಿದ್ದೇ ಇಷ್ಟೊಂದು ತಡವಾಗಲು ಕಾರಣವಾಯ್ತು.

ಸೋನಾ ಹೆಗಡೆ ಎಂಬ ನಿಗೂಢ ನಾರಿಯ ಬೆನ್ನ...



ಆರ್.ಎನ್. ನಾಯಕ್

ಅಂಕೋಲಾದ ಉದ್ಯಮಿ ಆರ್.ಎನ್. ನಾಯಕ್ ಹತ್ಯೆಯ ನಂತರ ನಿದ್ದೆಗೆಟ್ಟು ಬನ್ನಂಜೆಯ ಬೆನ್ನು ಹತ್ತಿದ ಕರ್ನಾಟಕ ಪೊಲೀಸರಿಗಿದ್ದ ಸಣ್ಣ ಕ್ಲೂ ಒಂದೇ.

ಅದು ಸೋನಾ ಹೆಗಡೆ ಎಂಬ ದುಬೈ ವಾಸಿ ನಿಗೂಢ ಮಹಿಳೆ. ಮುಂಬಯಿಯಿಂದ ನಕಲಿ ಪಾಸ್‌ಪೋರ್ಟ್ ಬಳಸಿಯೇ ಆಕೆ ದುಬೈ ಸೇರಿಕೊಂಡಿದ್ದಳು. ಬನ್ನಂಜೆ ನಾಲ್ಕು ನಕಲಿ ಪಾಸ್‌ಪೋರ್ಟ್‌ಗಳನ್ನು ಬಳಸಿದ್ದ, ಮುಂಬಯಿಂದ ದುಬೈಗೊಂದು ಅಲ್ಲಿಂದ ಮೊರಾಕ್ಕೋಗೆ ಮತ್ತೊಂದು; ಹೀಗೆ ಇಂಟರ್‌ಪೋಲ್ ಕಣ್ಣಿಗೆ ಮಣ್ಣೆರಚಲು ಏನೇನು ಬೇಕೋ ಎಲ್ಲವನ್ನೂ ಅತಿಸೂಕ್ಷ್ಮವಾಗಿ ನಿಭಾಯಿಸಿದ್ದ. 2014ರ ಹೊತ್ತಿಗೆ ಬನ್ನಂಜೆಯ ದುಬೈ ಚರ್ಯೆಯನ್ನು ಪತ್ತೆ ಹಚ್ಚಿದ ಸಿಬಿಐಗೆ ಆತನ ಫೋನ್‌ಗೆ ಹೆಂಗಸೊಬ್ಬಳು ಫೋನ್ ಮಾಡುತ್ತಿದ್ದದ್ದು ಪತ್ತೆಯಾಯಿತು.

ಆಕೆಯ ಚಲನವಲನ ಸೂಕ್ಷ್ಮವಾಗಿ ಗಮನಿಸಿದ ಸಿಬಿಐಗೆ 2013ರ ಡಿಸೆಂಬರ್ 31ರ ಹೊಸವರ್ಷದ ಮೋಜುಗೋಷ್ಠಿಗೆಂದು ಆಕೆ ಕಾಸಾಬ್ಲಾಂಕಾಗಿ ಹೋಗಿ ಬಂದದ್ದು ಗೊತ್ತಾಯಿತು. ಅದನ್ನು ಮೊರಾಕ್ಕೋ ಪೊಲೀಸರಿಗೆ ತಿಳಿಸಲಾಯಿತು. ಇತ್ತ ಮೊರಾಕ್... ಪೊಲೀಸರು ಕಾಸಾಬ್ಲಾಂಕಾದ ಬೀಚ್ ಪಾರ್ಟಿಯ ಸಿಸಿ ಟೀವಿ ಫುಟೇಜುಗಳನ್ನು ಪರಿಶೀಲಿಸಲಾಗಿ ಪತ್ತೆಯಾದವ... ಬನ್ನಂಜೆ ರಾಜ. ಹೇಮಂತ್ ಹೆಗಡೆಯೇ ಅಸಲೀ ಬನ್ನಂಜೆಯಾಗಿದ್ದ. ಆಕೆಯ ಫೋನ್ ಕರೆಗಳ ಮೇಲೆ ಕಣ್ಣಿಟ್ಟಾಗ... ಬನ್ನಂಜೆಯ ಮೊರಾಕ್ಕೋ ಇತ್ಯೋಪರಿಗಳ ಮಾಹಿತಿ ಸಿಕ್ಕದ್ದು. ಹೆಣ್ಣಿನ ಸಂಗ ಆತನ ಪಾಲಿಗೆ ಸರ್ಪಸಂಗವ... ಪರಿಣಮಿಸಿತ್ತು.





ಹೊಕ್ಕಾಡಿ ಪ್ರವೀಣ್ ಶೆಟ್ಟಿ

...ಷ್ಟು ಎಲ್ಲವನ್ನೂ ಬದಲಿಸಿಕೊಂಡಿದ್ದ!

...ಅಲ್ಲಿ ಆತನ ಹೆಸರು ಕುಮಾರ ರಾಜ್ ಹೇಮಂತ್ ...ಡೆ. ಕಾಸಾಬ್ಲಾಂಕಾದ ಗೌರವಾನ್ವಿತ ಬಿಜಿನೆಸ್ ಮನ್. ...ದ್ದೊಂದು ಫರ್ನಿಚರ್ ಮಳಿಗೆ. ಪಕ್ಕದಲ್ಲೇ ದರ್ಶಿನಿ ...ನ ಭಾರತೀಯ ಖಾದ್ಯಗಳಿಗೆ ಹೆಸರಾದ ಒಂದು ...ರೆಸ್ಟೋರೆಂಟ್. ಈ ಹೊತ್ತಿಗಾಗಲೇ ಅಂಕೋಲಾದ ...ಎನ್. ನಾಯಕ್ ಹತ್ಯೆಯ ಮೂಲಕ ಭಯಾನಕ ...ತಿ ಗಳಿಸಿದ್ದ ಬನ್ನಂಜೆಗೆ ತಾನು ಕೈಯಿಡುತ್ತಿರುವ ...ಮಿಯ ಕೈ ಅದೆಷ್ಟು ಉದ್ದವಿರಬಹುದೆಂಬ ಸಣ್ಣ ...ಅಂದಾಜೂ ಇರಲಿಲ್ಲ.

...ಅದು ಹೊಕ್ಕಾಡಿ ಪ್ರವೀಣ್ ಶೆಟ್ಟಿ. ಕುಂದಾಪುರ ...ತಾಲ್ಲೂಕಿನ ಪುಟ್ಟಗ್ರಾಮ ಹೊಕ್ಕಾಡಿಯ ಪ್ರವೀಣ್ ಶೆಟ್ಟಿ ...ದುಬೈನ ಪ್ರಸಿದ್ಧ ಫಾರ್ಚೂನ್ ಗ್ರೂಪ್ ಆಫ್ ಹೊಟೇಲ್ ... ಶ್ರಮ ಮತ್ತು ಛಲದಿಂದಲೇ ಮೇಲೆ ಬಂದ ಪ್ರವೀಣ್ ... ಭಾಗದ ಅನೇಕ ಕನ್ನಡ ಸಂಘಗಳ ಪಾಲಿಗೆ ಮಹಾದಾನಿ. ...14ರ ಡಿಸೆಂಬರ್ ಹೊತ್ತಿಗೆ ಪ್ರವೀಣ್ ಶೆಟ್ಟಿಯ ರಾಶಿಗೆ ...ಸಿಸಿದ ಬನ್ನಂಜೆ ಐದು ಕೋಟಿಯ ಡಿಮ್ಯಾಂಡಿಟ್ಟಿದ್ದ. ... ಆ ಕಾಲದ ಹೊಟೇಲ್ ಉದ್ದಿಮೆಯುದ್ದಕ್ಕೂ ...ಮುಂಬಯಿ ಡಾನ್‌ಗಳಾದ ಶರದ್ ಶೆಟ್ಟಿ, ಸಾಧು ಶೆಟ್ಟಿ, ...ಶೆಟ್ಟಿಯಂಥವರನ್ನೆಲ್ಲ ನೋಡಿಕೊಂಡೇ ಬಂದ ಪ್ರವೀಣ್ ... ಬಗ್ಗೆ ರೈಗೂ ಅಪಾರ ಗೌರವ.

ಕಾಸಾಬ್ಲಾಂಕಾ ಕಾಲ್ಸ್

...ದುಬೈನಲ್ಲಿ ಕರ್ನಾಟಕ ಮೂಲದ ಯಾರೇ ನೆರವು ...ಕೊಂಡು ಬಂದರೂ ಬರಿಗೈಯಲ್ಲಿ ಕಳಿಸಿದ ಒಂದೇ ...ಮ ನಿದರ್ಶನವೂ ಪ್ರವೀಣ್ ಮುಂದಿಲ್ಲ. ದುಬೈನಲ್ಲಿದ್ದಾಗ ...ಮುವಿನಲ್ಲಿ ರೈ ಚೇಲಾನಂತೆ ಓಡಾಡಿಕೊಂಡಿದ್ದ ...ಬನ್ನಂಜೆಯನ್ನು ಪ್ರವೀಣ್ ಕಣ್ಣೆತ್ತಿ ಕೂಡ ನೋಡಿದವರಲ್ಲ. ...ರೆ ಈಗ ಬನ್ನಂಜೆ ಐದು ಕೋಟಿಯ ಡಿಮ್ಯಾಂಡಿಟ್ಟಿದ್ದಾನೆ. ...ಕಾಸಾಬ್ಲಾಂಕಾದಲ್ಲಿ ಕೂತೇ ತನ್ನ ಚಲನವಲನದ ಮೇಲೆ ...ಇಟ್ಟಿದ್ದಾನೆ. ಎಷ್ಟು ಚಾಲಾಕಿಯೆಂದರೆ ತಾನು ಕುಂದಾಪುರಕ್ಕೆ ...ಬರುವುದನ್ನೇ ಕಾದು ಅತ್ತ ಮೊರಾಕ್ಕೋದಿಂದ ...ಕಣ್ಣಿಯಿಡುತ್ತಾನೆ. ತಾನಿಲ್ಲದ ವೇಳೆ ಹೊಕ್ಕಾಡಿಯ ತನ್ನ ...ತಂದೆತಾಯಿಗಳಿಗೆ, ಅಕ್ಕತಂಗಿಯರನ್ನೂ ಬಿಡದೆ ಫೋನ್ ...ಡಿ ಗುಂಡಿಕ್ಕುತ್ತೇನೆನ್ನುತ್ತಾನೆ.

...ಇದನ್ನು ಗಂಭೀರವಾಗೇ ತೆಗೆದುಕೊಂಡ ಪ್ರವೀಣ್ ... ಶತಗತಾಯ ಬನ್ನಂಜೆಗೊಂದು ಗತಿ ಕಾಣಿಸುವ ...ನಿರ್ಧಾರಕ್ಕೆ ಬಂದರು. ತನಗೆ ಪರಿಚಿತರಿದ್ದ ಮಂತ್ರಿಗಳಾದ ...ರೋಷನ್ ಬೇಗ್ ಮತ್ತು ಕೆ.ಜೆ.ಜಾರ್ಜ್‌ರಲ್ಲಿ ಪರಿಸ್ಥಿತಿ ...ವಿವರಿಸಿಕೊಂಡರು. ದುಬೈಗೆ ಬಂದಾಗಲೆಲ್ಲ ಜಾರ್ಜ್, ...ರೋಷನ್ ಬೇಗ್ ತಂಗುವುದು ಪ್ರವೀಣ್ ಶೆಟ್ಟಿ ...ಹೋಟೆಲಿನಲ್ಲೇ. ಹಾಗೆ ಮುಂಬಯಿಯ ಬಿಜೆಪಿ, ಕಾಂಗ್ರೆಸ್ ...ಕಾರಣಿಗಳೂ ಪ್ರವೀಣ್ ಪಾಲಿಗೆ ಅಪರಿಚಿತರೇನಲ್ಲ. ...ಕೈ ಕೇಂದ್ರ ಮಂತ್ರಿ ಸದಾನಂದಗೌಡ, ಶೋಭಾ ...ದ್ಲಾಜೆ ಲಿಂಕುಗಳೂ ಇಲ್ಲವೆಂದಲ್ಲ.


...ಹಾಗಂತ ಬನ್ನಂಜೆಯನ್ನು ಮಟ್ಟಾ ಹಾಕುವುದು ...ದೇನಲ್ಲ, ಆತನಿಗೆ ಅಂತಾರಾಷ್ಟ್ರೀಯ ಕಾನೂನುಗಳು ...ಸ್ತು ಅಚ್ಚುಕಟ್ಟೂ ದುಬೈನಲ್ಲಿದ್ದಾಗ ರಾಜ ಪ್ರವೀಣ್‌ಗೆ ... ಮಾಡುವುದಿಲ್ಲ, ದುಬೈನಲ್ಲೇನಾದರೂ ಬೆದರಿಕೆ ... ಕೇಸು ದಾಖಲಾಯಿತೆಂದರೆ ತನಗೆ ಉಳಿಗಾಲವಿಲ್ಲ ...ಎಂದು ಆತನಿಗೆ ಚೆನ್ನಾಗಿ ಗೊತ್ತು, ಅದಕ್ಕಾಗೇ ಪ್ರವೀಣ್ ... ಭಾರತಕ್ಕೆ ಬರುವುದನ್ನು ಕಾದು ಫೋನ್ ಕೊಡುತ್ತಿದ್ದ. ... ಕುಂದಾಪುರದ ಸಂಬಂಧಿಕರಿಗೆ ಕಾಟ ಶುರುವಿಟ್ಟಿದ್ದ ...ಜೆಯ ನರಿಬುದ್ಧಿಗೆ ಸರಿಯಾದ ಶಾಸ್ತಿ ಮಾಡುವ ... ರೂಪಿಸಿದ ಪ್ರವೀಣ್ ವಿಚಿತ್ರ ಕಾರ್ಯಾಚರಣೆಯೊಂದಕ್ಕೆ ...ಯಾದರು.

ಬಲೆಗೆ ಬಿದ್ದ ಮಿಕ

...ಎಂದರೆ ಕುಂದಾಪುರಕ್ಕೆ ಬಂದಂತಿರಬೇಕು. ಅದು ...ಜೆಗೆ ಸ್ಪಷ್ಟವಾಗಿ ಗೊತ್ತಾಗಬೇಕು. ಆತ ತಾನು ...ಕುಂದಾಪುರದಲ್ಲಿದ್ದೇನೆ ಎಂದೇ ಭಾವಿಸಿ ಬೆದರಿಕೆ ಕರೆ ಹಾಕುವ ಹೊತ್ತಿಗೆ ಉಪಾಯವಾಗಿ ತಾನು ದುಬೈ ಸೇರಿಕೊಂಡಿರಬೇಕು. ಒಮ್ಮೆ ದುಬೈನಲ್ಲಿ ಥ್ರೆಟ್ ಕಾಲ್‌ನ ದೂರು ದಾಖಲಾಯಿತೆಂದರೆ ದುಬೈ ಪೊಲೀಸರ ಮೂಲಕವೇ ಆತನನ್ನು ಮೊರಾಕ್ಕೋದಿಂದ ಎಳೆತರಬಹುದು. ಈ ಥರದ ಮರಮ್ಮತ್ತು ಮಾಡಿಕೊಂಡೇ ಪ್ರವೀಣ್ 2014ರ ಡಿಸೆಂಬರ್ 20ರ ರಾತ್ರಿ ಬೆಂಗಳೂರಿಗೆ ಬಂದರು. ಆಗ ರಾತ್ರಿ ಒಂಬತ್ತೂವರೆ. ಬನ್ನಂಜೆಯ 00919341234444 ನಂಬರ್‌ನಿಂದ ಥ್ರೆಟ್ ಕಾಲ್ ಶುರುವಾಗಿದೆ. ಹುಷಾರಾದ ಪ್ರವೀಣ್ ಕರೆ ಸ್ವೀಕರಿಸದೇ ಸ್ವಿಚ್ ಆಫ್ ಮಾಡಿದ್ದಾರೆ. ಮರುದಿನ ಮತ್ತೆ ಅಂದರೆ ಡಿಸೆಂಬರ್ 21ರ ಬೆಳಗ್ಗೆ ಫೋನನ್ನು ಮತ್ತೆ ಸ್ವಿಚ್ ಆನ್ ಮಾಡಿದಾಗ ನಸುಕಿನ ನಾಲ್ಕೂವರೆ. ಇನ್ನೇನು ಬೆಂಗಳೂರಿನಲ್ಲಿ ಸ್ವಿಚ್ ಆನ್ ಮಾಡಿದ್ದೇ ಅತ್ತಿಂದ ಮತ್ತೆ ಬನ್ನಂಜೆಯ ಬೆದರಿಕೆ ಶುರುವಾಗಿದೆ. ಮತ್ತೆ ಮಾತಾಡುತ್ತೇನೆಂದು ತಕ್ಷಣವೇ ಸ್ವಿಚ್ ಆಫ್ ಮಾಡಿದ ಪ್ರವೀಣ್ ತಡಮಾಡದೆ ಬಂದ ವಿಮಾನವನ್ನೇ ಹತ್ತಿ ದುಬೈಗೆ ವಾಪಸ್ಸಾಗಿದ್ದಾರೆ. ಬೆಂಗಳೂರಿನಲ್ಲಿದ್ದವರು ಖಂಡಿತಾ ಕುಂದಾಪುರಕ್ಕಿಲ್ಲಿರುತ್ತಾರೆಂದು ಬನ್ನಂಜೆ ಲೆಕ್ಕ ಹಾಕಿದ್ದ. ಪ್ರವೀಣ್ ಮತ್ತೆ ತನ್ನ ಮೊಬೈಲ್ ಸ್ವಿಚ್ ಆನ್ ಮಾಡಿದ್ದು ಹತ್ತೂವರೆಗೆ. ಆ ಹೊತ್ತಿಗೆ ದುಬೈ ವಿಮಾನ ನಿಲ್ದಾಣದಲ್ಲಿದ್ದರು. ಬೆಂಗಳೂರಲ್ಲೋ, ಕುಂದಾಪುರದಲ್ಲೋ ಇರುತ್ತಾರೆಂದು ಭಾವಿಸಿ 'ಕೊಲ್ಲುತ್ತೇನೆಂದು' ಬೈಗುಳ ಶುರು ಹಚ್ಚಿಕೊಂಡ ಬನ್ನಂಜೆ ಬರೋಬ್ಬರಿ ಅರ್ಧಗಂಟೆ ಕಾಲ ಧಮಕಿ ಹಾಕುತ್ತಲೇ ಇದ್ದ!

ಪ್ರತಾಪ್ ರೆಡ್ಡಿ...!

ಪ್ರವೀಣ್‌ಗೆ ಇಷ್ಟೇ ಸಾಕಿತ್ತು. ನೇರ ದುಬೈನ ರಿಫಾ ಪೊಲೀಸ್ ಠಾಣೆಗೆ ಹೋಗಿದ್ದೇ 'ಕೊಲೆ ಬೆದರಿಕೆ'ಯ ದೂರು ದಾಖಲಿಸಿಬಿಟ್ಟರು. ಇನ್ನೇನು ದೂರು ದಾಖಲಾಯಿತು ಎಂದು ಗೊತ್ತಾಗಿದ್ದೇ ಇತ್ತ ಕರ್ನಾಟಕ ಪೊಲೀಸರು ಚುರುಕಾದರು. ಆ ಹೊತ್ತಿಗಾಗಲೇ ಆತ ನಕಲಿ ಪಾಸ್‌ಪೋರ್ಟ್‌ನಲ್ಲಿ ದುಬೈ-ಮೊರಾಕ್ಕೋ ಮಧ್ಯೆ ಓಡಾಡುತ್ತಿದ್ದದ್ದು ಇಂಟರ್‌ಪೋಲ್ ಮೂಲಕ ದುಬೈ ಪೊಲೀಸರಿಗೆ ಗೊತ್ತಾಗಿತ್ತು. ಹೇಗೂ ಅಪರಾಧಿಗಳ ವಿನಿಮಯ ಒಪ್ಪಂದವಿತ್ತಾದ್ದರಿಂದ ದುಬೈ ಪೊಲೀಸರ ಮೂಲಕ ಮೊರಾಕ್ಕೋ ಪೊಲೀಸರನ್ನು ಮುಟ್ಟುವುದು



ಕಷ್ಟವಿರಲಿಲ್ಲ. ಇರಾನ್ ದೇಶದಲ್ಲಿ ಖರೀದಿಸಿದ್ದ ಸಿಮ್ ಬಳಸಿ ಬನ್ನಂಜೆ ಬೆದರಿಕೆ ಹಾಕಿದ್ದಕ್ಕೂ ಸಾಕ್ಷ್ಯಾಧಾರಗಳಿದ್ದವು.

2014ರ ಡಿಸೆಂಬರ್‌ನಲ್ಲಿ ದುಬೈನಲ್ಲಿ ದಾಖಲಾದ ಬೆದರಿಕೆ ಕರೆಯ ಸಣ್ಣದೊಂದು ಪ್ರಕರಣ ಹಿಡಿದು ಕಾಸಾಬ್ಲಾಂಕಾ ಪೊಲೀಸರು ಬನ್ನಂಜೆಯನ್ನು ಬಂಧಿಸಿದ್ದು ಇದಾಗಿ ಎರಡು ತಿಂಗಳ ನಂತರ ಅಂದರೆ 2015ರ ಫೆಬ್ರವರಿ 15ರಂದು. ಬನ್ನಂಜೆ ಮೊರಾಕ್ಕೋ ಪೊಲೀಸರ ಕಸ್ಟಡಿಯಲ್ಲಿದ್ದದ್ದು ಗೊತ್ತಾಗಿದ್ದೇ ತಡ ಕರ್ನಾಟಕ ಪೊಲೀಸರು ವಿಶೇಷವಾಗಿ ಮಂಗಳೂರು ಪೊಲೀಸ್ ಕಮೀಷನರ್ ಮುರುಗನ್ ಹುಷಾರಾದರು. ಮತ್ತೊಂದೆಡೆ ಸಿಬಿಐನ ಇಂಟರ್‌ಪೋಲ್ ವಿಭಾಗ, ರಾ ಎಲ್ಲವೂ ಕಾರ್ಯಾಚರಣೆಗಿಳಿದವು. ಸತತ 6 ತಿಂಗಳು ಕಾಲ ಕಾಸಾಬ್ಲಾಂಕಾ ಪೊಲೀಸರ ಕಸ್ಟಡಿಯಲ್ಲೇ ಗಾಯ ನೆಕ್ಕುತ್ತಾ ಕೂತ ಬನ್ನಂಜೆ ಅದೆಂಥದ್ದೇ ವಕೀಲರನ್ನಿಟ್ಟು ಏನೇ ಸರ್ಕಸ್ ಮಾಡಿದರೂ ಕಾನೂನಿನ ಕೈ ಉದ್ದವಿತ್ತು.

2015ರ ಜೂನ್ 15ಕ್ಕೆ ಮೊರಾಕ್ಕೋಗೆ ಉಚ್ಚ ನ್ಯಾಯಾಲಯ ಬನ್ನಂಜೆ ವಿರುದ್ಧ ಕ್ರಿಮಿನಲ್ ಡಿಕ್ರಿ ಹೊರಡಿಸಿತ್ತು, ಅದಕ್ಕೂ ಮುನ್ನ ಮೇ 6ಕ್ಕೆ ಅಧೀನ ನ್ಯಾಯಾಲಯದಲ್ಲಿ ಆತನೇ ಬನ್ನಂಜೆ ರಾಜನೆಂದು ಸಾಬೀತಾಗಿತ್ತು, ಇನ್ನೇನು ಅಡಿಷನಲ್ ಕಮೀಷನರ್ ಪ್ರತಾಪ್ ರೆಡ್ಡಿ ಆರು ಮಂದಿ ಇನ್ಸ್‌ಪೆಕ್ಟರ್‌ಗಳೊಂದಿಗೆ ಕಾಸಾಬ್ಲಾಂಕಾದ ವಿಮಾನ ಹತ್ತುವುದೊಂದೇ ಬಾಕಿ. ಈ ಬಾರಿಯ ಸ್ವಾತಂತ್ರ್ಯ ದಿನಾಚರಣೆ ಕರಾವಳಿಯ ಅದೆಷ್ಟು ಹೊಟೇಲ್ ಉದ್ಯಮಿಗಳ ಪಾಲಿಗೆ ವಿಮುಕ್ತಿಯ ದಿನವೂ...?

ಪ್ರವೀಣ್ ಶೆಟ್ಟಿ ಎಂಬ ಹೆಮ್ಮೆಯ ಕನ್ನಡಿಗನೊಬ್ಬನ ಕೈ ಅದೆಷ್ಟು ಉದ್ದ...!

■ ರಾ. ಸೋಮನಾಥ್

ಕಾವ್ಯದ ಝರಿ ಬತ್ತಿದ ಎದೆಗಳು

ಥೂತ್ತೇರಿ



'ಭಜರಂಗಿ ಭಾಯಿಜಾನ್' ಭಾರತ ಮತ್ತು ಪಾಕಿಸ್ತಾನದ ಭಾವನಾತ್ಮಕ ಸಂಬಂಧವನ್ನು ಬಿಚ್ಚಿಡುತ್ತಿದೆಯಂತಲ್ಲಾ. ಸಿನಿಮಾ ಬಿಡುಗಡೆಯಾದ ಮೇಲೆ ಎರಡೂ ದೇಶಗಳಲ್ಲಿ ಮುನ್ನ ಮುನ್ನಿಯರು ಪತ್ತೆಯಾಗುತ್ತಿದ್ದು ಉಭಯ ದೇಶಗಳಲ್ಲಿ ಮಾನವೀಯ ಅಂತಃಕರಣ ಹೊಂದಿರುವ ಜನಗಳ ಕಣ್ಣುಗಳು ತೇವಗೊಳ್ಳುತ್ತಿವೆಯಲ್ಲಾ. ಈ ಸಂದರ್ಭದಲ್ಲೇ ದೇಶದ ಗಡಿ ನುಸುಳಿ ಭಾರತೀಯರನ್ನು ಕೊಲ್ಲಲು ಪಣತೊಟ್ಟ ಯುವಕರು ಬೇಲಿ ನುಸಿದು ಬರುತ್ತಲೇ ಇದ್ದಾರಲ್ಲಾ, ಅಂತವರು 'ಭಜರಂಗಿ ಭಾಯಿಜಾನ್' ಸಿನಿಮಾ ನೋಡಲಾರರು. ಆದರೇನು ನಮ್ಮ ನಡುವೆಯಿರುವ ಚೆಡ್ಡಿ ಗೆಳೆಯರನ್ನು "ಹೋಗಿ, ಒಂದು ಬಾರಿ ಆ ಸಿನಿಮಾ ನೋಡಿ" ಎಂದರೆ ಒಲ್ಲೆ ಎನ್ನುತ್ತಿವೆಯಲ್ಲಾ, ಕಾರಣ ಕೇಳಿದರೆ, "ಆ ಸಿನಿಮಾ ಪಾಕಿಸ್ತಾನದಲ್ಲೂ ಚಿತ್ರೀಕರಣಗೊಂಡಿದೆಯಂತೆ. ಅದರಲ್ಲಿ ಪಾಕಿಸ್ತಾನದ ಧ್ವಜವಿದೆಯಂತೆ. ಮಸೀದಿಯಿದೆಯಂತೆ. ಅದಕ್ಕಾಗಿ ಅದನ್ನು ನೋಡುವುದಿಲ್ಲ" ಎಂದು ವಿವರಣೆ ಕೊಡುವ ಚೆಡ್ಡಿ ಗೆಳೆಯರಿಗೆ ಮತ್ತು ಭಾರತದ ಗಡಿ ನುಸುಳಿ ಬಂದು ಸಿಕ್ಕಿಕೊಳ್ಳುತ್ತಿರುವ ಮಂದಮತಿಗಳಿಗೆ ಅಂತಹ ವ್ಯತ್ಯಾಸಗಳೇ ಗೋಚರಿಸುತ್ತಿಲ್ಲವಲ್ಲಾ, ಥೂತ್ತೇರಿ!

* * *

'ಭಜರಂಗಿ ಭಾಯಿಜಾನ್' ನೋಡುವಾಗ ಕವಿ ಗೋಪಾಲಕೃಷ್ಣ ಅಡಿಗರ ಕಾವ್ಯದ ಸಾಲೊಂದು ಮನಸ್ಸಿನಲ್ಲಿ ಗಟ್ಟಿಯಾಗಿ ತಳ ಊರುತ್ತದೆ. "ಅಮೃತ ವಾಹಿನಿಯೊಂದು ಹರಿದಿದೆ ಮಾನವನ ಎದೆಯಿಂದ ಎದೆಗೆ ಸತತ"- ಈ ಸಾಲು ಭಾರತ ಪಾಕಿಸ್ತಾನದ ಗಡಿಯಲ್ಲಿ ಜಮಾಯಿಸಿದ ಉಭಯ ದೇಶಗಳ ಜನರು ನೋಡುನೋಡುತ್ತಿದ್ದಂತೆ ಮುನ್ನಿ ಎಂಬ ಶಾಹಿದಾ ತನ್ನನ್ನು ಕಾಪಾಡಿ ತಂದು ತಾಯಿಯ ಮಡಿಲಿಗೆ ಒಪ್ಪಿಸಿದ ಭಾಯಿಯನ್ನು ಮಾಮಾ ಎಂದು ಕೂಗುತ್ತಾಳೆ. ಮಾತೇ ಆಡದ ಅವಳಿಗೆ ಆವಾಗ ತಾನೆ ಬಂದ ಮಾತು ಅದು. ಸಿನಿಮಾ ಪ್ರೇಕ್ಷಕ ಇದು ಸಿನಿಮಾ ಎಂಬುದನ್ನು ಮರೆತಿದ್ದರಿಂದ ದುಃಖದ ಕಟ್ಟೆಯೊಡೆಯುತ್ತದೆ. ಆಗಲೇ ಅಡಿಗರ ಕಾವ್ಯದ ಸಾಲು ನದಿಯೋಪಾದಿಯಲ್ಲಿ ಹರಿಯುವುದು. ಎರಡೂ ದೇಶಗಳ ಮುಳ್ಳುಬೇಲಿ ನಡುವೆ ಹರಿಯುವ ನದಿಯಂತೆ ಎರಡೂ ದೇಶದ ಜನರ ಮಾನವೀಯ ಅಂತಃಕರಣ ಪಿತೃಪ್ರೇಮ, ಮಾತೃಪ್ರೇಮ ಮೇಳೈಸಿ ಹರಿಯತೊಡಗುತ್ತದೆ. ಇಂತಹ ಝರಿ ಬತ್ತಿಹೋದ ಎದೆಗಳು ದೇಹಕ್ಕೆ ಬಾಂಬು ಕಟ್ಟಿಕೊಳ್ಳುತ್ತವೆ, ಬಡಿಗೆ ಬೀಸುತ್ತವೆ. ಇವೆಲ್ಲಾ ಏಕಕಾಲಕ್ಕೆ ಸಂಭವಿಸುತ್ತಿರುವುದು ವಿಚಿತ್ರವಲ್ಲವೆ, ಥೂತ್ತೇರಿ!!

* * *

ಸರ್ವಕಾಲಿಕ ಸತ್ವವನ್ನುಳ್ಳ ಕಾವ್ಯದ ಸಾಲುಗಳು ಭತ್ತದ ಝರಿಗಳಂತೆ ಜಿನುಗುತ್ತಲೇ ಇರುತ್ತವೆ. ಆದರೆ ಇಂತಹ ಗುಣವಿರದ ಕಾವ್ಯ ಬತ್ತಿ ಹೋಗುತ್ತದೆ. ಬತ್ತಿದ ಬದನೆಕಾಯಿ, ಒಣಗಿದ ಹೊಂಗೆಕಾಯಿ, ಸೀದುಕೊಂಡ ಸೀಗೆಕಾಯಿ, ಶಡತುಕೊಂಡ ನುಗ್ಗೆಕಾಯಿ.... ಹೀಗೆ ಕನ್ನಡ ಭಾಷೆಯ ನುಡಿಗಟ್ಟಿನಲ್ಲಿ ಬತ್ತಿಹೋದ ಪದಾರ್ಥಕ್ಕೆ ತಕ್ಕ ನುಡಿಗಳಿವೆ. ಇಂತಹ ನುಡಿಗಟ್ಟಿಗೆ ಸಿಕ್ಕ ಸುಮತೀಂದ್ರ ನಾಡಿಗರ ಕಾವ್ಯ ಯಾವ ಸ್ಥಿತಿ ತಲುಪಿತ್ತು ಅವರಿಗೇ ಗೊತ್ತು, ಅಂತು ಎಲ್ಲವೂ ಅಪ್ರಸ್ತುತವಾಗಿ ಅರ್ಥ ಕಳೆದುಕೊಂಡಂತೆ ಕಾಣುತ್ತಿರುವ ಈ ಸಂದರ್ಭದಲ್ಲಿ ತನ್ನ ಕಾವ್ಯದ ಬಗ್ಗೆ ಚಿಂತಾಕ್ರಾಂತನಾದ ನಾಡಿಗ ಅಮಾಯಕ ಅಬ್ದುಲ್ ಕಲಾಂರಿಗೆ ಕಾವ್ಯ ಪೋಸ್ಟ್ ಮಾಡಿ ಪ್ರತಿಕ್ರಿಯೆಗೆ ಕಾದರಂತಲ್ಲಾ. ಮಕ್ಕಳೆಂದರೆ ತುಂಬ ಪ್ರೀತಿಸುತ್ತಿದ್ದ ಅವರ ಪ್ರತಿಭೆ ಗುರುತಿಸಿ ಪ್ರೋತ್ಸಾಹದ ನಾಲ್ಕು ಮಾತನಾಡುತ್ತಿದ್ದ ಕಲಾಂ ಕರ್ನಾಟಕದಿಂದ ಪಾರ್ಸೆಲ್ ಬಂದ ಹೆಬ್ಬೊತ್ತಿಗೆಯನ್ನು ಅವರಿವರಿಂದ ಓದಿಸಿ ಸುಮತೀಂದ್ರ ಎಂಬ ವಿದ್ಯಾರ್ಥಿಗೆ "ಪರವಾಗಿಲ್ಲ, ಇನ್ನೂ ಚೆನ್ನಾಗಿ ಬರಿ" ಎಂದು ಶುಭಾಶಯ ಕಳಿಸಿದರಂತಲ್ಲಾ, ಥೂತ್ತೇರಿ!!!

* * *

ಈಗ ಭಾರತದ ರಾಜಕಾರಣ ಶಾನೆ ಮಜವಾಗಿದೆಯಲ್ಲಾ. ಕರ್ನಾಟಕದ ಗಣಿ ಕಳ್ಳರ ಪಾಲಿಗೆ ಅಮ್ಮನಾಗಿ ಅಭಿನಯಿಸಿ, ಪಾತ್ರ ಮುಗಿದ ನಂತರ ತನ್ನ ನಾಟಕದ ಮಕ್ಕಳನ್ನು ಜೊತೆಗೆ ನಿಲ್ಲಿಸಿಕೊಂಡು ಫೋಟೋ ಹೊಡೆಸಿಕೊಂಡು ಕೆಟ್ಟಲು ಬಾವು ಹಸುವಿನಂತೆ ನಡೆದುಹೋಗುತ್ತಿದ್ದ ಸುಷ್ಮಾ ಸ್ವರಾಜ್‌ರನ್ನ ಸೋನಿಯಾ ಗಾಂಧಿ 'ನಟನೆಯಲ್ಲಿ ನಿಸ್ಸೀಮೆ' ಎಂದು ಕರಾರುವಾಕ್ಕಾಗಿ ಗುರುತಿಸಿದರಂತಲ್ಲಾ, ಇದನ್ನು ಇಡೀ ದೇಶದ ಚಡ್ಡಿ ವಿರೋಧಿಗಳು ಒಪ್ಪಿಕೊಂಡು ಶಹಭಾಷ್‌ಗಿರಿ ಕೊಟ್ಟಿದ್ದಾರಲ್ಲಾ, ನಟನೆಯೇ ಗೊತ್ತಿಲ್ಲದ, ಬದಲಿ ಮಾತುಗಳೂ ಬಾರದ ಸೋನಿಯಾ ಗಾಂಧಿ ಸುಷ್ಮಾ ಸ್ವರಾಜ್‌ರನ್ನು ಮಹಾನಟಿ ಎಂದು, ಅದೂ ಲೋಕಸಭೆಯಲ್ಲೇ ಹೇಳಬೇಕಾದರೆ, ಬಿಜೆಪಿ ಕಂಪನಿ ಆ ಮಾತನ್ನು ಒಪ್ಪಿಕೊಂಡು ಅಭಿನಯದಲ್ಲಿ ತೊಡಗುವುದು ಒಳ್ಳೆಯದು. ಈಗಾಗಲೇ ಅಲ್ಲಿ ಭೀಷ್ಮನಂತೆ ಅದ್ವಾನಿ ಮೌನ ಧರಿಸಿದ್ದಾರೆ. ಎಷ್ಟು ಚುಚ್ಚಿದರೂ ಸತ್ಯ ಬಾಯಿಬಿಡದ ಕಳ್ಳನಂತೆ ಮೋದಿ ಮಾತನ್ನೇ ಆಡುತ್ತಿಲ್ಲ. ಸ್ಮೃತಿ ಇರಾನಿ ಬಹುಪ್ರತಿಭೆಯ ನಟಿಯಂತೆ ಕಾಣುತ್ತಾಳೆ. ವೆಂಕಯ್ಯನಾಯ್ಡು ಮಾತನಾಡಿದರೆ ತೆಲುಗು ಸಿನಿಮಾದ ರೇಲಂಗಿಯಂತೆ ಕಾಣುತ್ತಾನೆ. ಅಂತೂ ಸೋನಿಯಾ ಕೊಟ್ಟ ಏಟಿಗೆ ಬಿಜೆಪಿ ನಟರು ಶಾನೆ ಸಿಟ್ಟಾದರಂತಲ್ಲ, ಥೂತ್ತೇರಿ!

* * *

ಮೋದಿ ಎಂಬ ಭಾರತಕ್ಕೆ ವಕ್ಕರಿಸಿದ ಬೇನೆ ಮೊದಲು ಆತಂಕ ಮತ್ತು ನೋವು ತಂದಿದ್ದೇ ನಮ್ಮ ರೈತರಿಗಂತಲ್ಲಾ. ಆತ ತರಲು ಹೊರಟ ಭೂಸ್ವಾಧೀನ ಕಾಯ್ದೆಯನ್ನೇ ತೆಗೆದುಕೊಳ್ಳಿ, ನಿಮ್ಮ ಫಲವತ್ತಾದ ಜಮೀನು ಮೋದಿಯ ಸುಡುಗಾಡು ಸಿದ್ಧರಿಗೆ ಬೇಕಾದ ಕೂಡಲೇ ಬಂದು ತಲೆಯಾಡಿಸಿದರಾಯ್ತು. ಅದು ಅವರ ಸೊತ್ತು. ಅದಕ್ಕಾಗಿ ಒನ್‌ಟು ಡಬಲ್ ರೇಟು ಕೊಡುತ್ತಾರೆ. ಮಗ ಇದ್ದರೆ ಕೆಲಸ ಕೊಡುತ್ತಾರೆ. ಮಗಳಿದ್ದರೆ ಮದುವೆ ಮಾಡಿಸುತ್ತಾರೆ. ಈ ಆಮಿಷಕ್ಕೆ ಒಪ್ಪಿದ ರೈತ ಅಲ್ಲಿನ ಆಫೀಸಿಗೆ ಕಾರಕೂನನಾಗಬಹುದು. ಇಲ್ಲ ಸಮಯದೂಡಲು ವಾಚ್‌ಮನ್ ಆಗಬಹುದು. ಇಂತಹ ಕನಸನ್ನು ನಮ್ಮ ರೈತನಿಗೆ ತೋರಿದ ಮೋದಿ ಆ ಕ್ಷಣದಿಂದಲೇ ರೈತನ ಕನಸಲ್ಲಿ ದುಃಸ್ವಪ್ನವಾಗಿ ಕಾಡತೊಡಗಿದ್ದಾನಂತಲ್ಲಾ. ಹೇಗೆಂದರೆ, ಈಗಾಗಲೇ ಈ ಭೂಮಿ ನಿಮ್ಮದಲ್ಲ ಎಂದು ರೈತರಿಗೆ ಕಾಡತೊಡಗಿದೆ. ಒಂದು ಹೆಲಿಕಾಪ್ಟರ್ ತಲೆಮೇಲೆ ಹಾರಿಹೋದರೆ ಸಾಕು "ಓಹೋ ನನ್ನ ಜಮೀನಿನ ಸರ್ವೆ ನಡೆಯುತ್ತಿದೆ. ಇದು ಒಂದಲ್ಲ ಒಂದು ದಿನ ಪರಭಾರೆಯಾಗುವುದಾದರೆ, ನಾನು ಭೂಮಿಯ ಜೊತೆ ಬದುಕಿನ ಸಂಬಂಧ ಉಳಿಸಿಕೊಳ್ಳುವುದು ಹೇಗೆ? ಸಾಲ ಕೊಡುವವರಿಗೆ ಈ ಭೂಮಿ ತೋರಿಸಲು ಸಾಧ್ಯವೆ? ಹೆಣ್ಣು ಕೊಡುವವರಿಗೆ ಈ ನೆಲ ತೋರಲು ಸಾಧ್ಯವೇ?" ಎಂದು ಚಿಂತಾಕ್ರಾಂತನಾಗಿರುವ ರೈತನ ಬಳಿಗೆ ಯಾವ ರೈತ ಮುಖಂಡನೂ ಬಂದು ಒಂದು ಮಾತು... ನಡೆಸುವುದಂತಲ್ಲಾ, ಅದಕ್ಕೆ ಅಭ್ಯಾಸ ಮೋದಿ ಸಾಕಷ್ಟು ಬಿದ್ದಿದ್ದಾರೆ, ಥೂತ್ತೇರಿ!!! ■

ಮಾರನ್ ಸಾಮ್ರಾಜ್ಯಕ್ಕೆ 'ಸನ್' ಸ್ಟ್ರೋಕ್!

SUN TV NETWORK

ಇಪ್ಪತ್ತೆರಡು ವರ್ಷಗಳ ಮಾರನ್ ಸಾಮ್ರಾಜ್ಯ ಭೀಕರ ಬಿರುಗಾಳಿಗೆ ಸಿಲುಕಿ ತತ್ತರಿಸುತ್ತಿದೆ. ಅದು ಅಂತಿಂತ ಸಾಮ್ರಾಜ್ಯವಲ್ಲ! ಬರೋಬ್ಬರಿ 18,000 ಕೋಟಿ ರೂ. ಆಸ್ತಿಗೂ ಮೀರಿದ, 33 ಟಿವಿ ಚಾನೆಲ್‌ಗಳು, ಅರ್ಧ ನೂರಕ್ಕೂ ಹೆಚ್ಚು ರೇಡಿಯೊ ಚಾನೆಲ್‌ಗಳು, ಅಜಮಾಸು ಮುಕ್ಕಾಲು ತಮಿಳುನಾಡನ್ನೇ ಆವರಿಸಿದ್ದ 'ಕಲ್' ಕೇಬಲ್ ಜಾಲವನ್ನು ಒಳಗೊಂಡ 'ಸನ್ ನೆಟ್‌ವರ್ಕ್' ಎಂಬ ಸಾಮ್ರಾಜ್ಯ ಅದು. ಒಂದು ಕಡೆ ಜಯಲಲಿತಾ, ಮತ್ತೊಂದು ಕಡೆ ಕೇಂದ್ರದ ಬಿಜೆಪಿ ಸರ್ಕಾರ ನೀಡುತ್ತಿರುವ ಏಟುಗಳು ಆ ಸಾಮ್ರಾಜ್ಯದ ಒಂದೊಂದೇ ಬುನಾದಿಗಳನ್ನು ಕಿತ್ತು ಎಸೆಯುತ್ತಿವೆ. ಇದು ಯಾವ ಮಟ್ಟಕ್ಕೆ ಬಂದು ತಲುಪಿದೆಯೆಂದರೆ ಸನ್ ಸಾಮ್ರಾಜ್ಯದ ಆಧಾರಸ್ತಂಭಗಳಲ್ಲಿ ಒಬ್ಬನಾದ ಮಾಜಿ ಕೇಂದ್ರ ಸಚಿವ ದಯಾನಿಧಿ ಮಾರನ್ ಜೈಲು ಸೇರುವ ಘಳಿಗೆಯೇ ಸನಿಹವಾದಂತಿದೆ.

ಇದು ಕೇವಲ ಕಲಾನಿಧಿ ಮಾರನ್ ಎಂಬ ಚಾಣಾಕ್ಷ ಬಂಡವಾಳಶಾಹಿಯ ವ್ಯಾವಹಾರಿಕ ಅಧಃಪತನ ಮಾತ್ರವಲ್ಲ; ಮಾರನ್ ಹಾಗೂ ಕರುಣಾನಿಧಿ ಕುಟುಂಬಗಳ ರಾಜಕಾರಣ ಮಸುಕುಗೊಳ್ಳುತ್ತಿರುವುದರ ಮುನ್ಸೂಚನೆಯೂ ಹೌದು. ಹಾಗೆ ನೋಡಿದರೆ, ಶೂನ್ಯದಿಂದ ಹುಟ್ಟಿಕೊಂಡ ಸನ್ ನೆಟ್‌ವರ್ಕ್ ಕೇವಲ ಎರಡು ದಶಕದಲ್ಲಿ ಕಲಾನಿಧಿ ಮಾರನ್‌ನನ್ನು ದೇಶದ 17ನೇ ಸಿರಿವಂತ ಉದ್ಯಮಪತಿಯನ್ನಾಗಿ ಹುಟ್ಟುಹಾಕಿದ್ದಲ್ಲದೆ ಮೇಲಿಂದ ಮೇಲೆ ಮೂರು ಕೇಂದ್ರಮಂತ್ರಿ ಗದ್ದುಗೆಗಳನ್ನು ಒದಗಿಸಿಕೊಳ್ಳುವಷ್ಟರ ಎತ್ತರಕ್ಕೆ ಬೆಳೆದಿದ್ದೇ ತನ್ನ ಡಿಎಂಕೆ ರಾಜಕೀಯ ಪ್ರಭಾವದಿಂದ. ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಕರುಣಾನಿಧಿಯ ಸೋದರ ಸಂಬಂಧಿಯೂ ಆದ ಕಲಾನಿಧಿ ಮಾರನ್ 1993ರಲ್ಲಿ ಸನ್ ನೆಟ್‌ವರ್ಕ್ ಹುಟ್ಟುಹಾಕಿದಾಗ ಅದರ ಕಚೇರಿ ಇದ್ದದ್ದೇ ಡಿಎಂಕೆ ಪಾರ್ಟಿ ಆಫೀಸಿನ ಕಟ್ಟಡದಲ್ಲಿ, ಅಷ್ಟರಮಟ್ಟಿಗೆ ರಾಜಕೀಯವನ್ನು ಆಸರಿಸಿ ಬೆಳೆದುಕೊಂಡ ಸಾಮ್ರಾಜ್ಯ ಇದು. ಈಗ ಬದಲಾದ ಸನ್ನಿವೇಶಗಳಲ್ಲಿ ಅದೇ ರಾಜಕೀಯ ಸನ್ ನೆಟ್‌ವರ್ಕ್‌ನ ಸಮಾಧಿ ತೋಡುತ್ತಿದೆ.

ಆಗಸ್ಟ್ 10ರಂದು ಮದ್ರಾಸ್ ಹೈಕೋರ್ಟ್ ಕಲಾನಿಧಿ ಮಾರನ್‌ನ ತಮ್ಮ, ಮಾಜಿ ಕೇಂದ್ರ ಸಚಿವ ದಯಾನಿಧಿ ಮಾರನ್‌ಗೆ ನೀಡಿದ್ದ ನಿರೀಕ್ಷಣಾ ಜಾಮೀನನ್ನು ರದ್ದುಗೊಳಿಸಿ, ಇನ್ನು ಮೂರು ದಿನದಲ್ಲಿ ನ್ಯಾಯಾಲಯದ ಮುಂದೆ ಶರಣಾಗುವಂತೆ ಆದೇಶ ಹೊರಡಿಸಿರೋದು ಈ ಅಧಃಪತನದ ಲೇಟೆಸ್ಟ್ ಕುಸಿತ. ಅಂದಹಾಗೆ, ಯುಪಿಎ ಸರ್ಕಾರದಲ್ಲಿ ದಯಾನಿಧಿ ಮಾರನ್ ದೂರಸಂಪರ್ಕ ಸಚಿವನಾಗಿದ್ದಾಗ ಅಧಿಕಾರ ದುರುಪಯೋಗಪಡಿಸಿಕೊಂಡು ಸುಮಾರು 323 ಬಿಎಸ್‌ಎನ್‌ಎಲ್ ಹೈಸ್ಪೀಡ್ ಟೆಲಿಫೋನ್ ಲೈನ್‌ಗಳನ್ನು ತಮ್ಮ ಮನೆಯಿಂದ ಸನ್ ನೆಟ್‌ವರ್ಕ್ ಕಚೇರಿಗೆ ಅಕ್ರಮ ಸಂಪರ್ಕ ಕಲ್ಪಿಸಿದ್ದರ ವಿರುದ್ಧ ಸಿಬಿಐ ನಡೆಸುತ್ತಿರುವ ತನಿಖೆಗೆ ಸಂಬಂಧಿಸಿದಂತೆ ಕೋರ್ಟ್ ಈ ಆದೇಶ ನೀಡಿದೆ. ಸುಪ್ರೀಂಕೋರ್ಟ್ ಮಾರನ್‌ಗೆ ಸದ್ಯಕ್ಕೆ ಜಾಮೀನು ನೀಡಿ ನಿಟ್ಟುಸಿರು ಬಿಡುವಂತೆ ಮಾಡಿದೆಯಾದರೂ ಕಳೆದ ಒಂದು ವರ್ಷದಿಂದ ಅವರ ಸಾಮ್ರಾಜ್ಯದ ಮೇಲೆ ಕವಿದಿರುವ ಕಾರ್ಮೋಡ ತಿಳಿಗೊಳ್ಳುವ ಬದಲು ಮತ್ತಷ್ಟು ದಟ್ಟವಾಗುತ್ತಿರೋದನ್ನು ಈ ಘಟನೆ ದೃಢಪಡಿಸಿದೆ. ಮಾರನ್‌ಗಳು ಅಧೀರಗೊಂಡಿರುವುದೇ ಆ ಕಾರಣಕ್ಕೆ.




ಮಗ್ಗುಲು ಮುರಿದ ಮೂರು ಬಾಣಗಳು

ಕಳೆದ ಕೆಲ ತಿಂಗಳುಗಳಿಂದ 'ಸನ್' ಸಮೂಹದ ಒಡೆಯರಿಗೆ ಮೇಲಿಂದಮೇಲೆ ಆಘಾತಕಾರಿ ಸುದ್ದಿಗಳೇ ರಾಚಿಕೊಳ್ಳುತ್ತಿವೆ. ಕಳೆದ ಆಗಸ್ಟ್ ಮಾಹೆಯಲ್ಲಿ 'ಕಲ್' ಕೇಬಲ್ ಜಾಲಕ್ಕೆ ಸೆಕ್ಯುರಿಟಿ ಕ್ಲಿಯರೆನ್ಸ್ (ಭದ್ರತಾ ನಿರಪೇಕ್ಷಣೆ) ನವೀಕರಿಸಲು ಕೇಂದ್ರ ಗೃಹಸಚಿವಾಲಯ ನಿರಾಕರಿಸುವ ಮೂಲಕ ಮೊದಲ ಆಘಾತ ಮಾರನ್‌ಗಳ ಮೇಲೆ ಎರಗಿತ್ತು. ನಂತರ, ಮೇ 2015ರಲ್ಲಿ ಇದೇ ಸಚಿವಾಲಯ ಸನ್ ಸಮೂಹದ ಸುಮಾರು 50 ಚಾನೆಲ್‌ಗಳು ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸದಂತೆ ನಿರ್ಬಂಧ ಹೇರಿ ಮತ್ತೊಮ್ಮೆ ಕಂಗೆಡುವಂತೆ ಮಾಡಿತ್ತು. ಈ ಎರಡೂ ಸಂದರ್ಭಗಳಲ್ಲಿ ಕೋರ್ಟ್ ಮೊರೆ ಹೋಗಿದ್ದ ಮಾರನ್‌ಗಳು, ಕೇಂದ್ರ ಸರ್ಕಾರದ ನಿರ್ಬಂಧಗಳಿಂದ ಮುಕ್ತಿ ಪಡೆದು ನಿಟ್ಟುಸಿರು ಬಿಟ್ಟಿದ್ದರು.


ಅದರ ನಂತರ ಜೂನ್ ಮೊದಲ ವಾರದಲ್ಲಿ ಈ ಸಾಮ್ರಾಜ್ಯದ ಹೃದಯದ ಮೇಲೆಯೇ ಗೃಹ ಸಚಿವಾಲಯ ಪ್ರಹಾರ ನಡೆಸಿತ್ತು. ಕಲಾನಿಧಿ ಮಾರನ್ ಒಡೆತನದ ಸನ್ ನೆಟ್‌ವರ್ಕ್ ಸಮೂಹವು 'ದೇಶದ ಆರ್ಥಿಕ ಸುರಕ್ಷತೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ' ಎಂಬ ನೆಪ ಮುಂದಿಟ್ಟುಕೊಂಡ ರಾಜನಾಥ್ ಸಿಂಗ್‌ರ ಸಚಿವಾಲಯ ಸನ್ ಸಮೂಹದಡಿ ಪ್ರಸಾರಗೊಳ್ಳುತ್ತಿರುವ 33 ಚಾನೆಲ್‌ಗಳಿಗೆ ಸೆಕ್ಯುರಿಟಿ ಕ್ಲಿಯರೆನ್ಸ್ ನೀಡಲು ಖಡಾಖಂಡಿತವಾಗಿ ನಿರಾಕರಿಸಿತ್ತು. ಸನ್ ಸಮೂಹ ಈ ನಿರ್ಬಂಧವನ್ನೂ ಕೋರ್ಟ್‌ನಲ್ಲಿ ಪ್ರಶ್ನಿಸಿದೆಯಾದರು ಮೊದಲೆರಡು

ನಮ್ಮ ದೇಶದಲ್ಲಿ ಮಾಧ್ಯಮ-
ಪೊಲಿಟಿಕ್ಸ್‌ನ ಜುಗಲ್‌ಬಂದಿ
ಹೊಸದೇನೂ ಅಲ್ಲ. ಆ ನಿಟ್ಟಿನಲ್ಲಿ
ಮಾರನ್‌ಗಳ ರಾಜಕಾರಣ ಮತ್ತು ಸನ್
ನೆಟ್‌ವರ್ಕ್ ಆ ಪರಂಪರೆಯ
ಮುಂಚೂಣಿಯಲ್ಲಿ ನಿಲ್ಲುವಂತವು
1992ರಲ್ಲಿ ಸುಭಾಷ್ ಚಂದ್ರ ಜೀ
ಟಿವಿಯನ್ನು ಹುಟ್ಟುಹಾಕುತ್ತಿದ್ದಂತೆಯೇ
ಪ್ರಾದೇಶಿಕ ಪ್ರಸಾರ ಮಾಧ್ಯಮಗಳಿಗಿರುವ
ಫಲವತ್ತತೆಯನ್ನು ಅರ್ಥಮಾಡಿಕೊಂಡು
ತದನಂತರದ ವರ್ಷವೇ ತನ್ನ ಚಾನೆಲ್
ಹುಟ್ಟುಹಾಕಿದ್ದೇ ಕಲಾನಿಧಿ ಮಾರನ್
ಆತ ಡಿಎಂಕೆ ಕುಟುಂಬದ ಕುಡಿಯಾ
ಗಿದ್ದರಿಂದ ಅವಕಾಶಗಳು ಸ್ವಲ
ವಿಶಾಲವಾಗಿಯೇ ತೆರೆದುಕೊಂಡಿದ್ದವು



ಮಾರನ್ ದೊರೆಗಳ ಅಂಧಾ ದರ್ಬಾರ್

ಇವತ್ತು ಕೇಂದ್ರ ಸರ್ಕಾರ ಮತ್ತು ಜಯಲಲಿತಾ ನಡುವೆ ಅಡಕತ್ತರಿಗೆ ಸಿಲುಕಿ ಒದ್ದಾಡುತ್ತಿರುವ ಮಾರನ್ ದೊರೆಗಳು, ಒಂದು ಕಾಲದಲ್ಲಿ ಭರ್ಜರಿಯಾಗೇ ಮೆರೆದಾಡಿದವರು. ಮಾರನ್‌ಗಳು ಮಾಡಿಕೊಂಡ ಹಣದ ಹಗರಣಗಳನ್ನು ಒತ್ತಟ್ಟಿಗಿಟ್ಟು ನೋಡಿದರೂ, ಇವರು ಜಯಲಲಿತಾಗೆ ನೀಡಿದ ಕಿರುಕುಳಗಳು ಒಂದೆರಡಲ್ಲ. ಇಡೀ ತಮಿಳುನಾಡಿನ ಟೀವಿ ಜಗತ್ತನ್ನು ತಮ್ಮ ಕಬ್ಜಾದಲ್ಲಿಟ್ಟುಕೊಂಡು, ತಮಗೆ ಬೇಕಾದಂತೆ ಜನರಲ್ಲಿ ಅಭಿಪ್ರಾಯಗಳನ್ನು ರೂಪಿಸಿ ರಾಜಕೀಯ ಲಾಭ ಮಾಡಿಕೊಳ್ಳುವುದು ಅವರ ಖಯಾಲಿಯಾಗಿತ್ತು. ಇದಕ್ಕೆ ಬ್ರೇಕ್ ಹಾಕಬೇಕೆಂದೇ ಜಯಲಲಿತಾ 'ಜಯ ನ್ಯೂಸ್' ಚಾನೆಲ್ ಆರಂಭಿಸಲು ಮುಂದಾದಾಗ ಯುಪಿಎ ಸರ್ಕಾರ ಅನುಮತಿ ನೀಡಲು ನಿರಾಕರಿಸಿತ್ತು. ಅದರ ಹಿಂದೆ ದೂರಸಂಪರ್ಕ ಸಚಿವನಾಗಿದ್ದ ದಯಾನಿಧಿ ಮಾರನ್, ಕಲಾನಿಧಿ ಮಾರನ್ ಮತ್ತು ಕರುಣಾನಿಧಿಗಳ ಪ್ರಭಾವ ಇತ್ತೆನ್ನುವುದನ್ನು ಬಿಡಿಸಿ ಹೇಳಬೇಕಿಲ್ಲ. ಅಚ್ಚರಿಯ ಸಂಗತಿಯೆಂದರೆ, ಒಂದು ಹೊಸ ಚಾನೆಲ್‌ಗೆ ಅನುಮತಿ ನೀಡುವ ಅಧಿಕಾರ ಇರುವುದು ಮಾಹಿತಿ ಮತ್ತು ಪ್ರಸಾರ ಇಲಾಖೆಗೆ. ಆ ಖಾತೆ ಇವ ಬಳಿ ಇರಲಿಲ್ಲವಾದರು, ತಮ್ಮೆಲ್ಲ ಪ್ರಭಾವ ಬಳ ಜಯಲಲಿತಾಗೆ ಅನುಮತಿ ದೊರಕದಂತೆ ನೋಡಿಕೊಂಡಿದ್ದರು ಅದೇ ವೇಳೆಯಲ್ಲಿ ಸ್ಟಾರ್ ವಿಜಯ್, ರಾಜ್ ಟಿವಿಗ ನ್ಯೂಸ್ ಚಾನೆಲ್ ಆರಂಭಿಸಲು ಅನುಮತಿ ಸಲೀಸಾಗಿ ಸಿಕ್ಕಿತ



2006ರಲ್ಲಿ ಟಾಟಾ ಸ್ಕೈ ಮತ್ತು ಸ್ಟಾರ್ ಟೀವಿಗ ಷೇರು ವಿಚಾರದಲ್ಲಿ ಸಚಿವನಾಗಿದ್ದ ದಯಾನಿಧಿ ಮಾರನ್ ಕೈಯಾಡಿಸಲು ಹೋಗಿ ದೊಡ್ಡ ಹಗರಣವಾಗಿತ್ತು. ಆ ಜಯಾ ಟಿವಿ ಮಾರನ್‌ನ ಅಧಿಕಾರ ದುರುಪಯೋಗ ಕುರಿತಂತೆ ಪ್ಯಾನೆಲ್ ಡಿಸ್ಕಷನ್ ಒಂದನ್ನು ಆಯೋಜಿಸಿತ್ತು. ಆ ಕಾರ್ಯಕ್ರಮ ಜನರನ್ನು ತಲುಪಬಾರದೆನ್ನುವ ಕಾರಣ ತಮಿಳುನಾಡು ಕೇಬಲ್ ಜಾಲದ ಮೇಲೆ ತಮ್ಮ ಕಲ್ ಕೇಬಲ್‌ಗಿದ್ದ ಬಾಹುಳ್ಯವನ್ನು ಬಳಸಿಕೊಂಡು ಆ ಕಾರ್ಯಕ್ರಮ ಬಿತ್ತರವಾಗುವ ಸಮಯದಲ್ಲಿ ಜಯಾ ಟೀವಿ ಪ್ರಸಾರಗೊಳ್ಳದಂತೆ ಬ್ಲಾಕ್ ಮಾಡಿದ್ದರು. ಬೇಕುಬೇಕಂತಲೇ ಟಿವಿ ಪ್ರಸಾರವನ್ನು ಬ್ಲಾಕ್ ಮಾಡಿದ ಮಾರನ್ ದೊರೆಗಳ ಅಟ್ಟಹಾಸವನ್ನೇ ಜಯಾ ಟೀವಿ ದೊಡ್ಡ ಸುದ್ದಿಯಾಗಿ ತಮಿಳುನಾಡಿನಲ್ಲಿ ಜಯಾ ಪರ ಒಲವು ಸೃಷ್ಟಿಸಿದ್ದು ಈಗ ಇತಿಹಾಸ. ಇನ್ನು, ಕರುಣಾನಿಧಿ ಕುಟುಂಬದಲ್ಲೇ ಉತ್ತರಾಧಿಕಾರಿ ಯಾರಾಗಬೇಕೆಂಬ ವಿವಾದ ಉಂಟಾಗಿ ಸ್ಟಾಲಿನ್ ಮತ್ತು ಅಳಗಿರಿ ನಡುವೆ ಸಂಘರ್ಷ ಏರ್ಪಟ್ಟಾಗ, ಇದೇ ಮಾರನ್ ಸಹೋದರರ ಒಡೆತನವಿರುವ ದಿನಕರನ್ ಪತ್ರಿಕೆ ತಾನು ರಾಜ್ಯದ ಜನರ ಸಮೀಕ್ಷೆ ನಡೆಸಿದ್ದೇನೆ ಅಂತ ಹೇಳಿಕೊಂಡು 'ಸ್ಟಾಲಿನ್ ಮುಖ್ಯಮಂತ್ರಿ ಆಗಲು ಶೇ.70ರಷ್ಟು ಜನ ಬಯಸುತ್ತಿದ್ದಾರೆ, ಆದರೆ ಅಳಗಿರಿ ನಾಯಕನಾಗಲೆಂದು ಕೇವಲ 2% ಜನರ ಅಪೇಕ್ಷೆಯಾಗಿದ್ದರೆ, ಇನ್ನುಳಿದ 28% ಜನ ಇತರರು ಆಗಲೆಂದು ಇಷ್ಟಪಟ್ಟಿದ್ದಾರೆ' ಎಂಬ ಸುಳ್ಳು ಸಮೀಕ್ಷೆಯನ್ನು ಪ್ರಕಟಿಸಿತ್ತು. ಆಗ ರೊಚ್ಚಿಗೆದ್ದ ಅಳಗಿರಿ ಬೆಂಬಲಿಗರು ಮಧುರೈನ ಪತ್ರಿಕಾ ಕಚೇರಿಗೆ ನುಗ್ಗಿ ಬೆಂಕಿ ಹಚ್ಚಿದ್ದರು. ಮಾರನ್‌ಗಳ ರಾಜಕೀಯ ಹುಚ್ಚಾಟಕ್ಕೆ ಅವತ್ತು ಮೂವರು ಅಮಾಯಕ ಪತ್ರಿಕಾ ಸಿಬ್ಬಂದಿಗಳು ಪ್ರಾಣ ಕಳೆದುಕೊಂಡಿದ್ದರು.

ಮಾರನ್ ಬ್ರದರ್ಸ್‌ಗೆ ಜಯಮ್ಮನ 'ಸನ್'ಬಾತ್!

ಕೇಂದ್ರ ಸರ್ಕಾರ ಸನ್ ನೆಟ್‌ವರ್ಕ್ ಮೇಲೆ ಇಂತಹದ್ದೊಂದು ದಾಳಿ ಆರಂಭಿಸುವುದಕ್ಕೂ ಬಹಳ ಮುಂಚಿನಿಂದಲೇ ಜಯಲಲಿತಾ ಮಾರನ್‌ಗಳಿಗೆ ಮರ್ಮಾಘಾತ ನೀಡುತ್ತಲೇ ಬಂದಿದ್ದಳು. ತಮಿಳುನಾಡಿನಲ್ಲಿ, ಪ್ರಮುಖವಾಗಿ ಚೆನ್ನೈನಲ್ಲಿ, ಕಲ್ ಕೇಬಲ್ ನೆಟ್‌ವರ್ಕ್‌ನ ಪ್ರಾಬಲ್ಯ ಮುರಿಯುವುದಕ್ಕಾಗಿ ಆಕೆ ಚೆನ್ನೈ ಕಾರ್ಪೊರೇಷನ್ ಬಳಸಿಕೊಂಡಿದ್ದಳು.



ಚೆನ್ನೈನ ಶೇ.60ಕ್ಕೂ ಹೆಚ್ಚು ಟಿವಿಗಳು ಕಲ್ ಕೇಬಲ್‌ನ ಹಿಡಿತದಲ್ಲಿದ್ದವು. ತನ್ನ ಪಾರ್ಟಿ ಅಧಿಕಾರಕ್ಕೆ ಬರುತ್ತಿದ್ದಂತೆಯೇ ಈ ನಿಟ್ಟಿನಲ್ಲಿ ಆಕೆ ಮಾಡಿದ ಮೊದಲ ಕೆಲಸವೆಂದರೆ, ಕೇಬಲ್‌ಗಳಿಗೆ ಪ್ರತಿ ಕಿಲೋಮೀಟರ್‌ಗೆ ವರ್ಷವೊಂದಕ್ಕೆ ವಿಧಿಸಲಾಗುತ್ತಿದ್ದ ಟ್ರ್ಯಾಕ್ ದರವನ್ನು ಏಕಾಏಕಿ 9,500 ರೂಪಾಯಿಯಿಂದ 32,450 ರೂಪಾಯಿಗಳಿಗೆ ಹೆಚ್ಚಿಸಿದ್ದಳು. ಮೂರುಪಟ್ಟು ಹೆಚ್ಚಾದ ಈ ದರವನ್ನು ಕಲ್ ಕೇಬಲ್ ಭರಿಸದೇ ಹೋದಾಗ ಚೆನ್ನೈ ಕಾರ್ಪೊರೇಷನ್ ಅನ್ನು ಛೂಬಿಟ್ಟು ಬಾಕಿ ಕಟ್ಟದಿರುವ ನೆಪದಲ್ಲಿ ಕೇಬಲ್ ಜಾಲವನ್ನೇ ತೆಗೆಸುತ್ತಾ ಬಂದಳು.

ಕೇಬಲ್ ಜಾಲದ ಮೇಲಿದ್ದ ಮಾರನ್‌ಗಳ ಹಾಳೆಗಾರಿಕೆಯನ್ನು ಕುಂಠಿಸುವುದಕ್ಕೋಸ್ಕರ ಜಯಲಲಿತಾ ಸರ್ಕಾರಿ ಒಡೆತನದ 'ಅರಸು ಕೇಬಲ್' ಜಾಲಕ್ಕೆ ಪುನರ್ಜನ್ಮ ನೀಡಿ ಅದನ್ನು ಸಶಕ್ತಗೊಳಿಸಿದಳು. ಅಸಲಿಗೆ ಈ ಅರಸು ಸರ್ಕಾರಿ ಕೇಬಲ್ ಜಾಲವನ್ನು ಮೊದಲು ಆರಂಭಿಸಿದ್ದೇ ಕರುಣಾನಿಧಿ. ಆದರೆ ತನ್ನ ಸೋದರ ಸಂಬಂಧಿಗಳ ಮಾಧ್ಯಮ ಕ್ಷೇತ್ರ ವಿಸ್ತಾರಗೊಳ್ಳಲು ಇದು ಮಾರಕವಾಗುತ್ತದೆಂದು ಮನಗಂಡು ಯೋಜನೆಯನ್ನು ಆರಂಭದಲ್ಲೇ ಕೈಬಿಡಲಾಗಿತ್ತು. ಅದನ್ನೇ ಅಸ್ತ್ರ ಮಾಡಿಕೊಂಡ ಜಯಲಲಿತಾ ಅರಸು ಕೇಬಲ್ ಅನ್ನು ಮತ್ತೆ ಆರಂಭಿಸಿ, ಜನ ಕಲ್ ಕೇಬಲ್ ಹಿಡಿತದಿಂದ ಹೊರಬರುವಂತೆ ಮಾಡಿದ್ದಳು. ಇನ್ನು ಮಾರನ್ ಬ್ರದರ್ಸ್‌ಗಳ 'ಸನ್ ಪಿಕ್ಚರ್ಸ್' ಸಂಸ್ಥೆ ಕೂಡಾ ಕಾಲಿವುಡ್ ಸಿನಿಮಾದ ಮೇಲೆ ತನ್ನ ಹಿಡಿತ ಸಾಧಿಸಿಕೊಂಡಿತ್ತು, ಅದರ ಸಿಇಓ ಹನ್ಸರಾಜ್ ಸಕ್ಸೇನಾನನ್ನು ಅರೆಸ್ಟ್ ಮಾಡಿಸಿದ ಜಯಲಲಿತಾ ಜಾಮೀನು ಸಿಗದೆ ಆತ ಒಂದು ತಿಂಗಳು ಜೈಲಿನಲ್ಲಿ ಕೊಳೆಯುವಂತೆ ಮಾಡಿದ್ದಳು.

...ರಣಗಳಲ್ಲಿ ಕೋರ್ಟ್‌ನಿಂದ ಶಿಕ್ಷೆ ನೆರವು ಈ ಬಾರಿ ...ವುದು ಅಷ್ಟು ಸುಲಭವಾಗಿಲ್ಲ. ಯಾಕೆಂದರೆ, ಸ್ವತಃ ...ಯಾನಿಧಿ ಮಾರನ್‌ನೇ ಸನ್ ನೆಟ್‌ವರ್ಕ್ ಕೇಸಿಗೆ ...ಬಂಧಿಸಿದಂತೆ ಬಂಧನದ ಭೀತಿ ಎದುರಿಸುತ್ತಿರೋದು ...ೋರ್ಟ್ ವ್ಯತಿರಿಕ್ತ ತೀರ್ಪು ನೀಡಲು ದಾರಿ ...ಾಡಿಕೊಡಲಿದೆ ಎಂದೇ ಅಂದಾಜಿಸಲಾಗುತ್ತಿದೆ. ...ಗೊಮ್ಮೆ ಕೋರ್ಟ್ ಮಾರನ್‌ಗಳ ನೆರವಿಗೆ ಬರದಿದ್ದರೆ ...ರ ಚಾನೆಲ್‌ಗಳೆಲ್ಲ ಇನ್ನು ಕೆಲವೇ ದಿನಗಳಲ್ಲಿ ಪರದೆ ...ದುಕೊಂಡು ಆಟ ಮುಗಿಸಲಿವೆ.


... ಕೇಂದ್ರ ಗೃಹ ಸಚಿವಾಲಯ ಸನ್ ಸಾಮ್ರಾಜ್ಯದ ಮೇಲೆ ...ತಹ ನಿರ್ಬಂಧ ಹೇರಲು ನೆಪವಾಗಿರೋದು ಸನ್ ... ಮತ್ತು ಅದರ ಮಾಲಿಕರುಗಳಾದ ಮಾರನ್ ಬ್ರದರ್ಸ್‌ಗಳ ...ಲಿರುವ ಮೂರು ಕ್ರಿಮಿನಲ್ ಪ್ರಕರಣಗಳು. ...ದಲನೆಯದು ಏರ್‌ಸೆಲ್-ಮ್ಯಾಕ್ಸಿಸ್ ಹಗರಣ, ...ಡನೆಯದ್ದು 722.48 ಕೋಟಿಯ ಹಣದ ಅವ್ಯವಹಾರ ...ರಣ ಮತ್ತು ಮೂರನೆಯದ್ದು ಅಧಿಕಾರ ...ರುಪಯೋಗಪಡಿಸಿಕೊಂಡು ಸನ್ ಟಿವಿ ಕಚೇರಿಗೆ ಅಕ್ರಮ ...ಫೋನ್ ಸಂಪರ್ಕ ಕಲ್ಪಿಸಿಕೊಂಡ ಪ್ರಕರಣ. ಇವುಗಳಲ್ಲಿ ...ದಲನೆಯ ಮತ್ತು ಕೊನೆಯ ಪ್ರಕರಣ ಸಿಬಿಐ ತನಿಖೆಯ ...ತದಲ್ಲಿದ್ದರೆ ಎರಡನೇ ಪ್ರಕರಣವನ್ನು ಕೇಂದ್ರ ಜಾರಿ ...ರ್ದೇಶನಾಲಯ ತನಿಖೆ ನಡೆಸುತ್ತಿದೆ. ಇದೇ ವರ್ಷದ ...ರ್ಚ್ ತಿಂಗಳಿನಲ್ಲಿ ಸಮೂಹ ಮಾಧ್ಯಮಗಳಿಗೆ ಪರವಾನಗಿ ...ೀಕರಿಸುವ ನಿಯಮಗಳಲ್ಲಿ ಬದಲಾವಣೆ ತಂದಿರುವ ...ದ್ರ ಗೃಹ ಸಚಿವಾಲಯ; ಯಾವುದೇ ಒಂದು ಸಮೂಹದ ...ಾಲಿ ಒಡೆತನದಲ್ಲಿ ಶೇ.10ಕ್ಕೂ ಒಡೆತನ ಹೆಚ್ಚು ...ಬದಲಾವಣೆಗಳಾದರೆ ಮತ್ತು ಸಂಸ್ಥೆ ತನ್ನ ಪ್ರಸಾರ ವ್ಯಾಪ್ತಿಯನ್ನು ...ಪ್ರದೇಶಗಳಿಗೆ ಇಲ್ಲವೇ ನಕ್ಸಲ್‌ಪೀಡಿತ ಪ್ರದೇಶಗಳಿಗೆ ...ಸಿದರೆ ಮತ್ತು ಸಂಸ್ಥೆ ದೇಶವಿರೋಧಿ ಅಥವಾ ಕ್ರಿಮಿನಲ್ ...ಟುವಟಿಕೆಗಳಲ್ಲಿ ಭಾಗಿಯಾದ ಕುರುಹು ಲಭಿಸಿದರೆ ಅದಕ್ಕೆ ...ಿದ್ದ ಪರವಾನಗಿಯನ್ನು ರದ್ದುಪಡಿಸಬಹುದೆಂಬ ...ಯಮಗಳನ್ನು ರೂಪಿಸಿಕೊಂಡಿದೆ. ಅದರ ಪ್ರಕಾರ ಮೂರು ...ಮಿನಲ್ ಪ್ರಕರಣದಲ್ಲಿ ಭಾಗಿಯಾಗಿರುವ ಸನ್ ...ವರ್ಕ್‌ಗೆ ಕ್ಲಿಯರೆನ್ಸ್ ನೀಡಲು ಸಾಧ್ಯವಿಲ್ಲವೆನ್ನುವುದು ... ಸಚಿವಾಲಯದ ವಾದ.


ಇದೇ ಕಾರಣಗಳಿಗೆ ಕಳೆದ ವರ್ಷ 'ಕಲ್' ಕೇಬಲ್ ...ಟ್‌ವರ್ಕ್‌ನ ಪರವಾನಗಿಯನ್ನು ಕೇಂದ್ರ ಸರ್ಕಾರ ...ದ್ದುಪಡಿಸಲು ಮುಂದಾಗಿದ್ದಾಗ ಮಧ್ಯ ಪ್ರವೇಶಿಸಿದ್ದ ...ದ್ರಾಸ್ ಹೈಕೋರ್ಟ್ 'ಕೇಬಲ್ ಕಂಪನಿ ಕೇವಲ ವಿತರಣಾ ...ಜವಾಬ್ದಾರಿಯನ್ನು ಮಾತ್ರ ಹೊತ್ತಿರುತ್ತದೆಯೇ ಹೊರತು ...ಸಾರದ ಹೊಣೆಯನ್ನಲ್ಲ. ಪ್ರಸಾರಗೊಳ್ಳುವ ...ರ್ಯಕ್ರಮಗಳಿಗೂ, ಅಲ್ಲಿನ ಚಟುವಟಿಕೆಗಳಿಗೂ ಕೇಬಲ್ ... ಹೊಣೆಗಾರನಲ್ಲ, ಹಾಗಾಗಿ ಭದ್ರತೆಯ ಕಾರಣಕ್ಕೆ ...ನ್ನು ನಿರ್ಬಂಧಿಸುವುದು ಸರಿಯಲ್ಲ' ಎಂದು ಮಾರನ್ ...ವಾಗಿ ತೀರ್ಪು ಪ್ರಕಟಿಸಿತ್ತು. ಆದರೆ ಈ ಬಾರಿ ಕೇಂದ್ರ ...ಕ ಸಚಿವಾಲಯ 'ಪ್ರಸಾರಣ' ಸಂಸ್ಥೆಯನ್ನೇ ...ರೋಪಿಯನ್ನಾಗಿಸಿರುವುದರಿಂದ ನ್ಯಾಯಾಲಯ ಕೂಡಾ ...ಮಾರನ್‌ಗಳ ನೆರವಿಗೆ ಬರಲಾರದು.


'ಸನ್'ನ 'ಕಲೆ' ಮತ್ತು 'ನಿಧಿ'

...ನಮ್ಮ ದೇಶದಲ್ಲಿ ಮಾಧ್ಯಮ-ಪೊಲಿಟಿಕ್ಸ್‌ನ ...ಗಲ್‌ಬಂದಿ ಹೊಸದೇನೂ ಅಲ್ಲ, ಆ ನಿಟ್ಟಿನಲ್ಲಿ ...ಮಾರನ್‌ಗಳ ರಾಜಕಾರಣ ಮತ್ತು ಸನ್ ನೆಟ್‌ವರ್ಕ್ ಆ ...ಪರೆಯ ಮುಂಚೂಣಿಯಲ್ಲಿ ನಿಲ್ಲುವಂತವು. 1992ರಲ್ಲಿ ...ಾಷ್ ಚಂದ್ರ ಜೀ ಟಿವಿಯನ್ನು ಹುಟ್ಟುಹಾಕುತ್ತಿದ್ದಂತೆಯೇ ...ದೇಶಿಕ ಪ್ರಸಾರ ಮಾಧ್ಯಮಗಳಿಗಿರುವ ಫಲವತ್ತತೆಯನ್ನು ...ರ್ಥಮಾಡಿಕೊಂಡು ತದನಂತರದ ವರ್ಷವೇ ತನ್ನ ಚಾನೆಲ್ ...ಹುಟ್ಟುಹಾಕಿದ್ದೇ ಕಲಾನಿಧಿ ಮಾರನ್. ಆತ ಡಿಎಂಕೆ ...ಕುಟುಂಬದ ಕುಡಿಯಾಗಿದ್ದರಿಂದ ಅವಕಾಶಗಳು ಸ್ವಲ್ಪ ...ಸಲವಾಗಿಯೇ ತೆರೆದುಕೊಂಡಿದ್ದವು. ತನ್ನ ಸಾಮ್ರಾಜ್ಯವನ್ನು ...ಷ್ಟು ವೇಗವಾಗಿ ಮತ್ತು ಪ್ರಭಾವಶಾಲಿಯಾಗಿ ...ದನೆಂದರೆ ಕೇವಲ ಒಂದೇ ದಶಕದಲ್ಲಿ ಆತ ದೇಶದ ...ಮಂತ ಮಾಧ್ಯಮ ದೊರೆಯಾಗಿ ರೂಪುಗೊಂಡಿದ್ದ. ...ಸಾಮ್ರಾಜ್ಯ ಎಷ್ಟು ವಿಶಾಲವಾಗಿ ವ್ಯಾಪಿಸಿಕೊಂಡಿತ್ತೆಂದರೆ ... ಮತ್ತು ರೇಡಿಯೊ ಚಾನೆಲ್‌ಗಳು ಕೇಬಲ್ ನೆಟ್‌ವರ್ಕ್ ...ಿ, ದಿನಪತ್ರಿಕೆಗಳು, ನಿಯತಕಾಲಿಕೆಗಳು ಅಂತ ದೇಶದ ...75ರಷ್ಟು ಮಾಧ್ಯಮ ಲೋಕವನ್ನು ಸನ್ ನೆಟ್‌ವರ್ಕ್ ...ವೊಂದೇ ಆವರಿಸಿಕೊಂಡಿತ್ತು.

... ಉದ್ದಿಮೆ ಚಾಕಚಕ್ಯತೆ ಮತ್ತು ರಾಜಕೀಯ ಪ್ರಭಾವಗಳು ...ಟ್ಟಿಗೆ ಪೂರಕವಾಗಿ ಗಟ್ಟಿಗೊಳ್ಳುತ್ತಾ ಬಂದವು. ...ದಲೆಯದ್ದು ಸನ್ ನೆಟ್‌ವರ್ಕ್ ಕಂಪನಿಯನ್ನು ...ಪಾದಾಯಕ ಸಂಸ್ಥೆಯನ್ನಾಗಿ ರೂಪಿಸಿದವು. 2014ರ ...ಪ್ರಸಿದ್ಧ ಅಂಕಿಅಂಶಗಳಂತೆ ಕಲಾನಿಧಿ ಮಾರನ್ ಮತ್ತು ...ನ ಹೆಂಡತಿ ಕಾವೇರಿ ಮಾರನ್ ದೇಶದಲ್ಲಿ ಅತಿಹೆಚ್ಚು ...ಬಳ ಪಡೆಯುವ ಕಾರ್ಪೋರೇಟ್ ವಲಯದ ...ಗಳಾಗಿದ್ದರು. ಸಂಸ್ಥೆಯ ಮೊದಲ ದಶಕದಲ್ಲಿ,







ಕುಟುಂಬದ ರಾಜಕಾರಣದ ಗ್ರಾಫ್ ಕೂಡಾ ಚೆನ್ನಾಗಿಯೇ ಏರಿತು. ಮೊದಲು ತನ್ನ ತಂದೆ ಮುರಸೋಳಿ ಮಾರನ್‌ರನ್ನು ವಾಜಪೇಯಿ ಸರ್ಕಾರದಲ್ಲಿ ಕೈಗಾರಿಕಾ ಮಂತ್ರಿಯನ್ನಾಗಿಸುವಲ್ಲಿ ಯಶಸ್ವಿಯಾಗಿದ್ದ ಕಲಾನಿಧಿ ಮಾರನ್, ತದನಂತರ ಯುಪಿಎ ಸರ್ಕಾರದಲ್ಲಿ ತನ್ನ ತಮ್ಮ ದಯಾನಿಧಿ ಮಾರನ್‌ನನ್ನು ದೂರಸಂಪರ್ಕ ಸಚಿವನನ್ನಾಗಿಸುವಲ್ಲೂ ಗೆದ್ದಿದ್ದ. ಕೇಂದ್ರದಲ್ಲಿ ಅಧಿಕಾರ ಹಿಡಿದಿದ್ದ ಪಕ್ಷಗಳು ಬದಲಾಗಿದ್ದರೂ (ಒಮ್ಮೆ ಬಿಜೆಪಿ ನೇತೃತ್ವದ ಎನ್‌ಡಿಎ, ಮತ್ತೊಮ್ಮೆ ಕಾಂಗ್ರೆಸ್ ನೇತೃತ್ವದ ಯುಪಿಎ) ತಮ್ಮ ಕುಟುಂಬ ಅಧಿಕಾರ ವಂಚಿತವಾಗುದಂತೆ ಕಲಾನಿಧಿ ಮಾರನ್ ನೋಡಿಕೊಂಡಿದ್ದ. ಇದರಲ್ಲಿ ಕರುಣಾನಿಧಿ ಪಾತ್ರವೂ ಅಪಾರವಾಗಿದೆ. ಅಲ್ಲದೇ ಕಲಾನಿಧಿ, ಸನ್ ನೆಟ್‌ವರ್ಕ್ ಹುಟ್ಟುಹಾಕಿದ ಮೊದಲ ದಶಕದ ಅವಧಿಯ ಸುಮಾರು ಏಳು ವರ್ಷಗಳ ಕಾಲ ತಮಿಳುನಾಡಿನಲ್ಲಿ ಕರುಣಾನಿಧಿ ಮುಖ್ಯಮಂತ್ರಿಯಾಗಿ ಅಧಿಕಾರದಲ್ಲಿದ್ದದ್ದು ಕೂಡಾ ಸನ್ ನೆಟ್‌ವರ್ಕ್ ಗೂಳಿಯಂತೆ ಮುನ್ನುಗ್ಗಲು ನೆರವಾಯಿತು.

ಒಂದು ಟಿವಿ ಸಾಮ್ರಾಜ್ಯ ವಿಸ್ತಾರವಾಗಿ ಹರವಿಕೊಳ್ಳಬೇಕೆಂದರೆ ಕೇಬಲ್ ಜಾಲದ ಸಪೋರ್ಟ್‌ನ ಮಹತ್ವವನ್ನು ಕಲಾನಿಧಿ ಮಾರನ್ ಬಹುಬೇಗ ಅರ್ಥಮಾಡಿಕೊಂಡಿದ್ದ. ಅದಕ್ಕಾಗಿಯೇ 'ಸುಮಂಗಲಿ' ಎಂಬ ಹೆಸರಿನಲ್ಲಿ (ನಂತರ ಈ ಹೆಸರನ್ನು 'ಕಲ್ ಕೇಬಲ್ಸ್' ಎಂದು ಬದಲಿಸಲಾಯ್ತು) ಕೇಬಲ್ ಜಾಲವನ್ನೂ ಆರಂಭಿಸಿ ಅದನ್ನು ಎಲೆಕ್ಷನ್ ಸಂದರ್ಭದಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದ. ಸನ್ ನೆಟ್‌ವರ್ಕ್ ಮತ್ತು ಕೇಬಲ್ ಜಾಲಗಳ ಪರಸ್ಪರ ಹೊಂದಾಣಿಕೆಯಿಂದ ಕಲಾನಿಧಿ, ಕೇಬಲ್ ಜಾಲವಿಲ್ಲದ ಕೇವಲ ನೆಟ್‌ವರ್ಕ್‌ಗೆ ಮಾತ್ರ ಸೀಮಿತಗೊಂಡ ಚಾನೆಲ್‌ಗಳನ್ನೇ ಇನ್ನಿಲ್ಲವಾಗಿಸುವ ಆತಂಕವನ್ನು ಸೃಷ್ಟಿಸಿದ್ದು ಸುಳ್ಳಲ್ಲ. ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರವು (ಟ್ರಾಯ್) 'ಪ್ರಸಾರ ಮತ್ತು ಹಂಚಿಕೆಯ ಒಡೆತನಗಳು ಒಬ್ಬರದೇ/ಒಂದೇ ಸಂಸ್ಥೆಯದೇ ಆಗಿರಬಾರದು' ಎನ್ನುವ ನಿಯಮ ಜಾರಿಗೆ ತರುವಲ್ಲೂ ಕಲಾನಿಧಿ ಸೃಷ್ಟಿಸಿದ್ದ ಆತಂಕದ ಪಾಲು ಇದ್ದೇ ಇದೆ.

ಸನ್ ನೆಟ್‌ವರ್ಕ್, ಷೇರು ಮಾರುಕಟ್ಟೆಯನ್ನು ಪ್ರವೇಶಿಸಿದ್ದು 2006ರಲ್ಲಿ, ಆರಂಭದಲ್ಲೇ ಅದರ ಮೌಲ್ಯ ಏಕಾಏಕಿ 9000 ಕೋಟಿ ರೂಪಾಯಿಗೆ ಜಿಗಿದಿತ್ತು. ನೆನಪಿರಲಿ, ಆ ಸಮಯದಲ್ಲಿ ಎಚ್‌ಡಿ ಮೀಡಿಯಾ, ಡೆಕ್ಕನ್ ಕ್ರೋನಿಕಲ್, ಎನ್‌ಡಿಟಿವಿ, ಟಿವಿ ಟುಡೇ, ಬಾಲಾಜಿ ಟೆಲಿಫಿಲಮ್ಸ್ ಮತ್ತು ಟಿವಿ 18 ಇವಿಷ್ಟರ ಷೇರು ಮೌಲ್ಯಗಳನ್ನು ಒಟ್ಟಿಗೆ ಸೇರಿಸಿದರೂ ಆಯಾಸದಿಂದ 9000 ಕೋಟಿಯ ಗಡಿಯನ್ನು ಮುಟ್ಟುತ್ತಿದ್ದವು! ಅಂದಹಾಗೆ, ಆಗಿನ್ನೂ ದಯಾನಿಧಿ ಮಾರನ್ ಕೇಂದ್ರದಲ್ಲಿ ದೂರಸಂಪರ್ಕ ಸಚಿವನಾಗಿ ಅಧಿಕಾರದಲ್ಲಿದ್ದ.

ಏರ್‌ಸೆಲ್-ಮ್ಯಾಕ್ಸಿಸ್ ಹಗರಣ

ದಯಾನಿಧಿ ಮಾರನ್ ಅಧಿಕಾರದಲ್ಲಿದ್ದಾಗಲೇ ಬೆಳಕಿಗೆ ಬಂದ ಹಗರಣ ಇದು. ಈ ಡೀಲ್‌ನಿಂದಾಗಿ ಸುಮಾರು 629 ಕೋಟಿಯಷ್ಟು ಹಣ ಮಾರನ್‌ಗಳ ತಿಜೋರಿ ಸೇರಿತ್ತು. ಮ್ಯಾಕ್ಸಿಸ್ ಅನ್ನೋದು ಮಲೇಷಿಯಾ ಮೂಲದ ಒಂದು ನೆಟ್‌ವರ್ಕ್ ಕಂಪನಿ. ಅದು ಭಾರತದಲ್ಲಿ ತನ್ನ ವಹಿವಾಟು ಪ್ರಾಬಲ್ಯ ಬೀರಲು ಬಯಸಿತ್ತು. ಅದೇ ವೇಳೆಗೆ ತಮಿಳುನಾಡು ಮೂಲದ ಎಸ್.ಶಿವಶಂಕರನ್ 'ಏರ್‌ಸೆಲ್' ಟೆಲಿಕಾಂ ಸಂಸ್ಥೆಯನ್ನು ಹುಟ್ಟುಹಾಕಿ ಲಾಭದ ಮುಖ ನೋಡಿದ್ದರು. ಏರ್‌ಸೆಲ್ ಕಂಪನಿಯನ್ನು ಖರೀದಿಸುವ ಮೂಲಕ ಭಾರತದಲ್ಲಿ ತನ್ನ ನೆಲೆ ಗಟ್ಟಿಗೊಳಿಸಿಕೊಳ್ಳುವ ನಿರ್ಧಾರಕ್ಕೆ ಮ್ಯಾಕ್ಸಿಸ್ ಕಂಪನಿ ಬಂದಿತ್ತು. ಆದರೆ ಶಿವಶಂಕರನ್‌ಗೆ ಏರ್‌ಸೆಲ್ ಜಾಲವನ್ನು ಮಾರಾಟ ಮಾಡುವ ಉದ್ದೇಶವಿರಲಿಲ್ಲ. ಆಗ ನಡೆದಿದ್ದೇ ಮ್ಯಾಕ್ಸಿಸ್ ಕಂಪನಿ ಮತ್ತು ಕಲಾನಿಧಿಯ ಸನ್ ನೆಟ್‌ವರ್ಕ್‌ನ ಮೆಗಾ ಡೀಲ್. ದೂರಸಂಪರ್ಕ ಮಂತ್ರಿಯಾಗಿದ್ದ ತನ್ನ ತಮ್ಮ ದಯಾನಿಧಿ ಮಾರನ್‌ನ ಅಧಿಕಾರ ದುರ್ಬಳಕೆ ಮಾಡಿಕೊಂಡು ಶಿವಶಂಕರನ್‌ಗೆ ಬ್ಲ್ಯಾಕ್‌ಮೇಲ್ ಮಾಡಿಸಿದ ಕಲಾನಿಧಿ ಏರ್‌ಸೆಲ್ ಸಂಸ್ಥೆಯನ್ನು ಕಡಿಮೆ ಬೆಲೆಗೆ ಮ್ಯಾಕ್ಸಿಸ್ ಕಂಪನಿಗೆ ಮಾರಾಟ ಮಾಡಿಸಿದ್ದ. ಇದನ್ನು ಪುಷ್ಠೀಕರಿಸುವಂತೆ ಮ್ಯಾಕ್ಸಿಸ್ ಮತ್ತು ಏರ್‌ಸೆಲ್ ಮಾರಾಟದ ಒಪ್ಪಂದ ನಡೆದ ಕೆಲ ದಿನಗಳಲ್ಲೇ ಮಾರನ್‌ಗಳ ಸನ್ ನೆಟ್‌ವರ್ಕ್‌ನಲ್ಲಿ 629 ಕೋಟಿ ರೂಪಾಯಿಯ ಷೇರನ್ನು ಮ್ಯಾಕ್ಸಿಸ್ ಕಂಪನಿ ಖರೀದಿಸಿತ್ತು.


ಇದರ ಬೆನ್ನಿಗೆ ಬಯಲಾದದ್ದೇ ಬಿಎಸ್‌ಎನ್‌ಎಲ್ ಲೈನ್‌ಗಳ ಕಳವು ಹಗರಣ. ಚೆನ್ನೈನಲ್ಲಿ ದಯಾನಿಧಿ ಮಾರನ್‌ನ ಮನೆಯಿಂದ ಸನ್ ನೆಟ್‌ವರ್ಕ್ ಕಚೇರಿಗೆ ರಹಸ್ಯವಾಗಿ 323 ಬಿಎಸ್‌ಎನ್‌ಎಲ್ ಲೈನ್‌ಗಳನ್ನು ವ್ಯವಸ್ಥಿತವಾಗಿ ಸಂಪರ್ಕ ಕಲ್ಪಿಸಲಾಗಿತ್ತು. ಆ ಸಂಪರ್ಕಕ್ಕೆ ಬಳಸಲಾದದ್ದು ಸಾಮಾನ್ಯ ಕೇಬಲ್‌ಗಳಾಗಿರಲಿಲ್ಲ. ಅವು ಐಎಸ್‌ಡಿಎನ್ (Integrated Services Digital Network) ಕೇಬಲ್‌ಗಳಾಗಿದ್ದವು. ಧ್ವನಿ, ವೀಡಿಯೊ, ದತ್ತಾಂಶ ಮತ್ತು ಇತರೆ ಮಾಹಿತಿಗಳನ್ನು ಸ್ಪಷ್ಟವಾಗಿ, ತ್ವರಿತವಾಗಿ ರವಾನೆ ಮಾಡುವುದಕ್ಕೆ ಈ ಕೇಬಲ್‌ಗಳನ್ನು ಬಳಸಲಾಗುತ್ತದೆ. ಇವು ದುಬಾರಿಯ ಕೇಬಲ್‌ಗಳು. ಇವುಗಳ ಸಂಪರ್ಕ ಪಡೆಯಬೇಕೆಂದರೆ ಬಿಎಸ್‌ಎನ್‌ಎಲ್‌ಗೆ ಹೆಚ್ಚುವರಿ ಶುಲ್ಕವನ್ನು ಪಾವತಿಸಬೇಕಾಗುತ್ತದೆ. ಆದರೆ ತಮ್ಮ ಒಡೆತನದ ಸನ್ ನೆಟ್‌ವರ್ಕ್ ಟಿವಿ ಚಾನೆಲ್‌ಗಳು ಬೇರೆ ನೆಟ್‌ವರ್ಕ್‌ಗಿಂತ ವೇಗವಾಗಿ ಮತ್ತು ಉತ್ಕೃಷ್ಟ ಮಟ್ಟದ ಸೇವೆ ಒದಗಿಸಲು ನೆರವಾಗುವಂತೆ ಅವುಗಳನ್ನು ಪುಕ್ಕಟೆಯಾಗಿ ನೆಲದಲ್ಲಿ ಸುರಂಗ ಕೊರೆದು ಸಂಪರ್ಕ ನೀಡಲಾಗಿತ್ತು. ಈ ಕುರಿತು ತನಿಖೆ ನಡೆಸುತ್ತಿರುವ ಸಿಬಿಐ, ಇದರಿಂದಾಗಿ ಬಿಎಸ್‌ಎನ್‌ಎಲ್‌ಗೆ ಏನಿಲ್ಲವೆಂದರೂ 300 ಕೋಟಿ ಲುಕ್ಸಾನಾಗಿದೆ ಎಂದು ಅಂದಾಜು ಮಾಡಿದೆ.

ಈ ಹಗರಣ ಬಯಲಾಗಿ, ಸಿಬಿಐ ದಯಾನಿಧಿ ಮಾರನ್‌ನನ್ನೇ ಮೊದಲ ಆರೋಪಿಯನ್ನಾಗಿ ಕೇಸು ದಾಖಲಿಸಿಕೊಂಡ ನಂತರ ವಿಧಿ ಇಲ್ಲದೆ ದಯಾನಿಧಿ ಮಾರನ್ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಯ್ತು. ಬೇರೆ ಯಾರೇ ದೂರಸಂಪರ್ಕ ಖಾತೆಯ ಹೊಣೆ ಹೊತ್ತುಕೊಂಡರೂ ತಮ್ಮ ಆಟಗಳೆಲ್ಲ ರುಜುವಾತಾಗಿ ಬಿಡುತ್ತವೆ ಎಂಬ ಭಯಕ್ಕೆ ಬಿದ್ದ ಮಾರನ್ ಬ್ರದರ್ಸ್, ತಾವು ರಾಜೀನಾಮೆ ನೀಡಿದರೂ ಆ ಸ್ಥಾನಕ್ಕೆ ಕರುಣಾನಿಧಿಯ ಮತ್ತೊಬ್ಬ ಚೇಲಾ ಎ.ರಾಜಾ ಬಂದು ಕೂರುವಂತೆ ಅಣಿಗೊಳಿಸಿದ್ದರು. ಆತನೂ ಕರುಣಾನಿಧಿ ಮಗಳು ಕನಿಮೋಳಿ ಮಾತುಕೇಳಿ 2ಜಿ ಹಗರಣ ಮೈಮೇಲೆ ಎಳೆದುಕೊಂಡು ರಾಡಿಯೆದ್ದು ರಾಜೀನಾಮೆ ನೀಡಿದ. ಅದೇವೇಳೆಗೆ, ಮಾರನ್ ಬ್ರದರ್ಸ್‌ಗಳ ಒಟ್ಟಾರೆ ಆಸ್ತಿಯಲ್ಲಿ ಸುಮಾರು 742.58 ಕೋಟಿ ಹಣ ಅಕ್ರಮವಾಗಿ ಹರಿದಾಡಿರುವುದನ್ನು ಪತ್ತೆ ಹಚ್ಚಿದ ಜಾರಿ ನಿರ್ದೇಶನಾಲಯ, ಅಷ್ಟು ಮೊತ್ತದ ಆಸ್ತಿಯನ್ನು ನೋಟಿಫೈ ಮಾಡಿ ತನಿಖೆ ನಡೆಸಲು ಶುರು ಮಾಡಿತು.

ಇದೆಲ್ಲಾ ಆಗುವ ವೇಳೆಗಾಗಲೆ, ಕೇಂದ್ರದಲ್ಲಿ ಯುಪಿಎ ಅಧಿಕಾರ ಕಳೆದುಕೊಂಡು ಬಿಜೆಪಿ ಗದ್ದುಗೆಗೇರಿದ್ದರೆ, ಅತ್ತ ತಮಿಳುನಾಡಿನಲ್ಲಿ ಕರುಣಾನಿಧಿ ನೆಲಕಚ್ಚಿ 'ಅಮ್ಮ'ನ ಸಾಮ್ರಾಜ್ಯ ಅಸ್ತಿತ್ವಕ್ಕೆ ಬಂದಿತ್ತು. ಕರುಣಾನಿಧಿಯ ರಾಜಕೀಯ ಪ್ರಾಬಲ್ಯಕ್ಕೆ ಪೆಟ್ಟು ಕೊಡಬೇಕೆಂದರೆ, ಮೊದಲು ಅವರ ಬೆನ್ನೆಲುಬಿನಂತಿರುವ ಮಾರನ್ ಮಾಧ್ಯಮ ಸಾಮ್ರಾಜ್ಯಕ್ಕೆ ಶಾಸ್ತಿ ಮಾಡಬೇಕೆನ್ನುವುದು ಜಯಲಲಿತಾ ಲೆಕ್ಕಾಚಾರವಾಗಿದ್ದರೆ, ತಮ್ಮ ಗೆಲುವಿನಲ್ಲಿ ಪ್ರಧಾನ ಪಾತ್ರ ವಹಿಸಿದ್ದ ಅಂಬಾನಿಗಳ ರಿಲಾಯನ್ಸ್ ಡಿಟಿಎಚ್ ನೆಟ್‌ವರ್ಕ್‌ಗೆ ದಾರಿ ಸುಗಮ ಮಾಡಿಕೊಡುವ ಹೊಣೆ ಬಿಜೆಪಿ ಕೇಂದ್ರ ಸರ್ಕಾರದ ಮೇಲಿತ್ತು. ಇವೆರಡೂ ಒಟ್ಟಿಗೆ ಕಲೆತ ಪರಿಣಾಮವಾಗಿ ಇವತ್ತು ಮಾರನ್‌ಗಳ ಸನ್ ನೆಟ್‌ವರ್ಕ್ ಒಂದರ ಮೇಲೊಂದು ಆಘಾತ ಅನುಭವಿಸಬೇಕಾಗಿ ಬಂದಿದೆ. ಅಷ್ಟಕ್ಕೂ, ರಾಜಕೀಯ ಕುತಂತ್ರ ಮತ್ತು ಭ್ರಷ್ಟ ಹಣದಿಂದಲೇ ಮೈದಳೆದ ಮಾರನ್ ಸಾಮ್ರಾಜ್ಯಕ್ಕೆ ಇಂತಹದ್ದೊಂದು ಶಾಸ್ತಿ ಆಗಲೇಬೇಕಿತ್ತು!

■ ಗಿರೀಶ್ ತಾಳಿಕಟ್ಟೆ

ಮಳವಳ್ಳಿ: ಡಿವೈಎಸ್ಪಿ ಎತ್ತಂಗಡಿ ಯತ್ನದಲ್ಲಿ ಮರಳು ಮಾಫಿಯಾ?



ಮಂಡ್ಯ, ಮದ್ದೂರು, ಮಳವಳ್ಳಿ ಭಾಗಗಳಲ್ಲಿ ಮರಳು ಮಾಫಿಯಾ ಅದೆಷ್ಟು ಭಯಾನಕವಾಗಿ ಬೆಳೆದುನಿಂತಿದೆ ಎನ್ನುವುದಕ್ಕೆ ಈ ಹಿಂದೆ ಡಿವೈಎಸ್ಪಿ ಸವಿತಾ ಹೂಗಾರ್ ಮತ್ತು ತಹಸೀಲ್ದಾರ್ ಎಚ್.ಎಲ್. ನಾಗರಾಜು ಮೇಲೆ ನಡೆದಿದ್ದ ಕೊಲೆಯತ್ನಗಳೇ ಸಾಕ್ಷಿ. ಘಟಾನುಘಟಿ ರಾಜಕಾರಣಿಗಳ ಬಂಧುಬಾಂಧವರೇ ಈ ಮರಳು ಮಾಫಿಯಾದಲ್ಲಿ ನೆಲೆ ಕಂಡುಕೊಂಡಿರುವುದರಿಂದಲೇ ಇವತ್ತು ಅಕ್ರಮ ಮರಳು ಗಣಿಗಾರಿಕೆ ಇಲ್ಲಿ ಎಗ್ಗಿಲ್ಲದಂತೆ ನಡೆಯುತ್ತಿದೆ. ಅದಕ್ಕೆ ಅಡ್ಡ ಬರುವವರನ್ನು ನಿವಾರಿಸಿಕೊಳ್ಳಲು ಎಂತಹ ಸಾಹಸಕ್ಕೂ ಅವರು ಸೈ ಎನ್ನುವುದಕ್ಕೆ ಮೇಲಿನ ಉದಾಹರಣೆಗಳೇ ಸಾಕ್ಷಿ. ಇದೀಗ ಅದೇ ಮರಳು ಮಾಫಿಯಾ ತಮ್ಮ ದಂಧೆಗೆ ಕಂಟಕವಾಗಿರುವ ಡಿವೈಎಸ್ಪಿ ಆರ್.ಶಿವಕುಮಾರ್ ಎತ್ತಂಗಡಿಗೆ ರಹಸ್ಯ ಕಾರ್ಯಾಚರಣೆ ನಡೆಸುತ್ತಿದೆ.

ಅಕ್ರಮ ಮರಳು ದಂಧೆಕೋರರು, ಜೂಜುಕೋರರು, ರೌಡಿಗಳ ಆರ್ಭಟಕ್ಕೆ ಕಡಿವಾಣ ಹಾಕಿದ್ದೇ ಡಿವೈಎಸ್ಪಿ ಶಿವಕುಮಾರ್ ವಿರುದ್ಧ ದುಷ್ಟಕೂಟಗಳೆಲ್ಲ ಕತ್ತಿ ಮಸೆಯಲು ಕಾರಣವಾಗಿದೆ. ಮಳವಳ್ಳಿ ವಿಭಾಗದ ಡಿವೈಎಸ್ಪಿಯಾಗಿ ಬಂದ ಒಂದು ವರ್ಷದಲ್ಲೇ ಅಕ್ರಮ ಮರಳು ದಂಧೆಕೋರರ ಪಾಲಿಗೆ ಸಿಂಹಸ್ವಪ್ನವಾಗಿ ಅವರ ದಂಧೆಗೆ ಕಡಿವಾಣ ಹಾಕಿರುವ ಶಿವಕುಮಾರ್ ವರ್ಗಾವಣೆಗೆ ದೊಡ್ಡಮಟ್ಟದಲ್ಲೇ ದಂಧೆಕೋರರು ಪ್ರಯತ್ನ ನಡೆಸುತ್ತಿದ್ದಾರೆ. ಶಿಂಷಾ ನದಿಪಾತ್ರದಲ್ಲಿ ಅಕ್ರಮವಾಗಿ ಮರಳು ತುಂಬುವ ದಂಧೆಕೋರರು ಹಾಗೂ ಟಿ.ನರಸೀಪುರ ಮಾರ್ಗವಾಗಿ ಮರಳು ಸಾಗಿಸುವ ದಂಧೆಕೋರರಿಗೆ ಅರ್ಜೆಂಟಾಗಿ ಡಿವೈಎಸ್ಪಿ ಶಿವಕುಮಾರ್ ಎತ್ತಂಗಡಿ ಆಗಲೇಬೇಕಿದೆ. ಅದಕ್ಕಾಗಿ ಬೆಂಗಳೂರಿನ ಪ್ರಭಾವಿ ರಾಜಕಾರಣಿಗಳ ಮನೆ ಬಾಗಿಲಿಗೆ ಅಲೆಯುತ್ತಿದ್ದಾರೆ. ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಮನೆ ಅಂಗಳದಲ್ಲೂ ಕಾಣಿಸಿಕೊಂಡು ಅವರ ಪತ್ನಿ ಪ್ರೇಮಾಕೃಷ್ಣರಿಗೆ ದುಂಬಾಲು ಬಿದ್ದಿದ್ದಾರೆನ್ನುವ ಸುದ್ದಿಯೂ ಕೇಳಿಬರುತ್ತಿದೆ.

ಮರಳುಗಳ್ಳರಿಗೆ ಬಿಸಿನೀರು

ಮೂಲತಃ ಜಗಳೂರು ತಾಲ್ಲೂಕಿನ ತಮಲೆಹಳ್ಳಿಯವರಾದ ಶಿವಕುಮಾರ್ ಮೈಸೂರು ಮಹಾರಾಜ ಕಾಲೇಜಿನಲ್ಲಿ ಡಿಗ್ರಿ ಮುಗಿಸಿ ಮಾನಸಗಂಗೋತ್ರಿಯಲ್ಲಿ ಎಂಎ ಪಡೆದು, 2010ರಲ್ಲಿ ಕೆಪಿಎಸ್‌ಸಿ ಪರೀಕ್ಷೆ ಮೂಲಕ ಡಿವೈಎಸ್ಪಿ ಆದಂತವರು. ಇದಕ್ಕೂ ಮುನ್ನ ನಿಡಗುಂದಿಯಲ್ಲಿ ಡಿವೈಎಸ್ಪಿಯಾಗಿ, ನಕ್ಸಲ್ ನಿಗ್ರಹದಳದಲ್ಲಿ ಕೆಲಸ ಮಾಡಿ ಇಲಾಖೆಯಲ್ಲಿ ಒಳ್ಳೆಯ ಹೆಸರನ್ನು ಸಂಪಾದಿಸಿದ್ದಾರೆ. ಇಲ್ಲಿಗೆ ವರ್ಗವಾಗಿ ಬಂದು ಚಾರ್ಜ್ ತೆಗೆದುಕೊಳ್ಳುತ್ತಿದ್ದಂತೆಯೇ ಇಲ್ಲಿ ನಡೆಯುತ್ತಿರುವ ಅಕ್ರಮ ಮರಳು ದಂಧೆಯ ಗಂಭೀರತೆ ಅವರಿಗೆ ಮನದಟ್ಟಾಗಿತ್ತು.

ಮದ್ದೂರು ತಾಲ್ಲೂಕಿನಲ್ಲಿ ಹರಿಯುವ ಶಿಂಷಾ ನದಿ ಪಾತ್ರದಲ್ಲಿ ಮರಳು ತೆಗೆಯುವುದನ್ನು ನಿಷೇಧಿಸಿ, 2003ರಲ್ಲೇ ಸರ್ಕಾರ ಅಧಿಕೃತ ಆದೇಶ ಹೊರಡಿಸಿದೆಯಾದರೂ ಅಕ್ರಮ ಮರಳುಗಾರಿಕೆ ಮಾತ್ರ ನಿಂತಿರಲಿಲ್ಲ. ಈ ಹಿಂದೆ ಡಾ.ಎಚ್.ಎಲ್.ನಾಗರಾಜು ಮದ್ದೂರು ತಹಸೀಲ್ದಾರ್ ಆಗಿದ್ದಾಗ ಮರಳು ದಂಧೆಕೋರರ ಮೇಲೆ ಮುಗಿಬಿದ್ದು ನಿಯಂತ್ರಣಕ್ಕೆ ತಂದಿದ್ದರು. ತಹಸೀಲ್ದಾರ್ ನಾಗರಾಜು ದಾಳಿಯ ಹೊಡೆತಕ್ಕೆ ಸಲುಗಿದ್ದ ಮರಳು ದಂಧೆಕೋರರು ಎಷ್ಟು ಹತಾಶರಾಗಿದ್ದರೆಂದರೆ ಅವರ ಜೀಪ್ ಮೇಲೆ ಮರಳು ಲಾರಿ ನುಗ್ಗಿಸಿ ಕೊಲೆ ಮಾಡುವ ಮಟ್ಟಕ್ಕೆ ಇಳಿದಿದ್ದರು. ನಾಗರಾಜುರವರ ಆ ಅಭಿಯಾನಕ್ಕೆ ಮದ್ದೂರು ಪೊಲೀಸರಿಂದ ಸೂಕ್ತ ಸಹಕಾರವೇ ಸಿಗುತ್ತಿರಲಿಲ್ಲ, ಯಾಕೆಂದರೆ ಪೊಲೀಸರು ಕೂಡಾ ಅದರಲ್ಲಿ ಶಾಮೀಲಾಗಿದ್ದರು. ಕೊನೆಗೆ ನಾಗರಾಜ್ ತಾವೇ ಕಂದಾಯ ಅಧಿಕಾರಿಗಳನ್ನು ಕರೆದುಕೊಂಡು ಅಕ್ರಮ ಮರಳು ಅಡ್ಡೆಗಳ ಮೇಲೆ ದಾಳಿ ನಡೆಸಿ ಕೊಪ್ಪರಿಕೆ, ಟ್ರ್ಯಾಕ್ಟರ್, ಲಾರಿಗಳನ್ನು ವಶಪಡಿಸಿಕೊಂಡು ದೊಡ್ಡ ಮೊತ್ತದ ದಂಡ ಹಾಕಿ ಕೇಸು ದಾಖಲಿಸುತ್ತಿದ್ದುದುಂಟು. ನಾಗರಾಜು ಈ ಕಟ್ಟುನಿಟ್ಟಿನ ಕ್ರಮದಿಂದ ಕಂಗಾಲಾದ ಮರಳು ದಂಧೆಕೋರರು ಅವರ ಎತ್ತಂಗಡಿಗೂ ಕೈಹಾಕಿದ್ದರು. ನಾಗರಾಜುಗೆ ಉಪವಿಭಾಗಾಧಿಕಾರಿಯಾಗಿ ಬಡ್ತಿ ದೊರೆತು ಅವರು ಹೋದ ಮೇಲೆ ಮರಳುಗಳ್ಳರ ಆರ್ಭಟ ಮತ್ತೆ ಶುರುವಾಯಿತು.

ಇದನ್ನೆಲ್ಲ ಡೀಟೈಲಾಗಿ ಸ್ಟಡಿ ಮಾಡಿದ ಶಿವಕುಮಾರ್ ಮೊದಲು ಮುರಕೊಂಡು ಬಿದ್ದದ್ದೇ ಅಕ್ರಮ ಮರಳು ದಂಧೆಕೋರರ ಮೇಲೆ. ಶಿಂಷಾನದಿ ಹರಿಯುವ ತೊರೆಚಾಕನಹಳ್ಳಿ, ಕೊಕ್ಕರೆಬೆಳ್ಳೂರು, ಮಡುವಿನಹಳ್ಳಿ, ವೈದ್ಯನಾಥಪುರ, ಎಸ್‌ಐ ಹಾಗಲಹಳ್ಳಿ, ಕೂಳಗೆರೆ, ಚನ್ನಹಳ್ಳಿ, ಮಾರಸಿಂಗನಹಳ್ಳಿ, ಬೆಸಗರಹಳ್ಳಿ, ನೀಲಕಂಠನಹಳ್ಳಿ, ಕೆಸ್ತೂರು, ಹೆಮ್ಮನಹಳ್ಳಿ, ಮಲ್ಲನಕುಪ್ಪೆ ಕೌಡ್ಲೆ, ಹೊಸೂರು ಮೊದಲಾದ ಕಡೆ ಅಕ್ರಮ ಮರಳುಗಾರಿಕೆ ಎಗ್ಗಿಲ್ಲದೆ ನಡೆಯುತ್ತಿತ್ತು. ಹಗಲು-ರಾತ್ರಿಯೆನ್ನದೆ ಮರಳುಗಳ್ಳರು ಶಿಂಷಾನದಿಯ ಒಡಲಿಗೆ ಕೈಹಾಕಿ ಟನ್‌ಗಟ್ಟಲೆ ಮರಳನ್ನು ಅಕ್ರಮವಾಗಿ ಬೆಂಗಳೂರು, ಮೈಸೂರುಗೆ ಸಾಗಿಸುತ್ತಿದ್ದರು. ಬೆಂಗಳೂರಿನಲ್ಲಿ ಏನಿಲ್ಲವೆಂದರೂ ಒಂದು ಲಾರಿ ಲೋಡ್‌ಗೆ 35-40 ಸಾವಿರ ರೂ. ಸಿಗುತ್ತಿರಬೇಕಾದರೆ ಸುಮ್ಮನಿದ್ದಾರೆಯೇ? ಮಧ್ಯರಾತ್ರಿ 2-3 ಗಂಟೆ ಸರಿಹೊತ್ತಿನಲ್ಲೂ ಲಾರಿಗಳು ರವಾನೆಯಾಗುತ್ತಿದ್ದವು.

ಮದ್ದೂರು ಭಾಗದ ಮರಳುಗಳ್ಳರಲ್ಲಿ ಹೂತಗೆರೆ ದಿನೇಶ ಎಂಬಾತನದ್ದು ಎತ್ತಿದ ಕೈ. ಕೆಸ್ತೂರು ಹತ್ತಿರದ ಮಲ್ಲನಕುಪ್ಪೆಗೇಟ್ ಬಳಿಯಿರುವ ಈತನ ಅಡ್ಡೆ ಮೇಲೆ ದಾಳಿ ಮಾಡಿದ್ದ ಡಿವೈಎಸ್‌ಪಿ ಶಿವಕುಮಾರ್‌ರ ಖಾಕಿಪಡೆ 2 ಜೆಸಿಬಿ, 3 ಟಿಪ್ಪರ್, ಟ್ರ್ಯಾಕ್ಟರ್‌ಗಳನ್ನು ವಶಪಡಿಸಿಕೊಂಡು ಕೇಸು ಜಡಿದು ದಿನೇಶನನ್ನು ಜೈಲಿಗೆ ಗದುಮಿದ್ದರು. ಹೀಗೆ 2-3 ಬಾರಿ ಕೇಸು ಜಡಿದು ಹೂತಗೆರೆ ದಿನೇಶನನ್ನು ಜೈಲಿಗೆ ಗದುಮಿದ ಡಿವೈಎಸ್ಪಿ ಶಿವಕುಮಾರ್ ಆತ ತನ್ನ ದಂಧೆಯಿಂದ ಹಿಂದೆ ಸರಿಯುವಂತೆ ಮಾಡಿದ್ದರು. ಇವನಂತೆಯೇ ಬಲಿಷ್ಠ ಮರಳುಗಳ್ಳರಾಗಿದ್ದ ತಿಪ್ಪೂರು ಪುಟ್ಟರಾಜು, ಹೊಸೂರು ರವಿ, ಶಿವಪುರ ವೀರೇಂದ್ರ ಸೇರಿದಂತೆ ಹಲವು ದಂಧೆಕೋರರ ಮೇಲೂ ಕೇಸು ಜಡಿದು ಮೆತ್ತಗಾಗಿಸಿದ್ದರು. 15ಕ್ಕೂ ಹೆಚ್ಚು ಲಾರಿಗಳನ್ನು ಇಟ್ಟುಕೊಂಡು ದಂಧೆಯಲ್ಲಿ ಮೆರೆದಾಡುತ್ತಿದ್ದ ಶಿವಪುರದ ವೀರೇಂದ್ರನಂತೂ ಶಿವಕುಮಾರ್ ಕೊಟ್ಟ ಏಟಿಗೆ ಮದ್ದೂರು ಬಿಟ್ಟು ಮಂಗಳೂರಿಗೆ ಪೇರಿಕಿತ್ತಿದ್ದ. ಈಗ ಅಲ್ಲಿ ಇದೇ ಕಸುಬು ಮುಂದುವರೆಸಿದ್ದಾನೆ ಎಂಬ ವರ್ತಮಾನಗಳಿವೆ.

ಇನ್ನು ಮಳವಳ್ಳಿಯಲ್ಲೇನು ಪರಿಸ್ಥಿತಿ ಭಿನ್ನವಾಗಿರಲಿಲ್ಲ, ನದಿಯ ಒಡಲು ಬಗಿಯುವ ಕಾರ್ಯ ಸಾಂಗವಾಗಿ ಸಾಗಿತ್ತು. ಸಾಗ್ಯ ಯತ್ತಂಬಾಡಿ, ಅಂತರಹಳ್ಳಿ, ಇಗ್ಗಲೂರು, ಹಲಗೂರು ವ್ಯಾಪ್ತಿಯ ಮರಳು ಅಡ್ಡೆಗಳ ಮೇಲೆ ರೇಡ್ ಮಾಡಿ ದಂಡ ವಸೂಲಿ ಮಾಡಿದ್ದಲ್ಲದೆ ಮರಳುಗಳ್ಳರಿಂದ ಮುಚ್ಚಳಿಕೆ ಬರೆಸಿಕೊಂಡು ಎಚ್ಚರಿಕೆ ನೀಡಿದ್ದರು. ಬ.ಜಿ.ಪುರ ಹೋಬಳಿಯಲ್ಲಿ ಮರಳು ತೆಗೆಯಲು ಸರ್ಕಾರದ ಪರವಾನಗಿ ಪಡೆದಿದ್ದರಾದರೂ, ಪರವಾನಗಿ ಅವಧಿ ಮುಗಿದರೂ ಮರಳನ್ನು ತೆಗೆಯಲಾಗುತ್ತಿತ್ತು, ಕೂಡಲೇ ಅದಕ್ಕೆ ಕಡಿವಾಣ ಹಾಕಿದ ಡಿವೈಎಸ್ಪಿ ಶಿವಕುಮಾರ್, ಜಾಡಿನ ಸುತ್ತಲೂ ಜೆಸಿಬಿ ಮೂಲಕ ದೊಡ್ಡ ಗುಂಡಿಗಳನ್ನು ತೆಗೆದು ಲಾರಿ, ಟ್ರ್ಯಾಕ್ಟರ್‌ಗಳಲ್ಲಿ ಮರಳು ಸಾಗಿಸದಂತೆ ತಡೆಯೊಡ್ಡಿದ್ದರು. ಟಿ.ನರಸೀಪುರ ಕಡೆಯಿಂದ ಬರುವ ಅಕ್ರಮ ಮರಳು ಲಾರಿಗಳನ್ನು ತಡೆದು ಯಾರ ಒತ್ತಾಯಕ್ಕೂ ಮಣಿಯದೆ ಕೇಸು ಜಡಿದ ಪರಿಣಾಮವಾಗಿ ಪರಿಸ್ಥಿತಿ ಕೊಂಚ ತಹಬಂದಿಗೆ ಬಂದಂತಾಗಿತ್ತು. ಶಿವಕುಮಾರ್‌ರ ಕಟ್ಟುನಿಟ್ಟಿನಿಂದಾಗಿ ಕೆಲವು ದಂಧೆಕೋರರು ತೆಪ್ಪಗಾಗಿದ್ದರೆ ಮತ್ತೆ ಕೆಲವರು ಊರೇ ಬಿಟ್ಟಿದ್ದಾರೆ.

ಡಿವೈಎಸ್ಪಿ ಶಿವಕುಮಾರ್ ದಾಳಿಗಳ ವೈಖರಿ ಹೇಗಿರುತ್ತದೆಂದರೆ, ಪೊಲೀಸ್ ವಾಹನದಲ್ಲಿ ತೆರಳಿದರೆ ಮರಳುಗಳ್ಳರಿಗೆ ಸುಳಿವು ಸಿಗುತ್ತದೆಂದು ಖಾಸಗಿ ವಾಹನಗಳಲ್ಲಿ ತೆರಳಿ ದಿಢೀರ್ ದಾಳಿ ಮಾಡುತ್ತಿದ್ದಾರೆ. ಕೆಲವು ಸಂದರ್ಭದಲ್ಲಿ ಬೈಕ್‌ನಲ್ಲೂ ತೆರಳಿ ದಾಳಿ ಮಾಡಿದ ನಿದರ್ಶನಗಳುಂಟು. ತಾವು ಚಾರ್ಜ್ ವಹಿಸಿಕೊಂಡ ಒಂದು ವರ್ಷದ ಅವಧಿಯಲ್ಲಿ 380ಕ್ಕೂ ಹೆಚ್ಚು ಲಾರಿ, ಟ್ರ್ಯಾಕ್ಟರ್ ಜಪ್ತಿ ಮಾಡಿ ದಂಡ ವಿಧಿಸಿರುವುದಲ್ಲದೇ 200ಕ್ಕೂ ಹೆಚ್ಚು ಕೇಸುಗಳನ್ನು ಲಾರಿ ಮಾಲೀಕರ ಮೇಲೆ ಹಾಕಿ ಅಕ್ರಮ ಮರಳು ದಂಧೆಕೋರರಿಗೆ ಶಾಕ್ ನೀಡಿದ್ದಾರೆ.

ಕ್ಲಬ್‌ಗಳಿಗೆ ಬೀಗ- ಪುಂಡಾಟಿಕೆಗೆ ಬ್ರೇಕ್


ಈ ಮೊದಲು ಮದ್ದೂರು-ಮಳವಳ್ಳಿ ವ್ಯಾಪ್ತಿಯಲ್ಲಿ ಸುಮಾರು 25ಕ್ಕೂ ಹೆಚ್ಚು ಕ್ಲಬ್‌ಗಳಿದ್ದವು. ಅವುಗಳಲ್ಲಿ ಸುಮಾರು 18 ಅನಧಿಕೃತ ಕ್ಲಬ್‌ಗಳಾಗಿದ್ದವು. ರಿಕ್ರಿಯೇಷನ್ ಹೆಸರಿನಲ್ಲಿ ಇವು ನಡೆಸುತ್ತಿದ್ದುದ್ದು ಅಪ್ಪಟ ಜೂಜು ದಂಧೆ. ಸ್ವಲ್ಪ ಜಾಗ ಸಿಕ್ಕರೂ ರಿಕ್ರಿಯೇಷನ್ ಕ್ಲಬ್, ಫಾರ್ಮರ್ ಕ್ಲಬ್, ಕ್ರೀಡಾಬಳಗ ಎಂದೆಲ್ಲಾ ಬೋರ್ಡ್ ಹಾಕಿ ಒಳಗೆ ಭರ್ಜರಿಯಾಗಿ ಇಸ್ಪೀಟ್ ಆಡಿಸಲಾಗುತ್ತದೆ. ರೈತರು ಹಾಗೂ ಯುವಕರೇ ಈ ಕ್ಲಬ್‌ಗಳಲ್ಲಿ ಇಸ್ಪೀಟ್ ಆಡಿ ಸಾಲಗಾರರಾಗುತ್ತಿದ್ದರು. ಮಗನೂರು, ಮಾದೇಹಳ್ಳಿ ಸೇರಿದಂತೆ ಹಲವೆಡೆ ರೈತರು ಹಾಗೂ ಯುವಕರು ದಿಕ್ಕೆಡಿಸುತ್ತಿದ್ದ ಇಂತಹ 18ಕ್ಕೂ ಹೆಚ್ಚು ಅನಧಿಕೃತ ಕ್ಲಬ್‌ಗಳ ಮೇಲೆ ದಾಳಿಮಾಡಿದ ಶಿವಕುಮಾರ್ ಅವುಗಳಿಗೆ ಬೀಗ ಜಡಿದಿದ್ದಾರೆ. ಅಲ್ಲದೇ ಅಧಿಕೃತ ಕ್ಲಬ್‌ಗಳು ಕೂಡಾ ಪೊಲೀಸ್ ಇಲಾಖೆಯ 35ಕ್ಕೂ ಹೆಚ್ಚು ನಿಬಂಧನೆಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸಬೇಕು ಎಂಬ ಎಚ್ಚರಿಕೆ ನೀಡಿ ಜೂಜು ದಂಧೆಯನ್ನು ಹತೋಟಿಗೆ ತಂದಿದ್ದಾರೆ.

ಇಸ್ಪೀಟು, ಜೂಜು ಕೇವಲ ಕ್ಲಬ್‌ಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ, ತೋಟದ ಮನೆ, ಗದ್ದೆ ಬಯಲು ಹೀಗೆ ಎಲ್ಲೆಂದರಲ್ಲಿ ಹಗಲು-ರಾತ್ರಿಯೆನ್ನದೆ ನಡೆಯುತ್ತಿದ್ದವು. ಆದರೆ ಯಾವಾಗ ಶಿವಕುಮಾರ್‌ರ ದಾಳಿ ಶುರುವಾಯಿತೊ, ಆಗ ಅವೆಲ್ಲ ತಣ್ಣಗಾದವು.

ಇನ್ನು ಶಿವಕುಮಾರ್ ಬಂದನಂತರ ಮಳವಳ್ಳಿಯಲ್ಲಿ ರೌಡಿಗಳ ಪುಂಡಾಟಿಕೆಗೂ ಬ್ರೇಕ್ ಬಿದ್ದಂತಾಗಿದೆ. ಇಂಗ್ಲಿಷ್, ಜನರಲ್ ಬಸವರಾಜು, ತುಪ್ಪ ಎಂಬ ಮಾಜಿ ರೌಡಿಗಳು ಠಾಣೆಗೆ ಬಂದು ಸಹಿ ಹಾಕುವಂತೆ ಬಿಸಿ ಮುಟ್ಟಿಸಿದ್ದಾರೆ. ಹಲವು ವರ್ಷಗಳಿಂದ ಕೋರ್ಟಿಗೂ ಹಾಜರಾಗದೆ ತಲೆಮರೆಸಿಕೊಂಡಿದ್ದ ರೌಡಿ ಜನರಲ್ ಬಸವರಾಜನನ್ನು ಸಿನಿಮೀಯ ರೀತಿ ಬಂಧಿಸಿ ಬಗ್ಗಿಸಿದ ಡಿವೈಎಸ್ಪಿ ಶಿವಕುಮಾರ್ ಹಾಲಿ ಗ್ರಾ.ಪಂ. ಸದಸ್ಯರಾಗಿರುವ ಹಲಗೂರು ನವೀನ್, ಪಿಳ್ಳು ಎಂಬ ಪುಡಿರೌಡಿಗಳ ಆರ್ಭಟವನ್ನೂ ನಿಯಂತ್ರಣಕ್ಕೆ ತಂದಿದ್ದಾರೆ. ಈ ಇಬ್ಬರು ಜೆಡಿಎಸ್ ಕೃಪಾಪೋಷಿತ ರೌಡಿಗಳ ಆರ್ಭಟ ಎಂತದ್ದಿತ್ತೆಂದರೆ ಠಾ... ಕಾಂಪೌಂಡ್ ಮೇಲೆಯೇ ಕೂತು ಕಂಠಪೂರ್ತಿ ಕು... ಹಾವಳಿಯಿಡುತ್ತಿದ್ದರು. ಅಂತವರೂ ಈಗ ಶಿವಕು... ಬಿರುಸಿಗೆ ಮೆತ್ತಗಾಗಿ ಹೋಗಿದ್ದಾರೆ.

ಖಾಕಿಯ ಮರೆಯಲ್ಲಿ ಕವಿಹೃದಯ

ದುಷ್ಟರ ಪಾಲಿಗೆ ಖಡಕ್ ಆಫೀಸರ್ ಆಗಿದ್ದರೂ ಶಿವಕುಮಾರ್ ಮೂಲತಃ ಕವಿಹೃದಯದವರು. ಅವರು ಹಲವು ಕವಿತೆಗಳಿಗೆ ಗಾಯಕ ಗಾಮನಹಳ್ಳಿಸ್ವಾಮಿ ಸಂಗೀತ ನಿರ್ದೇಶನ ನೀಡಿ ಹಾಡಿದ್ದಾರೆ. ಪೊಲೀಸ್ ಇಲಾಖೆಯ ಸಿಬ್ಬಂದಿಗಳು ಹಾಗೂ ಅವರ ಮಕ್ಕಳಲ್ಲಿರುವ ಸಾಂಸ್ಕೃತಿಕ ಪ್ರತಿಭೆಯನ್ನು ಅನಾವರಣಗೊಳಿಸಲು 'ಆರಕ್ಷಕ ಉತ್ಸವ' ಎಂಬ ಕಾರ್ಯಕ್ರಮ ಆಯೋಜಿಸಿದ್ದರು. ಮಳವಳ್ಳಿ ಮಟ್ಟಿಗೆ ಅಂತಹ ಪ್ರಯತ್ನ ಇದೇ ಮೊದಲು. 'ನಮ್ಮ ಅಭಿಯಾನ' ಎಂಬ ಕಾರ್ಯಕ್ರಮದ ಮೂಲಕ ಮಂಡ್ಯ ರಮೇಶ್ ನಿರ್ದೇಶನದ ಚಾಮಚೆಲುವೆ ನಾಟಕ ಮಾಡಿಸಿದ್ದಾರೆ. ದಲಿತಕವಿ ಸಿದ್ದಲಿಂಗಯ್ಯನವರ ಹೋರಾಟದ ಗೀತೆಗಳ 'ಗುಡಿಸಲಿನಲ್ಲಿ ಅರಳಿದ ಗುಲಾಬಿ' ದೊಡ್ಡ ಕವಿಕಾವ್ಯ ಮೇಳ ಆಯೋಜನೆಯ ಹಿಂದೆ ಶಿವಕುಮಾರ್‌ರ ಪಾತ್ರ ದೊಡ್ಡದಿದೆ. ಇತ್ತೀಚೆಗಷ್ಟೇ ಮಂಡ್ಯದ ಕಲಾಮಂದಿರದಲ್ಲಿ ನಡೆದ ಕೋಟಿಗಾನಹಳ್ಳಿ ರಾಮಯ್ಯನವರ ಹೋರಾಟದ ಗೀತೆಗಳ 'ಹೆಜ್ಜೆಮಾತಾಡು' ಭಾಗ-2 ಎಂಬ ಕಾರ್ಯಕ್ರಮದ ರೂವಾರಿ ಕೂಡ ಇದೇ ಶಿವಕುಮಾರ್. ಇಲಾಖೆಯ ಸಿಬ್ಬಂದಿಗಳ ಮಕ್ಕಳಲ್ಲಿನ ಪ್ರತಿಭೆಯನ್ನು ಪೋಷಿಸುವುದಕ್ಕೋಸ್ಕರ ಮದ್ದೂರಿನ ಅಂಬೇಡ್ಕರ್ ಸಭಾಂಗಣದಲ್ಲಿ 10 ದಿನಗಳ ಬೇಸಿಗೆ ಶಿಬಿರ ಏರ್ಪಡಿಸಿದ್ದ ಶಿವಕುಮಾರ್ ಪೊಲೀಸ್ ಕುಟುಂಬದವರಿಗಾಗಿ ಕಣ್ಣಿನ ತಪಾಸಣೆ ಹಾಗೂ ಆರೋಗ್ಯ ಶಿಬಿರ ಏರ್ಪಡಿಸುವ ಮೂಲಕ ಪೊಲೀಸ್ ವಲಯದಲ್ಲಿ ಅಚ್ಚುಮೆಚ್ಚು ಎನಿಸಿದ್ದಾರೆ.




ಶಿವಕುಮಾರ್‌ರ ಕಾರ್ಯವೈಖರಿಯಿಂದ ಅಪ... ಪ್ರಕರಣಗಳೂ ಹತೋಟಿಗೆ ಬಂದಿವೆ. 2014-1... ನಡೆದ ಬಹುತೇಕ ಪ್ರಕರಣಗಳಲ್ಲಿ ಅಪರಾಧಿಗಳನ್ನು... ಮಾಡಿ, ಕಂಬಿ ಹಿಂದಕ್ಕೆ ಗದುಮಲಾಗಿದೆ. 16 ಸರ... ಪ್ರಕರಣಗಳನ್ನು ಬೇಧಿಸಿರುವ ಪೊಲೀಸರು ಬೈಕ್... ಜಾಲವನ್ನು ಪತ್ತೆ ಮಾಡಿ 28 ಬೈಕ್‌ಗಳನ್ನೂ ರಿ... ಮಾಡಿಕೊಂಡಿದ್ದಾರೆ. ಬೆಂಗಳೂರಿನ ಶನಿಮ... ದೇವಾಲಯದಲ್ಲಿ ಕಳ್ಳತನ ಮಾಡಿದ ಮಣಿಕಂಠ ... ಕಳ್ಳನನ್ನು ಬಂಧಿಸಿ ಅವನಿಂದ 900 ಗ್ರಾಂ. ತೂಕದ... ಲಕ್ಷ ಮೌಲ್ಯದ ಚಿನ್ನದ ಕಾಗೆಯನ್ನು ವಶಪಡಿಸಿಕೊಳ್ಳಲ... ಮಧ್ಯಪ್ರದೇಶ ಮೂಲದ ಸರಣಿ ಕಳ್ಳನೊಬ್ಬನನ್ನು ಬ... ಮದ್ದೂರಿನ ಕೊಪ್ಪ ಮೊದಲಾದೆಡೆ ಆತ ಮಾಡಿದ್ದ ಕ... ಪ್ರಕರಣಗಳನ್ನು ಪತ್ತೆ ಮಾಡಲಾಗಿದೆ. 6 ಲಕ್ಷ ರೂ. ಮೌ... ತಾಮ್ರದ ತಂತಿಯಿದ್ದ ಲಾರಿಯನ್ನು ಅಪಹರ... ಪ್ರಕರಣದಲ್ಲಿ ಭಾಗಿಯಾಗಿದ್ದ ಮದ್ದೂರು ಹ... ಬೆಂಗಳೂರು ಮೂಲದ ಕಳ್ಳರನ್ನು ಬಂಧಿಸಿದ್ದು, ಹೊಸ... ಲಂಬಾಣಿ ತಾಂಡಾದ ಮಂಗಳಮ್ಮ ಎಂಬಾಕೆಯನ್ನು ... ಮಾಡಿ ತಮಿಳುನಾಡಿನಲ್ಲಿ ತಲೆಮರೆಸಿಕೊಂಡಿದ್ದ ಅ... ಪ್ರಿಯಕರ ಗೋವಿಂದಯ್ಯನನ್ನು ಬಂಧಿಸಿದ್ದು, ಚೆನ್ನೈ ಮ... ಡ್ರೈವರ್ ಚಂದ್ರಶೇಖರ್ ಎಂಬಾತನ ಕೊಲೆ ಕೇಸಿನ ... ಹಂತಕರನ್ನು ಬಂಧಿಸಿದ್ದು ಇವೆಲ್ಲ ಜನರಲ್ಲಿ ಪೊ... ಇಲಾಖೆಯ ಮೇಲೆ ವಿಶ್ವಾಸ ಹೆಚ್ಚಾಗುವಂತೆ ಮಾ... ರೇಷನ್ ದೋಚುವ ಖದೀಮರು, ಅಸ್ಸಾಂ ಮ... ಲಾಟರಿ ದಂಧೆಕೋರರು, ಕ್ರಿಕೆಟ್ ಬೆಟ್ಟಿಂಗ್ ಜಾಲಗ... ಬೇಧಿಸಿರವ ಶಿವಕುಮಾರ್ ನೇತೃತ್ವದ ಪೊಲೀಸ್ ... ಕ್ರಿಮಿನಲ್‌ಗಳ ಜಂಘಾಬಲವನ್ನೇ ನಡುಗಿಸಿದೆ. ಮ... ಟೌನ್ ಸಿಪಿಐ ರಾಜು, ಎಸ್‌ಐ ಗಿರೀಶ್‌ಕುಮಾರ್ ಹ... ಮದ್ದೂರು ಟೌನ್ ಪೊಲೀಸ್ ಠಾಣೆಯ ಸಿಪಿಐ ಪ್ರ... ಹಾಗೂ ಎಸ್‌ಐ ವೆಂಕಟೇಗೌಡರಂತಹ ಅಧಿಕಾರಿಗ... ಉತ್ತಮ ಕೆಲಸ ತೆಗೆಸುತ್ತಿರುವ ಡಿವೈಎಸ್ಪಿ ಶಿವಕು... ತಮ್ಮ ವ್ಯಾಪ್ತಿಯ ಅಷ್ಟು ಪೊಲೀಸ್ ಠಾಣೆಗಳನ್ನು ಜನ... ಠಾಣೆಯನ್ನಾಗಿ ಪರಿವರ್ತಿಸಿದ್ದಾರೆ.

ಶಿವಕುಮಾರ್ ಡಿವೈಎಸ್ಪಿಯಾಗಿ ಬಂದನ... ಮದ್ದೂರು-ಮಳವಳ್ಳಿ ಭಾಗದಲ್ಲಿ ಒಟ್ಟಾರೆ ದಗಲ್ಬಾಜಿ... ಉಸಿರು ಸಿಕ್ಕಿಕೊಂಡಂತಾಗಿದೆಯಾದರು ಅದರಿಂದ ... ಪರಿತಪಿಸುತ್ತಿರೋದು ಮರಳು ಮಾಫಿ... ಕಾಂಕ್ರೀಟ್‌ನಗರಿಯಿಂದ ಬರುತ್ತಿರುವ ಗರಿಗರಿ ನೋ... ಬೇಡಿಕೆಗಳು ಅವರನ್ನು ಕೈಕೈ ಹಿಸುಕಿಕೊಳ್ಳುವಂತೆ ಮಾ... ಶತಾಯಗತಾಯ ಶಿವಕುಮಾರ್‌ರನ್ನು ತಮ್ಮ ಹಾದಿ... ನಿವಾರಿಸಿಕೊಂಡು ಮರಳನ್ನು ಸಾಗಿಸಿಯೇ ತೀರಬೇ... ಹಠಕ್ಕೆ ಬಿದ್ದಿರುವ ಅವರೆಲ್ಲಾ ಒಂದಾಗಿ ಡಿವೈ... ಎತ್ತಂಗಡಿಗೇ ಪ್ರಯತ್ನ ನಡೆಸುತ್ತಿದ್ದಾರೆ.

ಪಿ. ನರೇಂದ್ರಸ್ವಾಮಿ ಶಾಸಕರಾದ ಮೇಲೆ ಮ... ಕಾನೂನು ಸುವ್ಯವಸ್ಥೆ ಕೊಂಚ ಉಸಿರಾಡುವಂತಾಗಿದೆ. ... ಪೂರಕವಾಗಿಯೇ ಶಿವಕುಮಾರ್ ಕೂಡಾ ... ಮಾಡುತ್ತಿದ್ದಾರೆ. ಇದು ಸಂಪೂರ್ಣ ಸುಧಾರಿಸಬೇಕ... ಶಿವಕುಮಾರ್ ಇನ್ನೂ ಸ್ವಲ್ಪದಿನ ಇಲ್ಲಿಯೇ ಉಳಿಯಬ... ಜರೂರತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನ... ಆಪ್ತರೆನಿಸಿರುವ ನರೇಂದ್ರಸ್ವಾಮಿ ಮನಸ್ಸು ಮಾ... ಮರಳುಗಳ್ಳರ ಎತ್ತಂಗಡಿ ಯತ್ನಕ್ಕೆ ಬ್ರೇಕ್ ಹಾಕು... ಕಷ್ಟವೇನೂ ಅಲ್ಲ, ಮಳವಳ್ಳಿಯ ಕಾನೂನು ಸು... ಹಿತದೃಷ್ಟಿಯಿಂದ ಇಂತಹದ್ದೊಂದು ಸಾಹಸಕ್ಕೆ ... ಕೈಹಾಕಲೇಬೇಕಿದೆ.

■ ವರದಿ...

ದಾವಣಗೆರೆ: ಬಿಜೆಪಿಗಳ 'ಬಂದ್'ಗೆ ಭರ್ಜರಿ ಮುಖಭಂಗ



ಬಿಜೆಪಿಗೆ ಇದು ಭರ್ಜರಿ ಮುಖಭಂಗ. ಯಾವನೋ ನ ವೈಯಕ್ತಿಕ ತೆವಲನ್ನೇ ದಾವಣಗೆರೆಯ ಬ್ರಹ್ಮಾಂಡ ಸ್ಯೆ ಎನ್ನುವಂತೆ ಬಿಂಬಿಸಿ ನಗರ ಬಂದ್ ಮಾಡಲು ದಾಗಿದ್ದ ಬಿಜೆಪಿಗಳಿಗೆ ಕ್ಯಾರೇ ಎನ್ನದ ದಾವಣಗೆರೆಯ ಅವರ ಮರ್ಯಾದೆಯನ್ನು ಮೂರು ಕಾಸಿಗೆ ಜಾಕಿದ್ದಾರೆ. ಹಾಗೆ ನೋಡಿದರೆ, ಕಳೆದ ವಿಧಾನಸಭಾ ಾವಣೆಯಲ್ಲೇ ದಾವಣಗೆರೆಯ ಜನ ಚೆಡ್ಡಿವಾಲಾಗಳಿಗೆ ಮು ಪಾಠ ಕಲಿಸಿದ್ದರು. 2008ರ ಚುನಾವಣೆಯಲ್ಲಿ ಮು ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ಏಳರಲ್ಲಿ ಬಿಜೆಪಿ ರ್ಥಿಗಳು ಜಯಭೇರಿ ಬಾರಿಸುವ ಮೂಲಕ ಪಾರಮ್ಯ ಬಿದ್ದರೆ 2013ರ ಚುನಾವಣೆಯಲ್ಲಿ ಜಿಲ್ಲೆಯ ಒಂದೇ ಪು ಕ್ಷೇತ್ರದಲ್ಲೂ ಕಮಲ ಅರಳದೆ ಹೀನಾಯ ೋಲನುಭವಿಸಿದ್ದರು. ರೇಣುಕಾಚಾರ್ಯ, ು.ರವೀಂದ್ರನಾಥರಂತಹ ಮಾಜಿ ಮಂತ್ರಿಗಳಿಗೂ ಮಣೆ ಪ ಮತದಾರ ಅವರ ಯೋಗ್ಯತೆಗೆ ತಕ್ಕ ಶಾಸ್ತಿ ಮಾಡಿದ್ದ ದಾವಣಗೆರೆ ಚೆಡ್ಡಿವಾಲಾಗಳಿಗೆ ಕಿಂಚಿತ್ತಾದರೂ ಭಿಮಾನ ಎನ್ನುವಂತದ್ದು ಇದ್ದಿದ್ದರೆ, ಜನರಿಂದ ಈ ತಿರಸ್ಕೃತಗೊಂಡ ನಂತರವೂ ಆಗಸ್ಟ್ 5ರಂದು ್ ನಾಟಕ ಆಡಲು ಮುಂದಾಗುತ್ತಿರಲಿಲ್ಲ. ಆದರೆ ಾರವಿಲ್ಲದೆ ಪತರುಗುಟ್ಟುತ್ತಿರುವ ಸ್ಥಳೀಯ ಕೇಸರಿ ಾರರಿಗೆ ಅಭಿಮಾನ, ಆತ್ಮಾಭಿಮಾನದ ವಿಷಯಗಳೆಲ್ಲ ಅರ್ಥವಾಗಬೇಕು. ಹೇಗಾದರು ಮಾಡಿ, ಜನರ ಸವನ್ನ ತಮ್ಮತ್ತ ಸೆಳೆಯಬೇಕು, ಆ ಮೂಲಕ ಮತ್ತೆ ಾರಕ್ಕೇರುವ ಹಾದಿ ಸುಗಮ ಟಿಕೊಳ್ಳಬೇಕೆಂಬುದಷ್ಟೇ ಅವರ ಹಪಾಹಪಿ. ಜ್ಯೋಸ್ಕರ ಸಿಕ್ಕಸಿಕ್ಕ ವಿಷಯಗಳಲ್ಲೆಲ್ಲ ರಾಜಕಾರಣ ಿತ್ತಾ ಅಂಡಲೆಯುತ್ತಿದ್ದಾರೆ. ಆಗಸ್ಟ್ 5ರಂದು ಪಿಎಸ್ಐ ್ ಕುಮಾರ್ ವಿರುದ್ಧ ನಡೆಸಲು ಹೋದ ಬಂದ್ ಿ ಅಂತಹುದೇ ಒಂದು ಪ್ರಸಂಗ.

ಗುರುತಿಸಲ್ಪಡುತ್ತಿದೆ. ಯಾಕೆಂದರೆ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ದಾವಣಗೆರೆಯಲ್ಲಿ ಚರ್ಚುಗಳ ಮೇಲೆ ದಾಳಿ ನಡೆದ ಪ್ರಕರಣ ನಿಮಗೆ ನೆನಪಿರಬಹುದು. ಆಕುಕೃತ್ಯ ನಡೆದಿದ್ದು ಇದೇ ಕೆಟಿಜೆ ಎಕ್ಸ್‌ಟೆನ್ಸ್‌ನಲ್ಲಿ. ಆಗಿನಿಂದಲೂ ಇಲ್ಲಿ ಪೊಲೀಸರು ಸ್ವಲ್ಪ ಹೆಚ್ಚೇ ಮುತುವರ್ಜಿ ವಹಿಸಿ ಗಸ್ತು ತಿರುಗುತ್ತಿರುತ್ತಾರೆ. ಅಲ್ಲದೇ ಇದೇ ಏರಿಯಾದಲ್ಲಿ ಇತ್ತೀಚೆಗೆ ಕತ್ತಲಾಯಿತೆಂದರೆ ರಸ್ತೆಯಲ್ಲಿ ಓಡಾಡುವ ಹೆಣ್ಣುಮಕ್ಕಳೊಂದಿಗೆ ಕೆಲ ಪುಂಡರು ಅಸಭ್ಯವಾಗಿ ವರ್ತಿಸುತ್ತಾರೆ ಎಂಬ ದೂರುಗಳೂ ಕೇಳಿಬಂದಿದ್ದವು. ಈ ಎಲ್ಲಾ ಕಾರಣಕ್ಕೆ, ಇಲ್ಲಿ ಪೊಲೀಸ್ ಕಣ್ಗಾವಲು ತುಸು ಬಿಗಿಯಾಗೇ ಇದೆ.


ಜುಲೈ 17ರ ಸಂಜೆ ಕೂಡಾ ಪಿಎಸ್ಐ ಕಿರಣ್ ಕುಮಾರ್ ತಮ್ಮ ಕೆಳಸಿಬ್ಬಂದಿಯೊಂದಿಗೆ ಗಸ್ತಿಗೆಂದು ಅಲ್ಲಿಗೆ ಬಂದಿದ್ದರು. ಅದೇ ವೇಳೆಗೆ ದುರ್ಗಾಂಬಿಕ ಹೈಸ್ಕೂಲು ಬಳಿ ಗುರುಚರಣ ಎಂಬಾ ಚಿಲ್ಟು ಕೇಸರಿ ಪುಢಾರಿಯೊಬ್ಬ ತನ್ನ ಗೆಳೆಯನ ಜೊತೆ ಅನುಮಾನಾಸ್ಪದವಾಗಿ ತಿರುಗಾಡುತ್ತಿರುವುದು ಅವರ ಗಮನಕ್ಕೆ ಬಂದಿದೆ. ಸಹಜವಾಗಿಯೇ ಆತನನ್ನು ಕರೆದು ಒಂದಿಷ್ಟು ವಿಚಾರಣೆ ನಡೆಸಿದ್ದಾರೆ. ತನ್ನ ಮಾವ ನರೇಂದ್ರನಾಯ್ಕ, ಜಿಲ್ಲಾ ಪಂಚಾಯ್ತಿ ಸದಸ್ಯ ಹಾಗೂ ತಾನು ಬಿಜೆಪಿ ಕಾರ್ಯಕರ್ತ ಎನ್ನುವ ಧಿಮಾಕಿನಲ್ಲಿ ಗುರುಚರಣ, ಪೊಲೀಸರ ಪ್ರಶ್ನೆಗಳಿಗೆ ಉಡಾಫೆಯಾಗಿ ಉತ್ತರಿಸಿದ್ದಾನೆ. ಕ್ಷಣಕ್ಷಣಕ್ಕು ಅವನ ಮಾತುಗಳು ಅಳತೆ ಮೀರುತ್ತಿರುವುದನ್ನು ಕಂಡು ರೇಗಿಹೋದ ಪಿಎಸ್ಐ ಕಿರಣ್‌ಕುಮಾರ್, ಗುರುಚರಣ್‌ನನ್ನು ಜೀಪಿಗೆ ತುಂಬಿಕೊಂಡು ನೇರವಾಗಿ ಠಾಣೆಗೆ ತಂದಿದ್ದರು. ಆಗಲೂ ಅವನ ವರ್ತನೆ ಸುಧಾರಿಸಿಲ್ಲ, ಪೊಲೀಸರ ಪ್ರತಿ ಪ್ರಶ್ನೆಗೆ ಪೊಲಿಟಿಕಲ್ ಉದ್ಧಟತನದ ಉತ್ತರಗಳನ್ನೇ ಕೊಟ್ಟು ಸತಾಯಿಸಿದ್ದ. ಎಸ್ಐ ಕಿರಣಕುಮಾರ್‌ರ ತಾಳ್ಮೆ ಅಲ್ಲಿಗೆ ಕೊನೆಯಾಗಿ ಒಂದೇಟು ಸರಿಯಾಗೇ ಬಿಗಿದು ಮನೆಗೆ ಕಳಿಸಿದ್ದರು.

ಠಾಣೆಯಿಂದ ಹೊರಬಿದ್ದ ಗುರುಚರಣ್ ಸೀದಾ ಹೋಗಿ ಎಡತಾಕಿದ್ದು ಮತ್ತೊಬ್ಬ ಮಿನಿ ಲೀಡರ್ ರಾಜಶೇಖರ್ ಮನೆಯನ್ನು. ಈತ 2008ರ ಚರ್ಚ್ ದಾಳಿಯ ಪ್ರಮುಖ ಆರೋಪಿ. ಅಲ್ಲದೇ, 2014ರಲ್ಲಿ ಮಂತ್ರಿ ವಿನಯಕುಮಾರ ಸೊರಕೆ ಮಹಾನಗರ ಪಾಲಿಕೆಗೆ ಭೇಟಿ ನೀಡಿದಾಗ ಅವರ ಮೇಲೆ ಹಲ್ಲೆ ಮಾಡುವಂತೆ ವರ್ತಿಸಿದ್ದು ಕೂಡಾ ಇದೇ ರಾಜಶೇಖರ. ಇಂತಹ ಪರಮ ಪುಂಡನ ವಿರುದ್ಧ ಕೆಟಿಜೆ ನಗರದ ಪೊಲೀಸ್ ಠಾಣೆಯಲ್ಲಿ 14 ಕೇಸುಗಳು (ಕೇಸ್ ನಂ. 350, 143, 324, 323, 504, 506, 107) ದಾಖಲಾಗಿವೆ. ಇನ್ನೂ ತನಿಖಾ ಹಂತದಲ್ಲಿರುವ ಅವುಗಳಲ್ಲಿ ಯಾವುದೇ ಒಂದು ಸಾಬೀತಾದರೂ ಈತ ಜೈಲಿನಲ್ಲಿ ಮುದ್ದೆ ಮುರಿಯೋದು ಗ್ಯಾರಂಟಿ. ಬಾಕಿ ಬಿಜೆಪಿ ನಾಯಕರಂತೆ ಆತ ಕೂಡಾ ಸದ್ಯ ರಾಜಕೀಯ ನಿರುದ್ಯೋಗಿ. ತನ್ನನ್ನು ತಾನು ಲೀಡರ್ ಅಂತ ಸಾಬೀತುಮಾಡಿಕೊಳ್ಳುವ ಅವಕಾಶಕ್ಕಾಗಿ ಕಾದು ಕುಳಿತಿದ್ದ ರಾಜಶೇಖರನ ಬಳಿ ಬಂದ ಗುರುಚರಣ್, ತನಗಾದ ಮರ್ಯಾದೆಯನ್ನೆಲ್ಲ ಹೇಳಿಕೊಂಡಿದ್ದಾನೆ. ಮಿನಿಮಮ್ ಕಾಮನ್‌ಸೆನ್ಸ್ ಇರುವ ನಾಯಕನಾಗಿದ್ದಿದ್ದರೆ 'ಇದೊಂದು ಸಣ್ಣ ಮಿಸ್‌ಅಂಡರ್‌ಸ್ಟ್ಯಾಂಡಿಂಗ್ ಪ್ರಕರಣ, ನಿನ್ನದೂ ಒಂಚೂರು ತಪ್ಪಿದೆ' ಅಂತ ಬುದ್ಧಿ ಹೇಳಿ ಮನೆಗೆ ಕಳಿಸಿರುತ್ತಿದ್ದರು. ಆದರೆ ಉರಿಯೋ ಮನೆಯಲ್ಲಿ ಗಳ ಇರಿಯುವ ಒಸ್ನಲಿಯಿಂದ ಬಂದ ರಾಜಶೇಖರ್, ಇದೇ ಪ್ರಕರಣವನ್ನು ತನ್ನ ನಾಯಕತ್ವ ಗಟ್ಟಿ ಮಾಡಿಕೊಳ್ಳಲು ಬಳಸಿಕೊಳ್ಳಲು ಹವಣಿಸಿದ್ದಾನೆ.

ಮಾರನೇ ದಿನ ಗುರುಚರಣ, ಅವನ ಅಕ್ಕ, ತಂದೆ, ತಾಯಿಯರೊಂದಿಗೆ ಕೆಟಿಜೆ ನಗರ ಠಾಣೆಗೆ ವಕ್ಕರಿಸಿದ ರಾಜಶೇಖರ ಪಿಎಸ್ಐ ಕಿರಣಕುಮಾರ್‌ನೊಂದಿಗೆ ವರಟಾಗಿಯೇ ವಾಗ್ವಾದಕ್ಕಿಳಿದಿದ್ದಾನೆ. ಪ್ರಕರಣ ಪೊಲಿಟಿಕಲ್ ಡೈಮೆನ್ಷನ್ ಪಡೆದುಕೊಳ್ಳುತ್ತಿರುವುದನ್ನು ಸೂಕ್ಷ್ಮವಾಗಿ ಗಮನಿಸಿದ ಪಿಎಸ್ಐ ಕಿರಣ್ ಆರಂಭದಲ್ಲಿ ಸಭ್ಯತೆಯಿಂದಲೇ ವರ್ತಿಸಿದ್ದಾರೆ. ಆತನ ಸಭ್ಯತೆಯನ್ನೇ ವೀಕ್ನೆಸ್ಸು ಎಂದುಕೊಂಡ ರಾಜಶೇಖರ ಮತ್ತಷ್ಟೂ ವೀರಾವೇಶದಿಂದ ಅಬ್ಬರಿಸಿ ಪೊಲೀಸ್ ಠಾಣೆಯನ್ನೇ ರಣಾಂಗಣ ಮಾಡಲು ನೋಡಿದ್ದಾನೆ. ಪಿಎಸ್ಐ ಕಿರಣಕುಮಾರ್‌ಗೂ ರೇಗಿಹೋಗಿದೆ. ಸಭ್ಯ ಭಾಷೆಯನ್ನು ಬದಿಗಿಟ್ಟು ಪೊಲೀಸ್ ಭಾಷೆಯಲ್ಲಿ ರಾಜಶೇಖರನನ್ನು ತರಾಟೆಗೆ ತೆಗೆದುಕೊಂಡಿದ್ದಲ್ಲದೆ ಠಾಣೆಗೆ ನುಗ್ಗಿ ಕರ್ತವ್ಯನಿರತ ಪೊಲೀಸ್ ಅಧಿಕಾರಿಗೆ ನಿಂದಿಸಿದ ಮತ್ತು ಕರ್ತವ್ಯಕ್ಕೆ ಅಡ್ಡಿಪಡಿಸಿದ ಕೇಸುಗಳನ್ನು ರಾಜಶೇಖರನ ಮೇಲೆ ಜಡಿದು ಹೊರಗೆ ಗದುಮಿದ್ದರು.

ಇಲ್ಲಿಂದಲೇ ಶುರುವಾದದ್ದು ಬಿಜೆಪಿ ಹೈಡ್ರಾಮಾ. ರಾಜಶೇಖರನ ಮೇಲೆ ಕೇಸು ದಾಖಲಾಗುತ್ತಿದ್ದಂತೆಯೇ ಗುರುಚರಣನ ಗದ್ದಲ ನೇಪಥ್ಯಕ್ಕೆ ಸರಿದು, ರಾಜಶೇಖರನ ಪ್ರಕರಣವೇ ಪ್ರಮುಖವಾಯಿತು. ಅಧಿಕಾರವಿಲ್ಲದೆ ಮನೆಯಲ್ಲಿ ಕೂತಿದ್ದ ಬಿಜೆಪಿ ಲೀಡರುಗಳಿಗೆ ಹಬ್ಬದೂಟ ಒದಗಿಬಂದಂತಾಗಿತ್ತು. ಜಗಳೂರು ಮಾಜಿ ಶಾಸಕ ಎಸ್.ವಿ. ರಾಮಚಂದ್ರ, ಮಾಜಿ ಮಂತ್ರಿ ರವೀಂದ್ರನಾಥ, ಮಾಜಿ ಸಚೇತಕ ಶಿವಯೋಗಿಸ್ವಾಮಿ, ಮಾಜಿ ಶಾಸಕ ಬಸವರಾಜನಾಯ್ಕ, ಮಾಜಿಮಂತ್ರಿ ರೇಣುಕಾಚಾರ್ಯ ಬೀದಿಗಿಳಿದು ಗದ್ದಲ ಶುರುಮಾಡಿದರು. ಬಿಜೆಪಿಗಳ ಹಕೀಕತ್ತಿನ ಬಗ್ಗೆ ಚೆನ್ನಾಗಿಯೇ ಅರ್ಥಮಾಡಿಕೊಂಡಿರುವ ಪೊಲೀಸ್ ಇಲಾಖೆ ಮತ್ತೊಂದು ಅವಾಂತರ ಸೃಷ್ಟಿಯಾಗಿ ಸಮಾಜದ ನೆಮ್ಮದಿ ಹಾಳಾಗಬಾರದೆನ್ನುವ ಕಾರಣಕ್ಕೆ, ಡಿವೈಎಸ್ಪಿ ಪಾಂಡುರಂಗಯ್ಯರ ನೇತೃತ್ವದಲ್ಲಿ ರಾಜಿ ಸಂಧಾನಕ್ಕೂ ಮುಂದಾಗಿತ್ತು. ಆ ಶಾಂತಿಸಭೆಯಲ್ಲಿ ಎಲ್ಲಾ ತಿಳಿಗೊಳ್ಳುವ ಹಂತಕ್ಕೂ ಬಂದಿತ್ತು, ಆದರೆ ರಾಜಶೇಖರ ಅಲ್ಲೂ ಮಿತಿಮೀರಿದ ಪುಂಡಾಟಿಕೆ ಪ್ರದರ್ಶಿಸಿದ್ದಲ್ಲದೆ ಮೈಮೇಲಿನ ಅಂಗಿ ಕಳಚಿದವನೇ ಪಿಎಸ್ಐ ಕಿರಣಕುಮಾರರನ್ನೇ ಹೊಡೆದಾಡಲು ಕರೆದುಬಿಟ್ಟಿದ್ದ. ಇಂಥಾ ಉಡಾಳನಿಗೆ ಓಂಕಾರಪ್ಪ ಎನ್ನುವ ಬಿಜೆಪಿಯ ಮತ್ತೊಂದು ಪಳೆಯುಳಿಕೆ ಕೂಡಾ ಸಾಥ್ ನೀಡಿತ್ತು.

ಇವರ ವರ್ತನೆಯಿಂದ ಬೇಸತ್ತ ಡಿವೈಎಸ್ಪಿ 'ಹೇಗೂ ಪ್ರಕರಣದಲ್ಲಿ ಎಫ್ಐಆರ್ ಬರೆಯಲಾಗಿದೆ. ಅದೇನಿದ್ದರೂ ನ್ಯಾಯಾಲಯದಲ್ಲೇ ತೀರ್ಮಾನವಾಗಲಿ' ಅಂತ ಹೇಳಿ ಸಭೆಯಿಂದ ಹೊರನಡೆದಿದ್ದರು. ಪಿಎಸ್ಐ ವಿರುದ್ಧ ಮಾಧ್ಯಮಗಳಿಗೆ ಹೇಳಿಕೆ ನೀಡಿ ಅವಮಾನತ್ತಿಗೆ ಆಗ್ರಹ, ಗಡವು ಅಂತೆಲ್ಲಾ ಸರ್ಕಸ್ ಶುರುವಿಟ್ಟುಕೊಂಡ ಬಿಜೆಪಿಗಳು ದಾವಣಗೆರೆಯ ಜನ ತಮಗೆ ಅಭೂತಪೂರ್ವ ಬೆಂಬಲ ನೀಡುತ್ತಾರೆನ್ನುವ ಭ್ರಮೆಯಲ್ಲೇ ಆಗಸ್ಟ್ 5ರಂದು ಬಂದ್‌ಗೆ ಕರೆ ನೀಡಿದರು. ಆದರೆ ಜನ ಬಿಜೆಪಿಗಳ ಕರೆಗೆ ಜಪ್ಪಯ್ಯ ಎನ್ನಲಿಲ್ಲ, ಎಳ್ಳರ್ಧಕಾಳಿನ ಬೆಂಬಲವೂ ಸಿಗಲಿಲ್ಲ, ಅಂಗಡಿ ಮುಂಗಟ್ಟುಗಳ ಮಾತಿರಲಿ, ವಾಹನ ಸಂಚಾರ ಕೂಡ ಕೊಂಚವೂ ಏರುಪೇರಾಗಲಿಲ್ಲ, ಪೊಲೀಸರು ಹೇರಿದ್ದ ಬಂದೋಬಸ್ತ್ ಹೇಗಿತ್ತೆಂದರೆ, ಯಾವೊಬ್ಬ ಬಿಜೆಪಿಗನೂ ಕಮಕ್-ಕಿಮಕ್ ಎನ್ನದಷ್ಟು ಬಿಗಿಯಾಗಿತ್ತು.





ಬಂದ್ ಹಿಂದಿದೆ ಬಿಜೆಪಿ ಒಳಜಗಳ


ಇಂತಹದ್ದೊಂದು ಬಂದ್ ದಾವಣಗೆರೆಯ ಮಂದಿಗೆ ಸುತಾರಾಂ ಬೇಕಿರಲಿಲ್ಲ. ಜನರ ಮಾತು ಒತ್ತಟ್ಟಿಗಿರಲಿ ಕೆಲ ಬಿಜೆಪಿಗಳಿಗೇ ಈ ಬಂದ್ ಬೇಕಾಗಿರಲಿಲ್ಲ. ಆದರೂ ಇಂತಹದ್ದೊಂದು ಕಳಪೆ ಬಂದ್ ಘಟಿಸಲು ಕಾರಣವಾದದ್ದು ಬಿಜೆಪಿಯ ಮಾಜಿ ಸಚೇತಕ ಶಿವಯೋಗಿಸ್ವಾಮಿ. ಸದ್ಯ ರಾಜಕೀಯ ನಿರುದ್ಯೋಗಿಯಾಗಿರುವ ಶಿವಯೋಗಿಸ್ವಾಮಿಗೆ ಜಿಲ್ಲಾ ಬಿಜೆಪಿ ಅಧ್ಯಕ್ಷನಾಗಬೇಕೆನ್ನುವ ಮಹತ್ವಾಕಾಂಕ್ಷೆ ಇದೆ. ಆದರೆ ಅದು ಸುಲಭವಾಗಿ ಈಡೇರುವಂತಿಲ್ಲ. ಯಾಕೆಂದರೆ ದಾವಣಗೆರೆ ಜಿಲ್ಲಾ ಬಿಜೆಪಿಯೊಳಗೆ ಎಲ್ಲವೂ ನೆಟ್ಟಗಿಲ್ಲ. ಮೇಲ್ನೋಟಕ್ಕೆ ನಾಯಕರುಗಳ ನಡುವೆ ಒಗ್ಗಟ್ಟು ಇರುವಂತೆ ಕಾಣಿಸಿದರೂ ಒಳಗಿಂದೊಳಗೇ ಎರಡು ಬಣಗಳಾಗಿ ಹಂಚಿಹೋಗಿವೆ. ಮಾಜಿಮಂತ್ರಿ ರವೀಂದ್ರನಾಥ್, ಹಾಲಿ ಕೇಂದ್ರಮಂತ್ರಿ ಸಿದ್ದೇಶ್ವರರದ್ದು ಒಂದು ಬಣವಾದರೆ, ಶಿವಯೋಗಿಸ್ವಾಮಿ ಮತ್ತು ನರ್ಸ್ ರೇಣುಕಾನದ್ದು ಮತ್ತೊಂದು ಬಣ. ಜಿಲ್ಲಾ ರಾಜಕಾರಣ ತಮ್ಮ ಬಣದ ಹಿಡಿತದಲ್ಲಿರಬೇಕೆನ್ನುವ ಹಪಾಹಪಿ ಎರಡೂ ಬಣಗಳಲ್ಲಿದೆ. ಹಾಗೆ ನೋಡಿದರೆ, ಜಿಲ್ಲೆಯಲ್ಲಿ ರವೀಂದ್ರನಾಥ-ಸಿದ್ದೇಶ್ವರರ ಬಣವೇ ಪ್ರಬಲವಾಗಿದೆ. ಹಾಲಿ ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷನಾಗಿರುವ ಅಣಬೇರು ಜೀವನಮೂರ್ತಿ ಕೂಡಾ ಇದೇ ಬಣಕ್ಕೆ ಸೇರಿದವನು. ಹಾಗಾಗಿ ಅವನನ್ನು ಕೆಳಗಿಳಿಸಿ ಆ ಸ್ಥಾನಕ್ಕೆ ವಕ್ಕರಿಸುವುದು ಶಿವಯೋಗಿಸ್ವಾಮಿಗೆ ಸಲೀಸಾದ ಹಾದಿಯೇನಲ್ಲ. ಅದಕ್ಕೆಂದೇ ಆತ ದಿಢೀರ್ ಮುಂಚೂಣಿಗೆ ಬಂದು ತನ್ನ ಮರ್ಕಸ್ಸು ಹೆಚ್ಚಿಸಿಕೊಳ್ಳುವ ಹುಮ್ಮಸ್ಸಿನಲ್ಲಿದ್ದಾನೆ.


ಇದೇ ಕಾರಣಕ್ಕೆ ಶಿವಯೋಗಿಸ್ವಾಮಿ, ರಾಜಶೇಖರನ ಒಣ ಪ್ರತಿಷ್ಠೆಯನ್ನೇ ದೊಡ್ಡದು ಮಾಡಿ ಅವತ್ತು ಬಂದ್‌ನ ಹೈಡ್ರಾಮಾ ಸೃಷ್ಟಿಸಿದ್ದು. ಶಿವಯೋಗಿಸ್ವಾಮಿಯ ಅತೃಪ್ತ ಬಯಕೆಗಳನ್ನೆಲ್ಲ ಅರಿತಿರುವುದರಿಂದಲೇ ಅವತ್ತು ಆತ ಬಂದ್‌ಗೆ ಕರೆ ನೀಡುತ್ತೇನೆ ಎಂದು ಅರಚಾಡಿದಾಗ ಸಿದ್ದೇಶ್ವರ, ಜಿಲ್ಲಾ ಅಧ್ಯಕ್ಷ ಜೀವನಮೂರ್ತಿ, ರವೀಂದ್ರನಾಥರಂತವರು ವಿರೋಧ ವ್ಯಕ್ತಪಡಿಸಿದ್ದರು. ಅವರ ವಿರೋಧಕ್ಕೆ ಮಣಿದಿದ್ದೇ ಆದರೆ ಬಣ ರಾಜಕಾರಣದಲ್ಲಿ ಅವರು ಮೇಲುಗೈ ಸಾಧಿಸಿ, ತನ್ನನ್ನು ತುಳಿದೇ ಬಿಡುತ್ತಾರೆಂಬ ಒಣ ಜಂಭಕ್ಕೆ ಬಿದ್ದ ಶಿವಯೋಗಿಸ್ವಾಮಿ ಬಂದ್‌ಗೆ ಕರೆಕೊಟ್ಟಿದ್ದ. ತಮ್ಮ ಆಂತರಿಕ ಭಿನ್ನಾಭಿಪ್ರಾಯ ಹೊರಬರಬಾರದು ಎನ್ನುವ ಕಾರಣಕ್ಕೆ ಅವತ್ತು ಎರಡೂ ಬಣಗಳು ಒಟ್ಟಿಗೇ ಕಲೆತರೂ ಜನ ಮಾತ್ರ ಕ್ಯಾಕರಿಸಿ ಉಗಿದಂತೆ ಪ್ರತಿಕ್ರಿಯಿಸಿದ್ದರು. ಬಂದ್ ಸಂಪೂರ್ಣ ಠುಸ್ ಆಯ್ತು, ಈ ಪರಿ ಓಪನ್ ಮಾನಭಂಗ ಆಗಿದ್ದರೂ ಪತ್ರಿಕಾಗೋಷ್ಠಿಯಲ್ಲಿ 'ದಾವಣಗೆರೆ ಬಂದ್ ಅತ್ಯದ್ಭುತ ಯಶಸ್ಸಾಯಿತು' ಅಂತ ಶಿವಯೋಗಿಸ್ವಾಮಿ ಹೇಳಿದ್ದನ್ನು ಕೇಳಿಸಿಕೊಂಡ ದಾವಣಗೆರೆ ಜನ ಮುಸಿಮುಸಿ ನಗಾಡಿದ್ದರಲ್ಲಿ ಅಚ್ಚರಿಯೇನೂ ಇಲ್ಲ.


■ ಟಿ.ಎನ್. ಷಣ್ಮುಖ











ಖಾಸಗಿ ತೆವಲಿನ 'ಬಂದ್

ಒಂದೊಬ್ಬು ರಸ್ತೆಗುಂಡಿಯಿಲ್ಲ, ನೀರಿಲ್ಲ, ಬೀದಿದೀಪವಿಲ್ಲ, ಿಗೆ ಬಾಕಿ ಪಾವತಿ ಸಂದಾಯವಾಗಿಲ್ಲ ಎಂಬ ಾಗಳನ್ನಿಟ್ಟುಕೊಂಡು ಬಿಜೆಪಿಗಳು ಬಂದ್‌ಗೆ ಟ್ಟಿದ್ದಿದ್ದರೆ ಅವರ ಬಂಡವಾಳ ಗೊತ್ತಿದ್ದಾಗ್ಯೂ ಾಗೆರೆ ಜನ ಕೊಂಚವಾದರೂ ಸ್ಪಂದಿಸುತ್ತಿದ್ದರೇನೊ? . ಬಿಜೆಪಿ ಕರೆಕೊಟ್ಟಿದ್ದು ಅಂತ ಯಾವ ಘನಂದಾರಿ ಶಕ್ಕೂ ಅಲ್ಲ, ಅಸಲಿ ಕಾರಣ ಕೇಳಿದರೆ ಾಗಾದರೂ ಅಚ್ಚರಿಯಾಗದಿರದು.

ದಾವಣಗೆರೆಯ ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ಾನ್ಯ ಸಮಸ್ಯೆ ಅದು. ಈ ಪ್ರಾಂತ್ಯದ ಕೆಟಿಜೆ ೇಶ 2008ರಿಂದೀಚೆಗೆ ಸೆನ್ಸಿಟಿವ್ ತಾಣವೆಂದೇ

ಸಗಣಿ ಸ್ವಾಮಿಯ ಅರಣ್ಯ ಸ್ವಾ... ಹಾಽಽ... ಹಾಽಽ...!



ರಾಮಚಂದ್ರಾಪುರ ಮಠದ ರಸಿಕ ರಾಘು ಸ್ವಾಮಿ ಚಾತುರ್ಮಾಸ ವ್ರತಕ್ಕೆ ಕುಂತಾಗೆಲ್ಲ ಆತನ ಗ್ರಹಚಾರವೇ ಕೆಡುತ್ತಿದೆ. ಅದ್ಯಾಕೋ ರಾಘುಗೂ ಚಾತುರ್ಮಾಸ 'ಸಮಾರಂಭ'ಕ್ಕೂ ಆಗಿಬರುತ್ತಿಲ್ಲ, ಚಾತುರ್ಮಾಸ ಎಂದರೆ ರಾಘುಗೆ ಗಂಡಾಂತರಕಾರಿ ತಿಂಗಳುಗಳಂತಾಗಿ ಹೋಗಿದೆ! ಕಳೆದ ಬಾರಿ ಕೆಕ್ಕಾರಿನ ಶಾಖಾ ಮಠದಲ್ಲಿ ಚಾತುರ್ಮಾಸ ಲಲಿತ ಕಲೋತ್ಸವ ಹಮ್ಮಿಕೊಂಡಿದ್ದಾಗ ರಾಘುನ ಕೀಚಕ ಕಥಾ ದಶದಿಕ್ಕಿಗೆ ಮಾರ್ದನಿಸಿತ್ತು, ಈಗಾತ ಬೆಂಗಳೂರಿನ ರಾಮಾಶ್ರಯ ಮಠದಲ್ಲಿ ಚಾತುರ್ಮಾಸ ಚಮತ್ಕಾರ ನಿರತನಾಗಿ ತಾನೊಬ್ಬ ಸಚ್ಚಾರಿತ್ರ್ಯದವನೆಂದು ಪೋಸು ಕೊಡುತ್ತಿರುವಾಗಲೇ ಹೊಸನಗರ ಹೆಡ್ ಮಠದ ಆಚೀಚೆಯ ಮೀಸಲು ಅರಣ್ಯ ಭೂಮಿ ನುಂಗಿರುವ ಭಾನಗಡಿ ಬೀದಿಗೆ ಬಿದ್ದುಬಿಟ್ಟಿದೆ!!

ರಾಘು ಮಾಣಿ ತನ್ನ ರೇಪ್‌ಕೇಸ್ ತನಿಖೆ ನಡೆಸಿರುವ ಸಿಐಡಿ ಮೇಲೆ ನಾನಾ ನಮೂನೆಯ ಷಡ್ಯಂತ್ರ ಪ್ರಯೋಗಿಸಿ ಬಚಾವಾಗಲು ತಿಪ್ಪರಲಾಗ ಲಾಗಾಯ್ತಿನಿಂದ ಹಾಕುತ್ತಲೇ ಇದ್ದಾನೆ. ಆಯಕಟ್ಟಿನ ಸ್ಥಾನ-ಮಾನದಲ್ಲಿರುವ ಹಾರವ ಹಿರೇಮಣಿಗಳು ಮತ್ತು ಬ್ರಾಹ್ಮಣ ಅಧಿಕಾರಿಗಳು ರಾಘುನ ಅತ್ಯಾಚಾರ ಆರೋಪದ ಕೇಸನ್ನು ಹಳ್ಳ ಹಿಡಿಸಲು ಶತಾಯಗತಾಯ ಹವಣಿಸುತ್ತಿದ್ದಾರೆ. ಹಾಗೆ ನೋಡಿದರೆ ಸಿಐಡಿ ರಾಘುನ ಪಾತಕದ ಚಾರ್ಜ್‌ಶೀಟು ನ್ಯಾಯಾಲಯಕ್ಕೆ ಸಲ್ಲಿಸಿ ನಾಲ್ಕೈದು ತಿಂಗಳಾದರೂ ಆಗಬೇಕಿತ್ತು, ನಿರ್ದಿಷ್ಟ ದಿನಾಂಕದೊಳಗೆ ಆರೋಪ ಪಟ್ಟಿ ಸಲ್ಲಿಸುವುದಾಗಿ ಸಿಐಡಿ ಹೈಕೋರ್ಟಿಗೂ ಹೇಳಿತ್ತು, ಆದರೆ ರಾಘು ಪಟಾಲಮ್‌ನ 'ಪವಾಡ'ದಿಂದ ಇವತ್ತಿಗೂ ಚಾರ್ಜ್‌ಶೀಟ್ ಸಲ್ಲಿಕೆಯಾಗಿಲ್ಲ. ಹೇಗಾದರೂ ಮಾಡಿ ಅತ್ಯಾಚಾರ ಕೇಸನ್ನು ಪಟಾಯಿಸಿ ನಿಗುರಿ ನಿಲ್ಲಲು ರಾಘು ನಾಟಕ ಆಡಿದಂತೆಲ್ಲಾ ಆತನ ಹಲ್ಕಟ್‌ಗಿರಿ ಒಂದೊಂದಾಗಿ ತಂತಾನೆ ಹೊರಬರುತ್ತಿದೆ...

ಭೂ ವ್ಯಾಮೋಹ

ಹವ್ಯಕರ ಶ್ರದ್ಧಾ-ಭಕ್ತಿ ಕೇಂದ್ರವಾಗಿದ್ದ ರಾಮಚಂದ್ರಾಪುರ ಮಠದ ಪೀಠಕ್ಕೆ ಲೌಕಿಕ ಲಾಲಸೆ-ಚಪಲದ ರಾಘು ಮಾಣೀ ಅದ್ಯಾವ ಗಳಿಗೆಯಲ್ಲಿ ಗುರುವಾಗಿ ವಕ್ಕರಿಸಿದನೋ ಏನೋ?! ರಾಘುನ ಕಾಲ್ಗುಣದಿಂದ ಮಠದ ಆಗು-ಹೋಗು, ವ್ಯವಹಾರ-ಮೆಂವಾಟು, ಧಾರ್ಮಿಕ ನಡಾವಳಿಗಳೆಲ್ಲ ಹೆಣ್ಣು-ಹೊನ್ನು-ಮಣ್ಣನ್ನೇ ಗುರಿಯನ್ನಾಗಿಟ್ಟುಕೊಂಡು ನಡೆಯಲಾರಂಭಿಸಿತು. ಹಣ-ಹೆಣ್ಣನ್ನು ವಶೀಕರಿಸಿ ಕೊಂಡಷ್ಟೇ ಸಲೀಸಾಗಿ ಭೂಮಿಯನ್ನೂ ಕಬಳಿಸುವ ಕೈಂಕರ್ಯ ರಾಘು ಮಾಣಿ ವ್ಯವಸ್ಥಿತವಾಗಿ ಶುರು ಹಚ್ಚಿಕೊಂಡಿದ್ದ. ರಾಘು ತನ್ನ ಹೆಡ್ ಮಠ, ಉಪ ಮಠಗಳ ಸುತ್ತಲಿನ ಸರ್ಕಾರಿ ಜಾಗ ನುಂಗುವ ಸಂಚು ಹೆಣೆಯುವುದು ಮಾಮೂಲಾಗಿ ಹೋಯ್ತು, ಅಧಿಕಾರಸ್ಥರ ಸಖ್ಯದಿಂದ ಅರಣ್ಯ ಭೂಮಿ ಲೂಟಿಗೂ ಈತ ಕೈಹಾಕಿದ.

ಹೊಸನಗರ ತಾಲ್ಲೂಕಿನ ಹುಂಚಾ ಹೋಬಳಿಯ ರಾಮಚಂದ್ರಾಪುರ ಗ್ರಾಮದ ಸರ್ವೆ ನಂಬರ್ 7ರ ಪಕ್ಕವೇ ಹವ್ಯಕರ ಶ್ರೀರಾಮಚಂದ್ರಾಪುರ ಮಠವಿದೆ. ರಾಘು ಪೀಠ ಏರಿದ ಕ್ಷಣವೇ ಸದ್ರಿ ಸರ್ವೆ ನಂಬರ್ 7ರ ಮೀಸಲು ಅರಣ್ಯ ಭೂಮಿ ಮೇಲೆ ಆತನ ಕೆಟ್ಟ ಕಣ್ಣು ಬೀಳುತ್ತದೆ. ಕಾವಿ ಬಲದಿಂದ ಎಂಥ ಅಕ್ರಮ-ಅನ್ಯಾಯವನ್ನಾದರೂ ದಕ್ಕಿಸಿಕೊಳ್ಳಬಲ್ಲೆನೆಂಬ ದಾರ್ಷ್ಟ್ಯದ ರಾಘು ಬರೋಬ್ಬರಿ 19 ಎಕರೆ ಅರಣ್ಯ ಭೂಮಿ ಒತ್ತುವರಿ ಮಾಡಿಕೊಂಡುಬಿಟ್ಟ. ಅಷ್ಟೇ ಅಲ್ಲ ಅಲ್ಲಿ ಹತ್ತಾರು ಸ್ಥಾವರ ನಿಲ್ಲಿಸಿ ಮಹಾಹತುಶಾಹಿ ಅಟ್ಟಹಾಸ ನಡೆಸಹತ್ತಿದ.

ಅರಣ್ಯ ಭೂಮಿಯಲ್ಲಿದ್ದ ಕೆರೆಗೆ ಅಗಸ್ತ್ಯ ತೀರ್ಥ ಎಂಬ ಆಧ್ಯಾತ್ಮಿಕ ಹೆಸರಿಟ್ಟು ಭೋಂಗು ಬಿಟ್ಟ; ಗುರುಮಂದಿರ ಎಂಬ ಒಂದು ಕಟ್ಟಡ ಕಟ್ಟಿಸಿದ. ನೀರಿನ ದೊಡ್ಡ ತೊಟ್ಟಿ



ಒತ್ತುವರಿಯಾದ 19 ಎಕರೆ ಅರಣ್ಯಭೂಮಿಯಲ್ಲಿ 6 ಗುರುಕುಲ ಶಾಲೆ ಮತ್ತು ಒಂದು ವೇದಶಾಲೆ

ನಿರ್ಮಾಣ ಮಾಡಿದ. ಆರು ಗುರುಕುಲ ಶಾಲೆ ಮತ್ತು ಒಂದು ವೇದಪಾಠಶಾಲೆ ಕಟ್ಟಿಕೊಂಡು ದಂಧೆ ಆರಂಭಿಸಿಬಿಟ್ಟ! ಈ 19 ಎಕರೆ ಭೂಮಿಯನ್ನು ಅಧಿಕೃತ ಕಬ್ಜಾ ಮಾಡಿಕೊಳ್ಳಲು ರಾಘು ಒಳಗೊಳಗೇ ಹಿಕಮತ್ತು ಮಾಡುತ್ತಲೇ ಇದ್ದ. ಆದರೆ ಯಶಸ್ಸು ಮಾತ್ರ ಸಿಗದೆ ಚಡಪಡಿಸುತ್ತಿದ್ದ.

ಇದು ಮೀಸಲು ಅರಣ್ಯ

ರಾಘು ಮಾಣಿ ಕಬಳಿಸಿರುವ 19 ಎಕರೆ ಭೂಮಿಯಿದೆಯಲ್ಲ, ಅದು ಪಕ್ಕಾ ಮೀಸಲು ಅರಣ್ಯ ಭೂಮಿ. ರಾಮಚಂದ್ರಾಪುರ ಗ್ರಾಮದ ಸರ್ವೆ ನಂಬರ್ 7ರ 148 ಎಕರೆ ಭೂಮಿ 6.7.1965ರಲ್ಲಿ ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಮೀಸಲು ಅರಣ್ಯ ರಚನೆ ಉದ್ದೇಶಕ್ಕಾಗಿ ವರ್ಗಾಯಿಸಲ್ಪಟ್ಟಿದೆ (ಮೈಸೂರು ರಾಜ್ಯಪಾಲರ ನಡಾವಳಿ ಆದೇಶ ಸಂಖ್ಯೆ ಎಫ್‌ಡಿ 32/ ಎಲ್‌ಎಡಿ-62 1981ರ ಡಿಸೆಂಬರ್ 31ರಂದು ಕರ್ನಾಟಕ ಸರ್ಕಾರ ಒಂದು ಅಧಿಸೂಚನೆ ಹೊರಡಿಸಿ ಮೀಸಲು ಅರಣ್ಯ ರಚನೆ ಪ್ರಕ್ರಿಯೆ ಪೂರ್ಣಗೊಳಿಸಲು ಒಬ್ಬ ವಿಶೇಷಾಧಿಕಾರಿ (ಅರಣ್ಯ ವ್ಯವಸ್ಥಾಪನಾಧಿಕಾರಿ) ನೇಮಿಸುತ್ತದೆ. ಈತನಿಗೆ ಸಿವಿಲ್ ನ್ಯಾಯಾಲಯದ ಅಧಿಕಾರದತ್ತವಾಗಿರುತ್ತದೆ. ರಾಮಚಂದ್ರಾಪುರದ ಸರ್ವೆ ನಂಬರ್ 7ರ 120 ಎಕರೆ ಹಾಗು ಸರ್ವೆ ನಂಬರ್ 56ರ 100 ಎಕರೆ ಪ್ರದೇಶ ಸೇರಿ ಒಟ್ಟು 220 ಎಕರೆ ಮೀಸಲು ಅರಣ್ಯ ರಚಿಸುವ ಉದ್ದೇಶ ಸರ್ಕಾರದ್ದಾಗಿರುತ್ತದೆ.

ಆದರೆ ಅರಣ್ಯ ವ್ಯವಸ್ಥಾಪನಾಧಿಕಾರಿ ಕೋರ್ಟ್ ನಡಾವಳೀ ಕೈಗೊಂಡಾಗ ಸರ್ವೆ ನಂಬರ್ 7ರ ಉದ್ದೇಶಿತ ಮೀಸಲು ಅರಣ್ಯ ಪ್ರದೇಶದಲ್ಲಿ 17 ಜನರು ಒತ್ತುವರಿ ಮಾಡಿಕೊಂಡು ಒಟ್ಟು 19 ಎಕರೆಯಲ್ಲಿ ಮನೆ-ಸಾಗುವಳಿ ಮಾಡಿಕೊಂಡಿರುವುದು ತಿಳಿಯುತ್ತದೆ. ಹಾಗೆಯೇ ಸರ್ವೆ ನಂಬರ್ 56ರಲ್ಲೂ 16 ಎಕರೆ ಜಾಗದಲ್ಲಿ 12 ಜನರು ಜನತಾ ಮನೆ ನಿರ್ಮಿಸಿಕೊಂಡಿರುವುದು ಗೊತ್ತಾಗುತ್ತದೆ. ಈ 35 ಎಕರೆ ಜಾಗವನ್ನು ಬಿಟ್ಟು ಉಳಿದ 185 ಎಕರೆಯಲ್ಲಷ್ಟೇ ಮೀಸಲು ಅರಣ್ಯ ರಚಿಸಲು ವ್ಯವಸ್ಥಾಪನಾಧಿಕಾರಿ ಶಿಫಾರಸ್ಸು ಮಾಡುತ್ತಾರೆ. ಇದು ಭೂಕಂದಾಯ ಅಧಿನಿಯಮ 192ಸಿ ತಿದ್ದುಪಡಿ 11.12.2006ರ ಪ್ರಕಾರ ಕಾನೂನುಬದ್ಧವೂ ಆಗಿರುತ್ತದೆ ಮತ್ತು ವ್ಯವಸ್ಥಾಪನಾಧಿಕಾರಿಗೆ ಕೊಡಲಾದ ಅಧಿಕಾರ-ಹಕ್ಕುಗಳ ಅನ್ವಯ ಸರಿಯಾಗಿರುತ್ತದೆ. ಈ ವಿಚಾರಣೆ ಹೊತ್ತಲ್ಲಿ ರಾಮಚಂದ್ರಾಪುರ ಮಠ ತನಗೆ ಸರ್ವೆ ನಂಬರ್ 7ರ ಜಾಗದಲ್ಲಿ ಹಕ್ಕಿದೆ ಎಂದು ವಾದವನ್ನೇ ಮಂಡಿಸಿರುವುದಿಲ್ಲ.

ಸಿಸಿಎಫ್‌ಗೆ ರಾಘುನ ಆಶೀರ್ವಚನ ಪತ್ರ!

ಅರಣ್ಯ ವ್ಯವಸ್ಥಾಪನಾಧಿಕಾರಿಯ ತೀರ್ಪನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲು ಮೂರು ತಿಂಗಳು ಅವಕಾಶ ಇದ್ದರೂ ಆಗಲೂ ರಾಮಚಂದ್ರಾಪುರ ಮಠದವರು ತಕರಾರು ಎತ್ತುವುದಿಲ್ಲ, ಇದಕ್ಕೆ ಕಾರಣ- ಈ ತೀರ್ಪು ಬಂದಾಗ (30.10.1991) ಭೂದಾಹದ ರಾಘು ಮಾಣಿಯಿನ್ನೂ ಪೀಠಕ್ಕೆ ಬಂದಿರಲಿಲ್ಲ; ಅಂದಿನ ಹವ್ಯಕರ ಗುರುಗಳಿಗೆ ರಾಘುನಂಥ ಕೀಳು ಚಪಲ-ಲೌಕಿಕ ಲಹರಿ ಇರಲಿಲ್ಲ. ಅರಣ್ಯ ವ್ಯವಸ್ಥಾಪನಾಧಿಕಾರಿಗಳ ನಡಾವಳಿ (ಸಂಖ್ಯೆ ಅ-ವ್ಯ(1)/ಸಿ.ಆರ್-51/81-82) ಯನ್ನು ಶಿವಮೊಗ್ಗದ ಜಿಲ್ಲಾಧಿಕಾರಿ 19.6.2001ರಲ್ಲಿ ಮಾನ್ಯ ಮಾಡಿ ರಾಮಚಂದ್ರಾಪುರ ಗ್ರಾಮದ ಸರ್ವೆ ನಂಬರ್ 7 ಮತ್ತು 56ರ ಒಟ್ಟು 185 ಎಕರೆ ಮೀಸಲು ಅರಣ್ಯವಾಗಿ ಘೋಷಿಸಲು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗೆ ಪ್ರಸ್ತಾವನೆ ಸಲ್ಲಿಸುತ್ತಾರೆ.


ಈ ಹೊತ್ತಿಗೆ ರಗಳೆ ರಾಘು ಮಾಣಿ ರಾಮಚಂದ್ರಾಪುರ ಮಠದ 'ಕಾವಿ ಕಿಂಗ್' ಆಗಿ ಅವತರಿಸಿರುತ್ತಾನೆ. ಹೀಗಾಗಿ ಜಿಲ್ಲಾಧಿಕಾರಿ ಪ್ರಸ್ತಾವನೆ ಸುದ್ದಿ ಕಿವಿಗೆ ಬೀಳುತ್ತಿದ್ದಂತೆಯೇ ರಾಘುನ ಕುಂಡೆಗೆ ಹಸಿ ಮೆಣಸು ತಿಕ್ಕಿದಂತಾಗುತ್ತದೆ. ಏಕೆಂದರೆ, ಅದಾಗಲೇ ಸರ್ವೆ ನಂಬರ್ 7ರ 19 ಎಕರೆ ಜಾಗಕ್ಕೆ ಬೇಲಿ ಸುತ್ತಿಯಾಗಿತ್ತು, ಅಂದರೆ ಮೀಸಲು ಅರಣ್ಯ ರಚನೆಯ ಪ್ರಕ್ರಿಯೆ-ವಿಚಾರಣೆ, ಮೇಲ್ಮನವಿ ಅವಕಾಶ ಎಲ್ಲ ಮುಗಿದ ಬರೋಬ್ಬರಿ 10 ವರ್ಷದ ನಂತರ ರಾಮಚಂದ್ರಾಪುರ ಮಠದ ಮಹಾಮಹಿಮರಿಗೆ ಸರ್ವೆ ನಂಬರ್ 7ರ ಜಾಗದ ಸ್ಥಳ ಮಹಿಮೆಯ ಅರಿವಾಗುತ್ತದೆ. ಆಗ ಗಡಿಬಿಡಿಗೆ ಬಿದ್ದ ರಾಘು ಗ್ಯಾಂಗು 19 ಎಕರೆ ಆಶ್ರಮ ಕಬ್ಜಾ ಸಕ್ರಮ ಮಾಡಿಕೊಳ್ಳಲು ಮುಖ್ಯ ಅರಣ್ಯಾಧಿಕಾರಿಗಳ ಚೇಂಬರಿನಲ್ಲೇ ಚಮತ್ಕಾರ ನಡೆಸುತ್ತದೆ.

ರಾಘು 4.8.2001ಕ್ಕೆ ಅಂದಿನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಿಸಿಎಫ್) ಬಿ. ನಟರಾಜನ್‌ಗೊಂದು 'ಆಶೀರ್ವಚನ' ಪತ್ರ ಬರೆಯುತ್ತಾನೆ. ಮೀಸಲು ಅರಣ್ಯದಿಂ ಸರ್ವೆ ನಂಬರ್ 7ರ 145.26 ಎಕರೆ ಪ್ರದೇಶವ ಬೇರ್ಪಡಿಸುವ ಅಕ್ರಮ-ಕಾನೂನುಬಾಹಿರ ಕೆಲಸ ಮಾ ಭಗವಂತನ ಕೃಪೆಗೆ ಪಾತ್ರನಾಗುವಂತೆ ಪುಸಲಾಯಿಸುತ್ತಾ ಆತನ ಪತ್ರ ಅದೆಷ್ಟು ಹಾಸ್ಯಾಸ್ಪದ ಆಗಿದೆಯೆಂದ "ರಾಮಚಂದ್ರಾಪುರ ಗ್ರಾಮದ ಸರ್ವೆ ನಂಬರ್ 7ರ ಮಠಕ್ಕೆ ಅನಾದಿ ಕಾಲದಿಂದಲೂ ಹಕ್ಕಿದೆ... ಹಾಗಾಗಿ ಸ ಸರ್ವೆ ನುಬರಿನ ಅಷ್ಟೂ 145.26 ಎಕರೆ ಗೋಮಾಳವಾ ಉಳಿಸಿರಿ. ಮಠದ ಜಾನುವಾರುಗಳಿಗೆ ಮೇವಿಗೆ ಮ ಇತರ ಜನಪರ ಉದ್ದೇಶಕ್ಕಾಗಿ ಈ ಭೂಮಿಯನ್ನು ಅರ ಇಲಾಖೆಗೆ ಸೇರ್ಪಡೆ ಮಾಡುವ ಪ್ರಸ್ತಾವನೆ ಕೈಬಿ ತನ್ಮೂಲಕ ಭಗವಂತನ ಕೃಪೆಗೆ ಪಾತ್ರರಾಗಬೇಕ ಆಪೇಕ್ಷಿಸುತ್ತೇನೆ...." ಎಂದು ರಾಘು ಸ್ವಾಮಿ ಕುಕೃತ ಕುಮ್ಮಕ್ಕು ಕೊಟ್ಟಿದ್ದಾನೆ. ಇದಕ್ಕೆ ಭಗವಂತನ ಹೆಸರು ಬ ಬಳಸಿಕೊಂಡು ಭಾವನಾತ್ಮಕ ದಂಧೆಗೆ ಯೋಜ ಹೆಣೆದಿದ್ದಾನೆ.

ಸಪ್ಲಾಯರ್ ಮಾಣಿ ಸಹಕಾರ

ಗೋಮಾಳ ನುಂಗುವ ಕಲೆ ಕರಗತ ಮಾಡಿಕೊಂಡಿರು ರಾಘು ಮಾಣಿ ವಾಮಮಾರ್ಗದಿಂದ ಅರಣ್ಯ ಅಧಿಕಾರಿ ದಿಕ್ಕು ತಪ್ಪಿಸುವುದರಲ್ಲೂ ನಿಸ್ಸೀಮನೇ. ಆತನಿಗೆ ಬ್ರಾಹ್ಮ ರಾಜಕಾರಣಿಗಳನ್ನು ತನ್ನ ಧಾರ್ಮಿಕ ದಂಧೆಗೆ ಹ ಉಪಯೋಗಿಸಿಕೊಳ್ಳಬೇಕೆಂಬುದೂ ಗೊತ್ತು. ಅರ ಭವನದಲ್ಲಿ ಅಂದು ಪ್ರಭಾವಿಯಾಗಿದ್ದ ಹವ್ಯಕ ಪುಢ ಉಮ್ಮಾಣಿ ಭಟ್ಟ ಯಾನೆ ಉಮೇಶ್ ಭಟ್ಟನ ಬಳಸಿಕೊಳ್ ರಾಘು ಸ್ಕೆಚ್ ಹಾಕಿದ್ದಾನೆ. ಉಮ್ಮಾಣಿಯನ್ನು ಕರೆ ಸರ್ವೆ ನಂಬರ್ 7ರ ಗೋಮಾಳ ಮೀಸಲು ಅರ ವ್ಯಾಪ್ತಿಗೆ ತರದಂತೆ ತಂತ್ರ ನಡೆಸಲು ಉಪದೇಶ ಮಾಡಿದ

ಹವ್ಯಕ ಕುಲಕ್ಕೇ ಕಪ್ಪುಚುಕ್ಕೆಯಂತಿರುವ ಉಮ್ಮಾ ಭಟ್ಟನ ಕಂಡರೆ ಸ್ವಜಾತಿ ಸಜ್ಜನರೇ ಅಸಹ್ಯ ಇವತ್ತ ಪಡುತ್ತಾರೆ. ಒಮ್ಮೆ ಅಚಾನಕ್ ಉತ್ತರ ಕನ್ನಡದ ಅಂಕೋ ಕ್ಷೇತ್ರದ ಶಾಸಕನಾಗಿದ್ದ ಉಮ್ಮಾಣಿ ಒಂದು ಕಾಲದ ಬೆಂಗಳೂರಿಗೆ ಓಡಿಹೋದಾತ. ಅಲ್ಲಾತ ಕಲಿತ ವಿದ್ಯೆ ಸಪ್ಲಾಯರಿಕೆ! ಆತ ಅದೆಷ್ಟು ಅಪಾಯಕಾರಿಯ ಬೆಳೆದನೆಂದರೆ ಐಎಎಸ್, ಐಎಫ್‌ಎಸ್, ಐಪಿಎಸ್‌ಗಳ ಏಕವಚನದಲ್ಲಿ ಸಂಬೋಧಿಸುವಷ್ಟು! ಈ ಬಿಳಿ ಕಾಲ



...ಿಗಳ ತೆವಲು-ತೀಟೆ ಅರ್ಥಮಾಡಿಕೊಂಡು ...ಜು ಮಾಡಿದ ಉಮ್ಮಾಣಿ ಅರಣ್ಯ ಭವನ, ...ಸೌಧ, ವಿಕಾಸಸೌಧದಲ್ಲೆಲ್ಲ ಲೇವಾದೇವಿ ...ನೆಂದೇ ಪರಿಚಿತನಾಗಿ ಹೋದ.

... ಚಾಲಾಕಿತನವೇ ಆತ ಅಂದಿನ ಸಿಸಿಎಫ್ ...ನ್ ಮುಂದೆಯೂ ಪ್ರದರ್ಶಿಸಿ ಒಲಿಸಿಕೊಂಡಿದ್ದಾನೆ. ...ಗರದ ರಾಮಚಂದ್ರಾಪುರ ಗ್ರಾಮದ ಸರ್ವೆ ನಂಬರ್ ...ೀಸಲು ಅರಣ್ಯ ಪ್ರದೇಶವನ್ನು ರಾಘು ಮಾಣಿಯ ...ಕ್ಕೆ ಅರಣ್ಯ ಇಲಾಖೆಯೇ ಬಿಟ್ಟುಕೊಡುವಂತೆ ...ತ್ತು ಮಾಡಿದ್ದಾನೆ. ಉಮ್ಮಾಣಿಯ ಸಮ್ಮೋಹಿನಿಗೆ ...ದ ಸಿಸಿಎಫ್ ಸಾಹೇಬರು ಶಿವಮೊಗ್ಗೆಯ ಅರಣ್ಯ ...ಪನಾಧಿಕಾರಿಗೆ ರಾಘುನ ಆಸೆಯ ಪ್ರದೇಶವನ್ನು ...ು ಅರಣ್ಯ ವ್ಯಾಪ್ತಿಯಿಂದ ಕೈಬಿಟ್ಟು ಮರು ಪ್ರಸ್ತಾವನೆ ...ು ಪತ್ರ ಬರೆದಿದ್ದಾರೆ.

ರಾಜಣ್ಣನ ರಗಳೆ

... ಹೊತ್ತಿಗೆ ಅರಣ್ಯ ವ್ಯವಸ್ಥಾಪನಾಧಿಕಾರಿ ಆಗಿದ್ದದ್ದು ...ಸ ಎಸಿ ಬಿ.ಟಿ. ರಾಜಣ್ಣ ಎಂಬ ಎಡಬಿಡಂಗಿ. ...ಸಿಸಿಎಫ್ ನಟರಾಜ್‌ರ 'ಪುನರ್ ಪರಿಶೀಲನಾ' ...ವ ಪತ್ರ ಬಂದಾಗ ಎಗರಾಡಿದ್ದಾನೆ. 1991ರಲ್ಲೇ ...ವ್ಯವಸ್ಥಾಪನಾಧಿಕಾರಿ ಸರ್ವೆ ನಂಬರ್ 7ರ ಮೀಸಲು ... ಮುಗಿಸಿದ್ದಾರೆ. 30.10.1991ರಲ್ಲಿ ಸ್ಥಳ ಪರಿಶೀಲಿಸಿ ... ಇತ್ಯರ್ಥ ಮಾಡಿ ತೀರ್ಪು ನೀಡಿದ್ದಾರೆ. ಆಗ ...ಂದ್ರಾಪುರ ಮಠದವರು ಸರ್ವೆ ನಂಬರ್ 7ರಲ್ಲಿ ... ಹಕ್ಕಿದೆಯೆಂದು ತಕರಾರೇನೂ ಎತ್ತಿಲ್ಲ. ಹೀಗಾಗಿ ... ಮನವಿ ಪರಿಶೀಲಿಸಲು ಕಾನೂನಿನಲ್ಲಿ ಅವಕಾಶವೇ ...ಂದು ನೇರಾನೇರ ಸಿಸಿಎಫ್ ನಟರಾಜ್‌ರ ಮೂತಿಗೆ ...ವಂತೆ ಪತ್ರ ಬರೆದಿದ್ದಾರೆ.

...ಗ ಮತ್ತೆ ಉಮ್ಮಾಣಿ ಭಟ್ಟ ಹಾಗೂ ಶಿವಮೊಗ್ಗೆಯ ... ಅಧಿಕಾರಸ್ಥ ರಾಜಕಾರಣಿಗಳು ಆಟ ಆಡಿದ್ದಾರೆ. ... ಮತ್ತು ಎಸಿ ರಾಜಣ್ಣರ ಪಳಗಿಸಲು ಏನೇನು ...ು ಸಾಧ್ಯವೋ ಅದೆಲ್ಲ ಮಾಡಿದ್ದಾರೆ. ರಾಜಣ್ಣ ...ದದ್ದು ಖಾತ್ರಿಯಾಗುತ್ತಿದ್ದಂತೆಯೇ ರಾಘುನ ಬಳಗ ... ಬೇರೊಂದು ಮನವಿ ಸಲ್ಲಿಸಿ ಬೇಡಿಕೆ ಪರಿಗಣಿಸಲು ...ಸಿದೆ. ಇದೆಲ್ಲವೂ ಫಿಕ್ಸಿಂಗ್ ಗೇಮ್! ಸ.ನಂ. 7 ... 56ರ ಒಟ್ಟು 185 ಎಕರೆಗೆ ಸಂಬಂಧಿಸಿದಂತೆ, ... ಕರ್ನಾಟಕ ಅರಣ್ಯ ಸಂರಕ್ಷಣಾ ಕಾಯ್ದೆ 1963ರ ... 17ರಂತೆ ಅಂತಿಮ ಅಧಿಸೂಚನೆ ಹೊರಡಿಸಿಲ್ಲ. ... ಅದೇ ಕಾಯ್ದೆಯ ಅಧಿನಿಯಮ ಕಲಂ 9ರಂತೆ ... ಹಕ್ಕನ್ನು ಮಾನ್ಯ ಮಾಡುವಂತೆ ರಾಘು ...ಫಿಯಾ ಅರಣ್ಯ ವ್ಯವಸ್ಥಾಪನಾಧಿಕಾರಿ ರಾಜಣ್ಣನ ... ಮುಸುಕು ಹಾಕುತ್ತದೆ!

...ತಿ ಬೇಗಾಗುವುದರಲ್ಲಿ ರಾಜಣ್ಣ ರಾಘುನ ಮಠದ ...ಪರ ನಿಂತು ಬಿಡುತ್ತಾನೆ. ಸ್ಥಳ ಪರಿಶೀಲನೆಯ ... ಮಾಡುತ್ತಾನೆ. 22.01.2002ರಂದು ಒಂದು ...ವಿಚಾರಣೆ ಮಾಡುತ್ತಾನೆ. ಆಗ ಹೊಸನಗರದ ... ಹಿಡಿದೇಳುತ್ತಾರೆ. ಮಠದ ಪುಡಿಭಟನೆ ಬಲವಾಗಿ ...ಸುತ್ತಾರೆ. ದನಗಳ ಪರವಾಗಿ ಮೀಸಲು ಅರಣ್ಯದ [illegible] ... 1980ರ ... [illegible] ಎಂದು ವಾದಿಸುತ್ತಾರೆ.

...ದ್ದುದಕ್ಕೂ, ರಾಜಣ್ಣ ಕೇಸ್ ಮಾಡುವುದಿಲ್ಲ, ಮಠ [illegible] ಆತ ಅಕ್ರಮ [illegible] ... 11.03.2002ರಂದು [illegible] ... ಬರೆದು ಬಿಡುತ್ತಾನೆ. ಸರ್ವೆ ನಂಬರ್ 7ರಲ್ಲಿ ...ಲೇ ಬಗರ್ ಹುಕುಂ ಸೌಲಭ್ಯದಂತೆ ಕೈಬಿಡಲಾದ ... ಜತೆಗೆ ಮತ್ತೆ 25 ಎಕರೆ ಸೇರಿಸಿ ಗೋಮಾಳ [illegible]...ುತ್ತಾನೆ.

... ಕರ್ನಾಟಕ ಸರ್ಕಾರದ ಅಧಿಸೂಚನೆಯೂ ಆಗಿಹೋಗುತ್ತದೆ. ಅಧಿಸೂಚನೆ ಸಂಖ್ಯೆ ಅಪಜೀ 42 ಎಫ್‌ಎಎಫ್ 2004 ದಿನಾಂಕ 28.03.2005ರಲ್ಲಿ ರಾಮಚಂದ್ರಾಪುರದ ಸರ್ವೆ ನಂಬರ್ 7ರ 76 ಎಕರೆ ಮತ್ತು ಸರ್ವೆ ನಂಬರ್ 56ರ 84 ಎಕರೆ ಒಟ್ಟು 160 ಎಕರೆ ಮಾತ್ರ ಮೀಸಲು ಅರಣ್ಯ ಎಂದು ಘೋಷಿಸಲಾಗುತ್ತದೆ.

ಅಕ್ರಮ ಅನ್ಯಾಯ!!

ರಾಘು ಮಠ ಮಾಫಿಯಾದ ಲಾಬಿಗೆ ವಶವಾಗಿ ಎಸಿ ರಾಜಣ್ಣ ಮಾಡಿರುವ 'ಗೋಮಾಳ ಗೊಂದಲ' ಇದೆಯಲ್ಲ; ಅದು ಕಾನೂನುಬಾಹಿರ. ಅಷ್ಟೇ ಅಲ್ಲ, ನೈಸರ್ಗಿಕ ನ್ಯಾಯತತ್ವದ ಬುದ್ಧಿಪೂರ್ವಕ ಉಲ್ಲಂಘನೆ! ರಾಜಣ್ಣ ನಡೆಸಿರುವ ವಿಚಾರಣೆ ಏಕಮುಖ; ಮಠದ ಮರ್ಜಿ ಕಾಯುವ ಕುಚೋದ್ಯದ್ದು. ಆತ ವಿಚಾರಣೆ ರಾಮಚಂದ್ರಾಪುರ ಗ್ರಾಮದಲ್ಲಿ ನಡೆಸಬೇಕಿತ್ತು, ಗ್ರಾಮಸ್ಥರಿಗೂ ಹೇಳಿಕೆ ಕೊಡಲು ಅವಕಾಶ ಕೊಡಬೇಕಿತ್ತು. ಆದರೆ ಈ ಅಡ್ನಾಡಿ ರಾಜಣ್ಣ ಆಫೀಸಿನಲ್ಲೇ ಕುಳಿತು ವಾದಿ-ಪ್ರತಿವಾದಿ ಸಮಕ್ಷಮ ವಿಚಾರಣೆ ಶಾಸ್ತ್ರ ಮುಗಿಸಿ ಸಂವಿಧಾನ ವಿರೋಧಿ ಕಿತಾಪತಿ ಮಾಡಿದ್ದಾನೆ.

ಆತ ರಾಘುನ ಮಠ ಮಾಫಿಯಾ ಅತಿಕ್ರಮಿಸಿ, ಕಟ್ಟಡಗಳನ್ನು ಎಬ್ಬಿಸಿ ಧಾರ್ಮಿಕ ಬಿಸ್ನೆಸ್ ನಡೆಸುತ್ತಿರುವ ಪ್ರದೇಶ ಗೋಮಾಳ ಎಂದು ಘೋಷಿಸಿರುವುದೇ ಅಕ್ಷಮ್ಯ ಅಪರಾಧ. ಆತನ ತೀರ್ಪಿನಲ್ಲಿ ಹಲವು ವಿರೋಧಾಭಾಸದ ಅಂಶಗಳು ಸೇರಿದೆ. ಹಿಂದಿನ ಗೋಮಾಳ ಪ್ರದೇಶದಲ್ಲಿ ರಾಮಚಂದ್ರಾಪುರ ಮಠದವರ ಒತ್ತುವರಿಯ ಯಾವ ಕುರುಹುಗಳೂ ಇಲ್ಲ ಎಂದು ಪರೋಕ್ಷವಾಗಿ ಒಪ್ಪಿಕೊಳ್ಳುವ ರಾಜಣ್ಣ ಮಠದ 'ಗೋಮಾಳ ಮನವಿ' ಪುರಸ್ಕರಿಸಿರುವುದು ವಿಚಿತ್ರ! ತಮ್ಮದೆಂದು ಹೇಳಿರುವ ಜಾಗದಲ್ಲಿ ಬೇಲಿ ಮಠದವರು ಹಾಕಿದ್ದಾರೆಂದು ರಾಜಣ್ಣ ತೀರ್ಪಿನಲ್ಲಿ ಬರೆದಿರುವುದು ಪ್ರತಿವಾದಿ ಆರ್‌ಎಫ್‌ಓ ಸಲ್ಲಿಸಿದ ಒತ್ತುವರಿ ನಕಾಶೆಗೆ ಪೂರಕವಾಗಿದೆ. ಅಂದರೆ ಮಠದ್ದು ಪಕ್ಕಾ ಪ್ರಮಾದ ಎಂಬುದು ರಾಜಣ್ಣನೇ ಸಾಬೀತುಪಡಿಸಿದಂತಾಗಿದೆ.

ಎತ್ತಿಂದೆತ್ತ ಲೆಕ್ಕಾಚಾರ-ತಾಳೆ ಹಾಕಿ ನೋಡಿದರೂ 1991ರಲ್ಲಿ ಗ್ರಾಮಸ್ಥರ ಸಮಕ್ಷಮ ಆಗಿರುವ ವಿಚಾರಣೆ ಮತ್ತು 2002ರ ನಡಾವಳಿ ನಡುವೆ ಮಠ ಮಾಫಿಯಾ ಅತಿಕ್ರಮಣ ಮಾಡಿರುವುದು ಸ್ಪಷ್ಟವಾಗುತ್ತದೆ. ರಾಘು ಗ್ಯಾಂಗ್ ಬಿಟ್ಟು ಗ್ರಾಮದ ಬೇರಾರೂ ಗೋಮಾಳಕಾಗಿ [illegible] ನಂಬರ್ 7ರ ಜಾಗ ಬೇಕೆಂದು ಬೇಡಿಕೆ ಇಟ್ಟಿಲ್ಲ. 1991 ಮತ್ತು 2002ರ ವಿಚಾರಣೆಯ ನಡುವಿನ ಅವಧಿಯಲ್ಲಿ ರಾಮಚಂದ್ರಾಪುರ ಗ್ರಾಮದ ವ್ಯಾಪ್ತಿಯಲ್ಲಿ ಜಾನುವಾರು ಸಂಖ್ಯೆ ಹೆಚ್ಚೇನೂ ಆಗಿಲ್ಲ, ಬದಲಿಗೆ ಕಡಿಮೆಯೇ ಆಗಿದೆ. ಅಲ್ಲದೆ ಈ ಗ್ರಾಮದ 13 ಸರ್ವೆ ನಂಬರ್‌ಗಳು ಗೋಮಾಳಕ್ಕೆ ಬಿಡಲಾಗಿದೆ. ಒಟ್ಟು 313.32 ಎಕರೆ ಗೋಮಾಳ ರಾಮಚಂದ್ರಾಪುರ ಗ್ರಾಮದಲ್ಲಿದೆ.

ಅಷ್ಟೇ ಅಲ್ಲ, ಗ್ರಾಮಸ್ಥರಿಗೆ, ಸೌದೆ, ಸೊಪ್ಪು ಇತ್ಯಾದಿ ಸೌಲಭ್ಯವೂ ಸಹ [illegible] ಪ್ರದೇಶದಲ್ಲಿ ಕೊಡಲಾಗಿದೆ. ಹೀಗಿರುವಾಗ ಸರ್ವೆ ನಂಬರ್ 7ರ 25 ಎಕರೆ [illegible] ಮೀಸಲು ಅರಣ್ಯದಿಂದ ಹೊರಹಾಕಿ ಗೋಮಾಳ ಎಂದು ಘೋಷಿಸಿರುವುದು ಎಸಿ ರಾಜಣ್ಣನ ಅಧಿಕಪ್ರಸಂಗವೇ ಸರಿ. ರಾಘು ಅಂಡ್ ಕೋ.ನ ಭೂಕಬಳಿಕೆಗೆ ನೆರವಾಗಲೆಂದೇ ಅಂದಿನ ಸಿಸಿಎಫ್ ಮತ್ತು ಎಸಿ ರಾಜಣ್ಣ ಸೇರಿ ನಡೆಸಿದ ಅಪರಾಧವಿದು.

ಎಸಿಎಫ್ ಅಲ್ವೀನ್ ಅಂಗಳದಲ್ಲಿ

ಅರಣ್ಯ ವ್ಯವಸ್ಥಾಪನಾಧಿಕಾರಿಯಾಗಿ ನೇಮಕವಾದ ಗಳಿಗೆಯಿಂದಲೇ ಎಸಿ ರಾಜಣ್ಣ ರಾದ್ಧಾಂತ ಮಾಡಿದ್ದಾನೆ. ತನ್ನ ಮಠ ಪರವಾದ ತೀರ್ಪನ್ನೇ ಸರ್ಕಾರಕ್ಕೆ ಶಿಫಾರಸ್ಸಾಗಿ ರಾಜಣ್ಣ ಕಳಿಸಿ ರಾಘುನ ಕೃಪೆಗೆ ಪಾತ್ರನಾಗಿರುವುದು ನಾಚಿಕೆಗೇಡು! ಇದು ಅರಣ್ಯ ನಿಯಮಗಳು 1969ರ ನಿಯಮ 12ರ ಸ್ಪಷ್ಟ ಉಲ್ಲಂಘನೆ.

ರಾಜಣ್ಣ ತೀರ್ಪಿನ ಆಧಾರದಲ್ಲಿ ಸರ್ಕಾರ ಹೊರಡಿಸಿರುವ ಹೆಚ್ಚುವರಿ ಗೋಮಾಳ ಅಧಿಸೂಚನೆ ನಿಯಮಬಾಹಿರ. ಇದು ರದ್ದುಪಡಿಸಲು ಎಲ್ಲಾ ಅರ್ಹತೆಯಿರುವ ಎಡವಟ್ಟು ಅಧಿಸೂಚನೆ. ಹೊಸ ಅಧಿಸೂಚನೆ ಕರಡು ಪ್ರತಿ ನಿಯಮದಂತೆ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಸಲ್ಲಿಕೆಯಾಗಬೇಕು. ಆದರೆ ಇದು ಕರ್ನಾಟಕ ಶಾಸನಸಭೆ ಅಂಗೀಕರಿಸಿದ ನಿಯಮಕ್ಕೆ ಬಾಹಿರವಾದ ಅಧಿಸೂಚನೆ. ಇಷ್ಟೆಲ್ಲ ಅವಾಂತರ-ಅಕ್ರಮದ ನಂತರ ರಾಮಚಂದ್ರಾಪುರ ಮಠದ ಒತ್ತುವರಿ ಪ್ರಕರಣ ದಕ್ಷ-ಕಾನೂನುನಿಷ್ಠ ಎಸಿಎಫ್ ಅಲ್ವೀನ್‌ರ ನ್ಯಾಯಾಲಯಕ್ಕೆ ಬಂದು ನಿಲ್ಲುತ್ತದೆ. ಆಗ ಮಠ ಮಾಫಿಯಾ ಅಧಿಕಾರಿಗಳನ್ನು ಹೆಜ್ಜೆ-ಹೆಜ್ಜೆಗೆ ದಿಕ್ಕು ತಪ್ಪಿಸಿ ಅಮೂಲ್ಯ ಅರಣ್ಯ ಭೂಮಿ ಕಾನೂನುಬಾಹಿರವಾಗಿ ಸ್ವಾಧೀನ ಪಡಿಸಿಕೊಂಡು ಸಾಮ್ರಾಜ್ಯ ಸ್ಥಾಪಿಸಿರುವ ಕರ್ಮಕಾಂಡ ಬಹಿರಂಗವಾಗಿದೆ!

ಅಲ್ವೀನ್‌ಗೆ ಎದುರಾದ ಮೂಲಪ್ರಶ್ನೆ ರಾಘುನ ಮಠ ಮಹಾನುಭಾವರು ಅತಿಕ್ರಮಣ ಮಾಡಿಕೊಂಡಿರುವ ಪ್ರದೇಶ ಅರಣ್ಯ ಭೂಮಿಯಾ? ಗೋಮಾಳವಾ? ಕಂದಾಯ ಭೂಮಿಯಾ? ಎಂಬುದಾಗಿತ್ತು. ಹೊಸನಗರದ ಆರ್‌ಎಫ್‌ಓ ಎಚ್.ಎಸ್. ಪ್ರಕಾಶ್, ಡಿಆರ್‌ಎಫ್‌ಓ ಹನುಮಂತಪ್ಪ ಮತ್ತು ಅರಣ್ಯ ರಕ್ಷಕ ಸುಬ್ಬು ಸೇರಿ ರಾಮಚಂದ್ರಾಪುರ ಮಠದವರು 19 ಎಕರೆ ಪ್ರದೇಶಕ್ಕೆ ಅನಧಿಕೃತವಾಗಿ ಸ್ವಾಧೀನದಲ್ಲಿಟ್ಟುಕೊಂಡು ಬೇಲಿ ಹಾಕಿರುವುದು ಪತ್ತೆ ಹಚ್ಚಿ [illegible] ಈ ಪರಿಸ್ಥಿತಿಯಂತೆ ಮಠದ ಕೃತ್ಯ ಕರ್ನಾಟಕ ಅರಣ್ಯ ಕಾಯ್ದೆ, ಕೇಂದ್ರದ ಅರಣ್ಯ ಸಂರಕ್ಷಣಾ ಕಾಯ್ದೆ ಮತ್ತು ಸರ್ವೋಚ್ಚ ನ್ಯಾಯಾಲಯದ ಆದೇಶದ ಉಲ್ಲಂಘನೆ ಎಂಬುದು ಎಸಿಎಫ್ ಸಾಹೇಬರಿಗೆ ಮನದಟ್ಟಾಗುತ್ತದೆ. ಜತೆಗೆ ಆರ್‌ಎಫ್‌ಓ ಕೂಡ ಈ ಅಕ್ರಮದ ತನಿಖೆ (ಕೋರ್ಟ್) ನಡೆಸುವಂತೆ ಕೋರುತ್ತಾರೆ.

ಹೊಸನಗರಕ್ಕೆ ಬಂದ ಎಸಿಎಫ್‌ಗಳೆಲ್ಲ ರಾಘುನ ಕಾವಿ ಕರಾಮತ್ತಿಗೆ ಹೆದರಿ ಹೆದರಿಯೇ ಆತನ ಒತ್ತುವರಿ ಪ್ರಕರಣದ ವಿಚಾರಣೆ ಮಾಡದೇ ದಿನ ಕಳೆದು ಹೋಗಿದ್ದರು. ಆದರೆ ತಾನು ಪಡೆಯುವ ಸಂಬಳಕ್ಕೆ, ತೊಡುವ ಯೂನಿಫಾರ್ಮಿಗೆ ಎಂದೂ ದ್ರೋಹ ಮಾಡದ ನಿಯತ್ತಿನ ಅಧಿಕಾರಿ ಅಲ್ವೀನ್ ರಾಘುನ ಕರ್ಮಕಾಂಡದ ನಿಷ್ಪಕ್ಷಪಾತ ತನಿಖೆ ನಡೆಸುತ್ತಾರೆ. ಆತ 1991ರಲ್ಲಿ ನಡೆದ ನಡಾವಳಿ; ಅದಕ್ಕೂ ಹಿಂದೆ ರಾಮಚಂದ್ರಾಪುರದ ಸರ್ವೆ ನಂಬರ್ 7ರ ಜಾಗದ 19 ಗುಂಟೆ ಬಿಟ್ಟು ಉಳಿದದ್ದು ಮೀಸಲು ಅರಣ್ಯವಾಗಿದ್ದು, ಆ ನಂತರ ರಾಜಣ್ಣ ಎಂಬ ರಗಳೆ ರಾಜ ಮಠದ ಪರವಾಗಿ ನಡಾವಳಿ ನಡೆಸಿ ಕಾನೂನು ಉಲ್ಲಂಘಿಸಿದ್ದು ಮತ್ತು ಸರ್ಕಾರ ನಿಯಮಾವಳಿಯಂತೆ ಜಿಲ್ಲಾಧಿಕಾರಿಯಿಂದ ಬಂದ ಪ್ರಸ್ತಾವನೆಯನ್ನು ಅಧಿಸೂಚನೆಯಾಗಿ ಹೊರಡಿಸಿ ರಾಘು ಪಟಾಲಮ್‌ಗೆ ಸರ್ಕಾರಿ ಭೂಮಿ ಬಳುವಳಿಯಾಗಿ ಬಿಟ್ಟದ್ದೆಲ್ಲಾ..... ಒಂದೊಂದಾಗಿ ನಿಯಮ-ಕಾನೂನು ಕೋಟ್ ಮಾಡಿ ಬಯಲಿಗೆಳೆದಿದ್ದಾರೆ.


ಕಳ್ಳನಿಗೆ ದಂಡ

ಎಸಿಎಫ್ ಅಲ್ವೀನ್ ರಾಮಚಂದ್ರಾಪುರ ಮಠದವರು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿರುವ 19 ಎಕರೆ ಪ್ರದೇಶದಿಂದ ಹೊರಹೋಗುವಂತೆ ಆದೇಶ ಮಾಡಿದ್ದಾರೆ. 25.07.2015ರಂದು ಮಾಡಿರುವ ಆದೇಶದಲ್ಲಿ 30 ದಿನದ ಒಳಗಾಗಿ ಸರ್ಕಾರಿ ಜಾಗ ತೆರವು ಮಾಡದಿದ್ದರೆ ಅಲ್ಲಿರುವ ಆಸ್ತಿ ಮುಟ್ಟುಗೋಲು ಹಾಕುವುದಾಗಿ ಹೇಳಿದ್ದಾರೆ. ಅನಧಿಕೃತ ಸ್ವಾಧೀನತೆಯಿಂದ ಪರಿಸರಕ್ಕೆ ಆಗಿರುವ ಹಾನಿಗಾಗಿ ಮಠದ ಮಹಾಮಹಿಮರಿಗೆ ಬರೋಬ್ಬರಿ 62,80,746 ರೂ. ದಂಡ ಹಾಕಿದ್ದಾರೆ ನಿಷ್ಠಾವಂತ ಅರಣ್ಯ ಅಧಿಕಾರಿ ಅಲ್ವೀನ್. ಈ ನಿಯತ್ತಿಗಾಗಿ ಆತ ಈಗ ಇಲಾಖಾಧಿಕಾರಿಗಳ ಮತ್ತು ಮಠ ಮಾಫಿಯಾದ ಕೆಂಗಣ್ಣಿಗೂ ಗುರಿಯಾಗಿದ್ದಾರೆ. ಅಲ್ವೀನ್ ಕಾನೂನುಬದ್ಧವಾಗೇ ಶೋಷಿತರಿಗೆ ನೆರವಾಗುವ ಅಧಿಕಾರಿ. ಆ ಕಾರಣಕ್ಕೆ ಆತ ಅಧಿಕಾರಸ್ಥರ ಟಾರ್ಗೆಟ್ ಆಗುತ್ತಿದ್ದಾರೆ.


ಸರ್ಕಾರದ ಅರಣ್ಯ ಆಸ್ತಿ ಉಳಿಸಲು ಧೈರ್ಯವಾಗಿ ಪ್ರಾಮಾಣಿಕ ಕೆಲಸ ಮಾಡಿರುವ ಎಸಿಎಫ್ ಅಲ್ವೀನ್‌ಗೆ ತೊಂದರೆಯಾಗದಂತೆ ನೋಡಿಕೊಳ್ಳುವ ಹೊಣೆ ಅರಣ್ಯ ಮಂತ್ರಿ ರಮಾನಾಥ ರೈ ಮೇಲಿದೆ. ರಾಘು ಗ್ಯಾಂಗ್ ಮಾಡಿರುವ ಅತಿಕ್ರಮಣ ಕ್ಷಮೆಯೇ ಇಲ್ಲದ ಪ್ರಮಾದ. ಯಾವ ನ್ಯಾಯಾಲಯಕ್ಕೆ ಹೋದರೂ ಬಚಾವಾಗದ ಘನಘೋರ ಕಾನೂನು ಉಲ್ಲಂಘನೆ. ಅರಣ್ಯ ಕಾನೂನು ಅಷ್ಟು ಬಿಗಿಯಾಗಿದ್ದರೂ ಹಿಂಬಾಗಿಲ ಕಸರತ್ತಿನ ಶೂರರಾದ ಮಠ ಮಾಫಿಯಾ ಮಂದಿ ಸರ್ಕಾರವನ್ನೇ ಮಣಿಸುವ ಸ್ಕೆಚ್‌ನಲ್ಲಿದ್ದಾರೆ.


ಅರಣ್ಯ ಮಂತ್ರಿ ರೈ ಸಾಹೇಬರು ಈಗಲಾದರೂ ನಿದ್ದೆಯಿಂದೆದ್ದು ಕುಳಿತುಕೊಳ್ಳುವರಾ? ಸರ್ಕಾರದ [illegible] ಆಸ್ತಿ ಉಳಿಸುವರಾ? ಮುಂದಿನ ಪೀಳಿಗೆಗೆ ಬೇಕಾದ ಈ [illegible] ಭೂಪನಾದ ಕಾವಿ ಕೋಳನೊಬ್ಬನ ಪಾಲಾಗದಂತೆ ತಡೆಯುವ ನೈತಿಕಪಜ್ಞೆ ಮಂತ್ರಿ ರೈಗೆ ಇದೆಯಾ? ರಾಘುನ ಬ್ರಾಂಡ್‌ಲೂಟಿಯಲ್ಲಿ ಶಾಮೀಲಾಗಿರುವ ಅರಣ್ಯ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಪಾಠ ಕಲಿಸುವ [illegible]?

■ ಸುಯೋಧನ



ಹೊಸನಗರದ ರಾಮಚಂದ್ರಾಪುರ ಗ್ರಾಮದ ಸರ್ವೆ ನಂಬರ್ 7ರ ಮೀಸಲು ಅರಣ್ಯ ಪ್ರದೇಶದಲ್ಲಿ ನಿರ್ಮಿಸಿರುವ ಗುರುಕುಲ





ಬಿಬಿಎಂಪಿ ಕಾಳಗ

ದಿನೇಶ್ ಕುತಂತ್ರಕ್ಕೆ ಮಲ್ಲೇಶ್ ಬಲಿ!

ಮನುಷ್ಯ ಎತ್ತರಕ್ಕೇರಿದಷ್ಟೂ ಸಣ್ಣ ಬುದ್ಧಿ ಬಿಡುತ್ತಾನಂತೆ. ಆದರೆ ಆಹಾರ ಮಂತ್ರಿ ದಿನೇಶ್ ಗುಂಡೂರಾವ್ ವಿಷಯದಲ್ಲಿದು ಉಲ್ಟಾ. ಗಾಂಧಿನಗರದಿಂದ ಗೆದ್ದು ಶಾಸಕರಾಗಿ ಸಿದ್ದು ಸಂಪುಟದಲ್ಲಿ ಕ್ಯಾಬಿನೆಟ್ ಮಂತ್ರಿಯಾಗಿದ್ದೂ ತನಗಾಗದ ಪ್ರತಿಯೊಬ್ಬರನ್ನೂ ನಿರ್ನಾಮ ಮಾಡುವ ಸಣ್ಣ ಬುದ್ಧಿ.

ಇದಕ್ಕೊಂದು ಲೇಟೆಸ್ಟ್ ಉದಾಹರಣೆ ಅಂತಿದ್ದರೆ ಅದು ಸುಭಾಷ್‌ನಗರದ ಕಾಂಗ್ರೆಸ್ ಕೌನ್ಸಿಲರ್ ಮಲ್ಲೇಶ್. ಇಡೀ ಬೆಂಗಳೂರಿಗೇ ಒಂದು ನಿಯಮಾವಳಿಯಾದರೆ ಗಾಂಧಿನಗರ ವ್ಯಾಪ್ತಿಯ ಸುಭಾಷ್‌ನಗರದ ಮಾಜಿ ಕೌನ್ಸಿಲರ್ ಟಿ. ಮಲ್ಲೇಶ್‌ರದ್ದು ದುರಂತ ಕತೆ. ಕಳೆದ ಪಾಲಿಕೆ ಚುನಾವಣೆಯಲ್ಲಿ ಸುಭಾಷ್‌ನಗರ ವಾರ್ಡಿನಿಂದ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿ ಗೆದ್ದ ಮಲ್ಲೇಶ್ ಬೆಂಗಳೂರು ಕಂಡ ಅತ್ಯಂತ ದಲಿತಪರ ಮತ್ತು ಪ್ರಾಮಾಣಿಕ ಪಾಲಿಕೆ ಸದಸ್ಯರೆಂಬುದರಲ್ಲಿ ಎರಡು ಮಾತಿಲ್ಲ. ಈ ಹಿಂದೆ ಕಾಂಗ್ರೆಸ್ ಪರಿಶಿಷ್ಟ ಜಾತಿ ಘಟಕಕ್ಕೆ ರಾಜ್ಯಾಧ್ಯಕ್ಷರಾಗಿ ದುಡಿದವರು. ರಾಷ್ಟ್ರನಾಯಕ ಹರಿಪ್ರಸಾದ್ ಮತ್ತು ಖರ್ಗೆ ಅನುಯಾಯಿ ಕೂಡ.

ಆದರೆ ದಿನೇಶ್ ಸಾಹೇಬರಿಗೆ ತನ್ನ ಪಕ್ಕಾ ಚೇಲಾ ಗೋವಿಂದರಾಜುವನ್ನು ಸುಭಾಷ್‌ನಗರದಿಂದ ಗೆಲ್ಲಿಸುವ ದುರಾಸೆ. ಏನೇ ಕುತಂತ್ರಗೈದರೂ ಮಲ್ಲೇಶ್‌ಗೆ ಕಾಂಗ್ರೆಸ್ ಟಿಕೆಟ್ ತಪ್ಪಿಸಲಾಗಲಿಲ್ಲ. ಹಾಗಂತ ಭಟ್ಟಂಗಿ ಗೋವಿಂದರಾಜು ಕೈಯನ್ನೂ ಬಿಡಲಿಲ್ಲ. ಮಲ್ಲೇಶ್ ಅಧಿಕೃತ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದರೂ ಚೇಲಾ ಗೋವಿಂದರಾಜುವನ್ನು ಪಕ್ಷೇತರನಾಗೇ ಗೆಲ್ಲಿಸಲು ಏನೇನು ಬೇಕೋ ಎಲ್ಲವನ್ನೂ ಪಕ್ಷದ ಬೆನ್ನಿಗಿರಿದೇ ಮಾಡುತ್ತಾ ಬಂದರು. ಕೋಟಿಕೋಟಿ ದುಡ್ಡು, ತನ್ನ ಪ್ರಭಾವ, ಬೆಂಬಲ ಎಲ್ಲ ಹಾಕಿಯೂ ಅಧಿಕೃತ ಕಾಂಗ್ರೆಸ್ ಅಭ್ಯರ್ಥಿ ಮಲ್ಲೇಶ್‌ರನ್ನು ದಿನೇಶ್ ಕೈಯಿಂದ ಸೋಲಿಸಲಾಗಲೇ ಇಲ್ಲ.

300 ಮತಗಳ ಅಂತರದಿಂದ ಮಲ್ಲೇಶ್ ಗೆದ್ದರು. ಅಷ್ಟೆಲ್ಲಾ ರೊಕ್ಕ, ಪ್ರಭಾವ ಬಳಸಿಯೂ ಗೋವಿಂದರಾಜು ಸೋತುಬಿಟ್ಟರು. ಗೆದ್ದ ಮಲ್ಲೇಶ್ ಕೈಕಟ್ಟಿ ಕೂರಲಿಲ್ಲ.



ಸುಭಾಷ್‌ನಗರದ ಮನೆಮನೆಗೂ ಕುಡಿಯುವ ನೀರು ಕಲ್ಪಿಸಿದ್ದು, ತಾವೇ ನಿಂತು ರಸ್ತೆ ಕಸ ಗುಡಿಸಿದ್ದು, ವಾರ್ಡಿನ ಜನಕ್ಕೊಂದು ಕೃಷ್ಣಾ ಫ್ಲೋರ್ ಮಿಲ್ ಖದೀಮರು ಕಬಳಿಸಿದ್ದ ಪಾಲಿಕೆ ಭೂಮಿಯನ್ನು ರಕ್ಷಿಸಿದ್ದು ಮಲ್ಲೇಶ್ ಹೋರಾಟದ ಕೆಲ ಸ್ಯಾಂಪಲ್ಲುಗಳಷ್ಟೇ.

ಕೇವಲ ವಾರ್ಡಿಗೆ ಮಾತ್ರವೇ ಸೀಮಿತಗೊಳ್ಳದೆ ಮಲ್ಲೇಶ್ ಪಾಲಿಕೆಯ ಭ್ರಷ್ಟಾಚಾರದ ವಿರುದ್ಧ ಹೋರಾಟಕ್ಕಿಳಿದರು. ಪಾಲಿಕೆಯ ಕೌನ್ಸಿಲ್ ಸಭೆಯಲ್ಲಿ ಮಲ್ಲೇಶ್ ಪ್ರತಿಭಟನೆ ಕಂಡೇ ಬಿಜೆಪಿಯ ಮೇಯರ್‌ಗಳು ನಡುಗುವಂತಾಯ್ತು. ಹೀಗಾಗಿ ತನ್ನನ್ನೇ ಪಾಲಿಕೆಯ ವಿರೋಧ ಪಕ್ಷದ ನಾಯಕನನ್ನಾಗಿಸಬೇಕೆಂಬ ಮಲ್ಲೇಶ್ ಬೇಡಿಕೆಗೂ ಅರ್ಥವಿತ್ತು. ಕಾಂಗ್ರೆಸ್ ನಾಯಕರಾದ ಖರ್ಗೆ, ಕೆ.ಎಚ್. ಮುನಿಯಪ್ಪರಂಥ ಹಿರಿಯರೂ ಮಲ್ಲೇಶ್ ವಿರೋಧಿ ನಾಯಕನ ಹುದ್ದೆಗೆ ಮಿಕ್ಕೆಲ್ಲರಿಗಿಂತಲೂ ಸಮರ್ಥ ಎಂದೇ ಹಠಕ್ಕೆ ಬಿದ್ದಾಗಲೂ ದಿನೇಶ್‌ಗದು ಇಷ್ಟವಿಲ್ಲ.

ಮಲ್ಲೇಶ್ ಬೆಳೆದರೆ ಮುಂದೊಮ್ಮೆ ಎಲ್ಲಿ ತನ್ನ ಶಾ ಸ್ಥಾನಕ್ಕೇ ಸ್ಪರ್ಧೆ ಒಡ್ಡುತ್ತಾರೋ ಎಂಬ ಹೊಟ್ಟೆಕಿಚ್ಚು ದಿನೇಶ್ ಗುಂಡೂರಾವ್ ಕುತಂತ್ರದಿಂದಲೇ ತನಗೆ 'ವಿರೋಧಿ ಪಟ್ಟ' ತಪ್ಪಿತೋ ಮಲ್ಲೇಶ್ ಮಂತ್ರಿ ವಿ ಗರಮ್ಮಾದರು. ಜಾತಿ ಕಾರಣದಿಂದ ದಿನೇಶ್ ತನ್ನ ವಿ ದೌರ್ಜನ್ಯವೆಸಗಿದ್ದಾರೆಂದು ಅಲಸೂರು ಗೇಟ್ ಪೊಲೀ ಠಾಣೆಗೆ ದೂರನ್ನೂ ಕೊಟ್ಟರು. ಹಾಗಿದ್ದೂ ಪಕ್ಷದ ಹಿತಾಸ ಮಣಿದು ಮಲ್ಲೇಶ್ ದಿನೇಶ್ ಆಣತಿಗೆ ತಲೆಬ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ರಿಜ್ವಾ ಪರ ದುಡಿದು ಗಾಂಧಿನಗರದ ಬೇರೆಲ್ಲಾ ವಾರ್ಡ್ ಗಳಿಗಿಂತಲೂ ಕಾಂಗ್ರೆಸ್‌ಗೆ ಹೆಚ್ಚು ಮತ ಕೊಡಿಸಿದ್ದರು

ಎತ್ತಿಂದೆತ್ತ ಲೆಕ್ಕ ಹಾಕಿದರೂ ಈ ಬಾರಿಯ ಪಾ ಚುನಾವಣೆಯಲ್ಲಿ ಮಲ್ಲೇಶ್‌ಗೆ ಕಾಂಗ್ರೆಸ್ ಟಿಕೆ ಕಾಯ್ದಿರಿಸಲೇಬೇಕಿತ್ತಲ್ಲವೆ?

ಆದರೆ ಮಲ್ಲೇಶ್‌ಗೆ ಕೈಕೊಟ್ಟು ಬಿ ಫಾರ್ಮ್ ಕೊಡಿಸಿದ್ದು 62 ರ ಇಳಿವಯಸ್ಸಿನ ವಯೋವೃದ್ಧ ಗೋವಿ ರಾಜುಗೆ. ವಿಪರೀತ ಕಾಯಿಲೆ. ಎದ್ದರೆ ಕೂರಲಾಗ ಕುಂತರೆ ನಿಲ್ಲಲಾಗದಂಥ ಅನಾರೋಗ್ಯ ಗೋವಿಂದರಾ ವಿನದ್ದು. ಜನರ ಜೊತೆ ಬೆರೆಯುವುದೇ ಕಮ್ಮಿ. ಯಾ ಕಷ್ಟ ಹೇಳಿಕೊಂಡರೂ ಚಿಕ್ಕಾಸು ಬಿಚ್ಚದವರಲ್ಲ. ಯುವ ನಾಯಕ ಮಲ್ಲೇಶ್ ಮತ್ತವರ ಬಿಸಿರಕ್ತದ ಬೆಂಬಲಿ ಮುಂದೆ ಗೋವಿಂದರಾಜು ತಾನೇ ಏನಂಥ ಹೆಣಗ ಸಾಧ್ಯ? ಕೊನೆಗೆ ದಿನೇಶ್ ಸೇಡೇ ಗೆದ್ದಿದೆ. ಪಕ್ಷದಿಂದ ಗ ಮಲ್ಲೇಶ್‌ಗೆ ಕೈಕೊಟ್ಟು ಪಕ್ಷದ ಅಧಿಕೃತ ಅಭ್ಯರ್ಥಿ ವಿರು ಸ್ಪರ್ಧಿಸಿ ದ್ರೋಹ ಬಗೆದಿದ್ದ ಗೋವಿಂದರಾಜುಗೆ ಫಾರ್ಮ್ ಕೊಡುವ ಮೂಲಕ ದಿನೇಶ್ ಪಕ್ಷಕ್ಕಿಂತಲ ತನ್ನ ಚೇಲಾಗಿರಿಗೇ ಮಾನ್ಯತೆಯೆಂಬುದನ ಅಧಿಕೃತಗೊಳಿಸಿದ್ದಾರೆ. ತಮ್ಮ ಬದುಕಿನುದ್ದಕ್ಕೂ ಕಾಂಗ್ರೆ ಬಾವುಟ ಹಿಡಿದ ಮಲ್ಲೇಶ್ ಈಗ ಸುಭಾಷ್‌ನಗರ ವಾರ್ಡಿ ಜೆಡಿಎಸ್ ಅಭ್ಯರ್ಥಿ. ಗೆದ್ದರೆ ದಿನೇಶ್ ಪಾಲಿಗೆ ಮಲ್ಲೇ ಸಿಂಹಸ್ವಪ್ನ. ಸೋತರೆ....?

■ ರಾ.ಸೋ

ದುರಂತ ನಾಯಕ ನರೇಂದ್ರ ಬಾಬುಗೆ ಮಾಡು ಇಲ್ಲವೇ ಮಡಿ

ಬೆಂಗಳೂರು ಕಂಡ ಪ್ರಜ್ಞಾವಂತ ರಾಜಕಾರಣಿಗಳ ಪೈಕಿ ನೆ.ಲ. ನರೇಂದ್ರಬಾಬು ಹೋರಾಟದ ಮೂಲಕವೇ ಬೆಳೆದವರು. ಒಂದಲ್ಲ ಮೂರ್‍ನಾಲ್ಕು ಬಾರಿ ಪಾಲಿಕೆ ಸದಸ್ಯರಾಗಿ ಮಹಾಲಕ್ಷ್ಮಿ ಲೇಔಟ್‌ಗೆ ಶಾಸಕರೂ ಆಗಿ ಕಳೆದ ಬಾರಿಯೇನಾದರೂ ಗೆದ್ದಿದ್ದರೆ ಈ ಹೊತ್ತಿಗೆ ಮಂತ್ರಿಯಾಗಿರಬೇಕಿತ್ತು. ಅದೇನು ದೌರ್ಭಾಗ್ಯವೋ ಗೊತ್ತಿಲ್ಲ. ಕೆಡಕೆಂಬುದು ಸಜ್ಜನರನ್ನೇ ಹುಡುಹುಡುಕಿ ಪರೀಕ್ಷಿಸುತ್ತದೆಯಂತೆ.



ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ಕಾಮಾಕ್ಷಿಪಾಳ್ಯದ ಗೋಪಾಲಯ್ಯ ವಿರುದ್ಧ ಬಾಬು ಕೂದಲೆಳೆಯಿಂದ ಸೋತಿದ್ದೇ ಬಂತು. ಸೋಲುವುದಕ್ಕೂ ಮುನ್ನ ಮತ್ತೊಂದು ಅವಘಡವೆಂಬಂತೆ ಅವರ ತಮ್ಮ ನೆ.ಲ. ರವಿಶಂಕರ್ ನಾಗಪುರ ವಾರ್ಡಿಗೆ ನಿಂತು ಸೋತುಬಿಟ್ಟ. ಅಲ್ಲಿಂದಾಚೆಗೆ ನರೇಂದ್ರ ಬಾಬು ಪಾಲಿಗೆ ದುಃಖ, ನೋವು, ಕಣ್ಣೀರೇ ಶಾಶ್ವತವೆಂಬಂತಾಯಿತು. ಬಾಬು ತಾಕತ್ತಿನ ಆಧಾರಸ್ತಂಭದಂತಿದ್ದ ತಮ್ಮ ರವಿಶಂಕರ್ ಹೃದಯಾಘಾತದ ದುರ್ಮರಣ ಕಂಡ.

ಸಾಲುಸಾಲು ಸೋಲಾದರೂ ಬಾಬು ಧೃತಿಗೆಡುತ್ತಿರಲಿಲ್ಲ. ಆದರೆ ತಮ್ಮ ರವಿಯ ದುರಂತವನ್ನು ಬಾಬು ಸರಿದೂಗಿಸಲು ಸಾಧ್ಯವೇ ಇರಲಿಲ್ಲ. ಪಾಲಿಕೆ ಚುನಾವಣೆಯಲ್ಲಿ ನಾಗಪುರ ವಾರ್ಡಿಗೆ ನಿಂತು ಬಿಜೆಪಿಯ ಹರೀಶ್ ಎದುರು ಕೂದಲೆಳೆಯಿಂದ ಸೋತ ರವಿಗೆ ಮೊದಲು ತನ್ನ ಸೋಲು ಆನಂತರ ಅಣ್ಣನ ಸೋಲಿನ ಆಘಾತವನ್ನು ಭರಿಸಲಾಗಲೇ ಇಲ್ಲ. ಬಿಜೆಪಿ ಮತ್ತು ಜೆಡಿಎಸ್ ಒಳಗಿಂದೊಳಗೆ ಕೈಜೋಡಿಸಿದ ಫಲವಾಗಿ ತಮ್ಮನೂ ಸೋತ ಅಣ್ಣನಿಗೂ ಸೋಲಾಯಿತು.

ಹಾಗೆಂದು ನರೇಂದ್ರ ಬಾಬು ಧೃತಿಗೆಡಲಿಲ್ಲ. ಕಾಂಗ್ರೆಸ್ ಅಧಿಕಾರಕ್ಕೆ ಬಂದಿದ್ದರ ಅವಕಾಶ ಬಳಸಿಕೊಂಡು ಜನಪರ ಕೆಲಸಗಳನ್ನು ಮಾಡುತ್ತಲೇ ಬಂದರು. ಬೆಂಗಳೂರಿನ ಸಮಸ್ಯೆಗಳಿಗೂ ಬೀದಿಗಿಳಿಯುತ್ತಲೇ ಹೋದರು. ಅದೀಗ ನಾಗಪುರ ವಾರ್ಡಿನಲ್ಲಿ ನಿಚ್ಚಳವಾಗಿ ಗೋಚರಿಸುತ್ತಿದೆ. ಬಿಜೆಪಿ ಅಭ್ಯರ್ಥಿ ಹರೀಶ್ ಉಪಮೇಯರ್ ಹುದ್ದೆಗೇರಿದರಾದರೂ ನಾಗಪುರ ವಾರ್ಡಿನಲ್ಲಿ ಬಾಬು ತನ್ನ ವರ್ಚಸ್ಸನ್ನು ಕಳೆದುಕೊಳ್ಳಲಿಲ್ಲ. ಜೆಡಿಎಸ್‌ನಿಂದ ಭದ್ರೇಗೌಡ ನಿಂತಿದ್ದಾರಾದರೂ ಕೊನೆಗಳಿಗೆಯಲ್ಲಿ ಅವರು ಡಮ್ಮಿ ಆಗಲಾರರೆಂಬುದಕ್ಕೆ ಯಾವ ಗ್ಯಾರಂಟಿಯೂ ಇಲ್ಲ.

ಹೀಗಾಗಿ ಈ ಬಾರಿ ನಾಗಪುರ ವಾರ್ಡಿಗೆ ನರೇಂದ್ರ ಬಾಬು ಬಿಟ್ಟರೆ ಜನಕ್ಕೆ ಬೇರೆ ಆಯ್ಕೆಯೇ ಇದ್ದಂತಿಲ್ಲ. ಒಬ್ಬ ತಮ್ಮನನ್ನು ಕಳಕೊಂಡ ನೋವಲ್ಲೇ ಬಾಬು ತನ್ನ ಕೊನೇ ತಮ್ಮ ಮಹೇಶ್‌ನನ್ನು ಕಣಕ್ಕಿಳಿಸಿದ್ದಾರೆ. ಜೆಡಿಎಸ್ ಮತ್ತು ಬಿಜೆಪಿ ಅಭ್ಯರ್ಥಿಗಳಿಗೆ ಹೋಲಿಸಿದರೆ ಮಹೇಶ್ ಸಭ್ಯ ಮತ್ತು ಪ್ರಜ್ಞಾವಂತ. ಸಣ್ಣದೊಂದು ಕಳಂಕವೂ ಬೆನ್ನಿಗಿಲ್ಲ. ಸಾಲು ಸಾಲು ಸೋಲು, ತಮ್ಮನ ದುರ್ಮರಣದ ದುಃಖ ಹೊತ್ತೇ ಬಾಬು ಮತದಾರರ ಮನೆ ಬಾಗಿಲು ತಟ್ಟುತ್ತಿದ್ದಾರೆ.



ಶಾಸಕನಾಗಿ ಗೆಲ್ಲದ ನಷ್ಟ ಚೂರಾದರೂ ಕಮ್ಮಿಯಾಗಬೇಕೆಂದರೆ ತಮ್ಮನನ್ನು ಗೆಲ್ಲಿಸಲೇಬೇಕು. ನರೇಂದ್ರಬಾಬು ಥರದ ಪ್ರಜ್ಞಾವಂತರನ್ನು ಗೆಲ್ಲಿಸದೇ ಹೋದರೆ ಏನಾಗುತ್ತದೆ ಎಂಬುದನ್ನು ನಾಗಪುರದ ಜನ ಈಗಾಗಲೇ ಅನುಭವಿಸಿದ್ದಾಗಿದೆ. ಸದ್ಯ ಬಾಬು ಪರ ನಾಗಪುರ ವಾರ್ಡಿನ ಜನರ ಸಹಾನುಭೂತಿಯ ಅಲೆಗೆ ತಮ್ಮ ರವಿಶಂಕರ್‌ನ ಅಕಾಲಮರಣದ ದುರಂತ ಬಿಟ್ಟರೆ ಬೇರೊಂದು ಕಾರಣವಿರಲು ಸಾಧ್ಯವೆ?

ಸೋತ ಕೊರಗಲ್ಲೇ ಎದೆಯೊಡೆದು ಸತ್ತ ಬಾಬು ತಮ್ಮನ ಆತ್ಮಕ್ಕೆ ಮತ್ತೊಬ್ಬನ ತಮ್ಮನ ಗೆಲುವುದಾದರೂ ಶಾಂತಿ ಕಲ್ಪಿಸುತ್ತಾ?

ಕದಬಹಳ್ಳಿ ಸಂತೆ ಕತೆ



19 ಆಗಸ್ಟ್, 2015ರ ಸಂಚಿಕೆಯಲ್ಲಿ ಪ್ರಕಟಗೊಂಡಿದ್ದ ಬಿ.ಚಂದ್ರೇಗೌಡ "ಕದಬಹಳ್ಳಿ ಸಂತೆಯನ್ನು ನುಂಗಿದ ಚತುಷ್ಪಥ" ಲೇಖನ ಮನತಟ್ಟುವಂತಿ 'ಅಭಿವೃದ್ಧಿ ಎಂದರೆ ನಮ್ಮ ಭೂಮಿ ಬದುಕಿನ ಸರ್ವನಾಶವೆಂದು ಗೊ ಇರಲಿಲ್ಲ' ಎಂಬ ಲೇಖನದ ಕೊನೆಯ ಸಾಲು ನಿಜಕ್ಕೂ ಅಭಿವೃದ್ಧಿ ಎ ಅಂಧಯುಗವನ್ನು ಅಣಕಿಸುವಂತಿದೆ. ಸಂತೆಯೆನ್ನುವುದು ಕೇವಲ ವ್ಯಾಪಾ ಕೊಡು ಕೊಳ್ಳುವಿಕೆಯ ಸ್ಥಳವಲ್ಲ, ಅದು ಅಲ್ಲಿನ ಸ್ಥಳೀಯ ಸಂಸ್ಕೃತಿ, ಸಂಪ್ರದಾಯ ಪ್ರತಿಬಿಂಬವಾಗಿರುತ್ತದೆ. ಸಂತೆಗೆ ಬರುವ ವೈವಿಧ್ಯಮಯ ಜನರು, ನಡೆಯುವ ವಿವಿಧ ವ್ಯಾಪಾರಗಳು ಮನುಷ್ಯನ ಮನೋವ್ಯಾಪಾರ ಪ್ರತಿರೂಪವಾಗಿರುತ್ತವೆ. ಕದಬಹಳ್ಳಿಯಂತಹ ಅದೆಷ್ಟೋ ಜೀವಕಳೆ ಇರು ಸಂತೆ ಸ್ಥಳಗಳೆಲ್ಲವೂ ಅಭಿವೃದ್ಧಿ ಹೆಸರಿನಲ್ಲಿ ಮಾಯವಾಗುತ್ತಿವೆ. ಹಲವಾ ಬಗೆಯ ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಶೋಧನೆಗಳಿಗೆ ಭರಪೂ ಮಾಹಿತಿ ಒದಗಿಸಬಲ್ಲ ಇಂತಹ ಮಾರುಕಟ್ಟೆಗಳು ಬೃಹತ್ ಅರ್ಥ ವ್ಯವಸ್ಥೆಯ ಮಾಯಾಲೋಕದ ಬಿಗ್ ಬಜಾರ್‌ಗಳ, ಶಾಪಿಂಗ್ ಮಾಲ್‌ಗಳ ಎದುರಿ ಅಸ್ತಿತ್ವಕ್ಕಾಗಿ ಹೋರಾಡುವ ದೈನೇಸಿ ಪರಿಸ್ಥಿತಿಗೆ ಬಂದಿರುವುದು ದ ದುರಂತ.

ಕದಬಹಳ್ಳಿಯ ಸಂತೆಯಿಂದಲೇ ತಮ್ಮ ಹೊಟ್ಟೆ ಹೊರೆದುಕೊಳ್ಳು ಅನೇಕ ಕುಟುಂಬಗಳ ಇವತ್ತಿನ ಪರಿಸ್ಥಿತಿ ಬಹುಶಃ ತುಂಬಾ ಹದಗೆಟ್ಟಿರುತ್ತ ಸಂತೆಯ ವಿವರಗಳನ್ನು ಕಣ್ಣಿಗೆ ಕಟ್ಟುವಂತೆ ಹೇಳುವ ಹಿರಿಯರು ಮ ಅದನ್ನು ನೋಡಲು ಸಾಧ್ಯವಿಲ್ಲದೇ ಕೇವಲ [illegible] ಅದಷ್ಟ ಪಡೆದಿರ [illegible]ರಿಯರು ಇಬ್ಬರೂ ಕೂಡ ಈ ಪರಿಸ್ಥಿತಿಯಲ್ಲಿ [illegible] ನಾಯಕರಂತೆ ಕಾಣುತ ಸಾಮಾಜಿಕ ಭಿನ್ನತೆಗಳ ಹೊರತಾಗಿಯೂ ವಿವಿಧ [illegible]ಸಮುದಾಯದವರ ಸಮ ಸಂಬಂಧಗಳ ಗಟ್ಟಿಗೊಳ್ಳುವಿಕೆಗೆ ವೇದಿಕೆಯಾಗಿದ್ದ ಈ ಸಂತೆ, ಇನ್ನು ಮು ಗಟ್ಟಿಯಾದ ಸಾಮಾಜಿಕ ಸಂಬಂಧಗಳೂ ಸಹ ನಿಸ್ಸಂತೇ ಮಾಯವಾಗಬಹು ಎಂದು ನುಡಿಯುವಂತಿದೆ.

ಜನರ ಮನಸ್ಸು, ಹೃದಯದಲ್ಲಿರುವ ಸೂಕ್ಷ್ಮಗಳನ್ನು ಪರಿಗಣಿಸದೇ ಕೇ ಆರ್ಥಿಕ ಅಭಿವೃದ್ಧಿಯನ್ನು ಸರ್ವಾಂಗೀಣ ಅಭಿವೃದ್ಧಿಯಂತೆ ಬಿಂಬಿಸಹೊರಟ ಕಾದಿರುವ ಅನಾಹುತಗಳಿಗೆ ಮಾಯವಾದ ಕದಬಹಳ್ಳಿ ಸಂತೆ ಒಂದು ಕಹಿ ಎಚ್ಚರಿಕೆಯ ಮುನ್ನುಡಿಯಂತಿದೆ.

- ಅರವಿಂದ ಆರ್. ಐರಣಿ, ಅಜ್ಜಂ

ಮೋದಿಗೆ ಹೊಸ ಸವಾಲು



ಇಲ್ಲಿಗೆ ನಾಲ್ಕೈದು ತಿಂಗಳ ಹಿಂದೆ ಈ ದೇಶದಲ್ಲಿ ...ದು ಪ್ರಮುಖ ವಿದ್ಯಮಾನ ನಡೆದುಹೋಯಿತು. ...ವರಿ 10ರಂದು ಹೊರಬಿದ್ದ ದೆಹಲಿ ಅಸೆಂಬ್ಲಿ ...ನಾವಣೆಯಲ್ಲಿ ಆಮ್ ಆದ್ಮಿ ಪಕ್ಷ ಮೋದಿ ಅಲೆಗೆ ...ಕ್ಕಿ ತಡೆಗೋಡೆ ಕಟ್ಟಿದ್ದಲ್ಲದೆ, ಹಿಟ್ಟುಗೇಡಿ ಕಾಂಗ್ರೆಸ್‌ನ ...ಬುಕ್ಕೆ ಮಂಗಳಾರತಿ ಮಾಡಿತ್ತು. ಈ ವಿದ್ಯಮಾನ ದೇಶದ ...ತೇಕ ಪ್ರಗತಿಪರ ಹಾಗೂ ಸಾಮಾಜಿಕ ಕಳಕಳಿಯುಳ್ಳ ...ಲ್ಲಿ ಹೊಸ ಹುರುಪು ಮೂಡಿಸಿದ್ದಂತೂ ನಿಜ. ...ರ ಅಷ್ಟರಲ್ಲಿ ಎಎಪಿ ಒಳಗಿನ ಆಂತರಿಕ ಸಂಘರ್ಷ ...ಗೆ ಬಂದು, ಈ ಅನಿವಾರ್ಯ ಆಂತರಿಕ ಸಂಘರ್ಷದಲ್ಲಿ ...ಆದ್ಮಿ ಪಕ್ಷ ಎರಡು ಹೋಳಾಗಿಹೋಗಿದ್ದು ಈಗ ...ಹಾಸ. ಈ ದುರಂತಮಯ ಬೆಳವಣಿಗೆ ಮೋದಿ ...ರಕ್ಕೆ ಹಾಗೂಹೀಗೂ ಸಮಾಧಾನ ತಂದಿತ್ತು. ಮಾಧ್ಯಮ ...ಗೂ ಒಂಥರಾ ತಿಥಿಯೂಟದ ಸಂಭ್ರಮದಂತಾಗಿತ್ತು. ...ಆದರೆ ವಿಪರ್ಯಾಸ ಹೇಗಿದೆ ನೋಡಿ. ಆಮ್ ಆದ್ಮಿ ...ದ ಒಡಕು ಮೋದಿ ಸರ್ಕಾರಕ್ಕೆ ವರದಾನವಾಗುವ ...ಬದಲು ಕಠಿಣ ಸವಾಲಾಗಿ ಪರಿಣಮಿಸಿದೆ. ತತ್ವ, ...ದ್ಧಾಂತಗಳಿಗಾಗಿ ಆಮ್ ಆದ್ಮಿ ಪಕ್ಷದಲ್ಲಿ ಸಂಘರ್ಷ ನಡೆಸಿದ ...ಕ್ಕೆ ಪಕ್ಷದಿಂದ ಹೊರತಳ್ಳಲ್ಪಟ್ಟ ನಾಯಕರಾದ ...ಯೋಗೇಂದ್ರ ಯಾದವ್, ಪ್ರಶಾಂತ್ ಭೂಷಣ್ ಮತ್ತಿತರರು ... ಹೋರಾಟವನ್ನು ಮೋದಿ ಸರ್ಕಾರದ ವಿರುದ್ಧ ...ಗಿಸಿದ್ದಾರೆ.

ಈ ವಿದ್ಯಮಾನ ಎಷ್ಟೊಂದು ಕ್ಷಿಪ್ರಗತಿಯಲ್ಲಿ ಸಂಭವಿಸಿದೆ ...ಬುದನ್ನು ಗಮನಿಸಿದರೆ ಆಶ್ಚರ್ಯವೆನಿಸುತ್ತದೆ. ...ಯೋಗೇಂದ್ರ ಮುಂತಾದ ನಾಯಕರು ಕಳೆದ ಏಪ್ರಿಲ್ ... ಅಂಬೇಡ್ಕರ್ ದಿನಾಚರಣೆಯಂದು ಹರ್ಯಾಣದ ...ಗಾಂವ್‌ನಲ್ಲಿ "ಸ್ವರಾಜ್ ಅಭಿಯಾನ್" ಎಂಬ ...ಹೊಸದೊಂದು ಚಳವಳಿಯನ್ನು ಘೋಷಿಸಿದರು. ಈ ...ನಿರೀಕ್ಷಿತ' ಬೆಳವಣಿಗೆಗಳು ದೇಶದಾದ್ಯಂತ ಸಹಸ್ರಾರು ಪ್ರಗತಿಪರರಿಗೆ ಆಘಾತ, ನಿರಾಶೆ ಉಂಟುಮಾಡಿದ್ದು ಸುಳ್ಳಲ್ಲ. ಈ ಒಡಕಿನ ಬಗ್ಗೆ ಕರ್ನಾಟಕದ ಪ್ರಗತಿಪರರಲ್ಲೂ ವಿಭಿನ್ನ ಗ್ರಹಿಕೆಗಳಿವೆ. ಕೆಲವರು ಕೇಜ್ರಿವಾಲರ 'ನಿರಂಕುಶ' ಧೋರಣೆಯನ್ನು ದೂಷಿಸಿದರೆ, ಮತ್ತೆ ಕೆಲವರು ಈ 'ಒಡಕು ಸೃಷ್ಟಿ'ಸಿದ್ದಕ್ಕಾಗಿ ಯೋಗೇಂದ್ರ ಯಾದವ್ ಮತ್ತಿತರರನ್ನು ದೂಷಿಸುತ್ತಿದ್ದಾರೆ. ಹೀಗೆ ಹೊರಬಂದು ಹೊಸ ಗುಂಪು ಕಟ್ಟಿಕೊಂಡು ಏನನ್ನೂ ಸಾಧಿಸಲಾಗದು ಎಂಬುದು ಬಹುತೇಕರ ಅಭಿಪ್ರಾಯ.

ಆದರೆ ಬಹುತೇಕರ ನಿರೀಕ್ಷೆಗೆ ಭಿನ್ನವಾಗಿ ಸ್ವರಾಜ್ ಅಭಿಯಾನ ಮುನ್ನಡೆಯುತ್ತಿದೆ. ಕೇವಲ ಮೂರೂವರೆ ತಿಂಗಳಲ್ಲಿ ಹತ್ತಾರು ರಾಜ್ಯಗಳಲ್ಲಿ 'ಸಂವಾದ' ಕಾರ್ಯಕ್ರಮಗಳಲ್ಲಿ ಸಾವಿರಾರು ಕಾರ್ಯಕರ್ತರನ್ನು ಸೆಳೆದಿದೆ. ಹತ್ತಾರು ರಾಜ್ಯಗಳಲ್ಲಿ, ನೂರಾರು ಜಿಲ್ಲೆಗಳಲ್ಲಿ ಘಟಕಗಳನ್ನು ಸ್ಥಾಪಿಸಿದೆ. ಮಾತ್ರವಲ್ಲ, ಈ ದೇಶದ ಅತ್ಯಂತ ಪ್ರಮುಖ ಸಮಸ್ಯೆಯಾದ ರೈತರ ಸಮಸ್ಯೆಯನ್ನು ಕೈಗೆತ್ತಿಕೊಂಡು 'ಜೈ ಕಿಸಾನ್ ಆಂದೋಲನ' ಎಂಬ ವಿನೂತನ ಚಳವಳಿಯನ್ನು ಕೈಗೆತ್ತಿಕೊಂಡಿದೆ.

ಜೈ ಕಿಸಾನ್ ಮೂರು ಪ್ರಮುಖ ಬೇಡಿಕೆಗಳನ್ನಿಟ್ಟುಕೊಂಡು ಪ್ರಚಾರಾಂದೋಲನ ಕೈಗೊಂಡಿದೆ.

1) ಮೋದಿ ಸರ್ಕಾರ ತರಲು ಉದ್ದೇಶಿಸಿರುವ ಭೂಸ್ವಾಧೀನ ಮಸೂದೆಯ ಕರಾಳ ತಿದ್ದುಪಡಿಗಳನ್ನು ಕೈಬಿಡಬೇಕು.

2) ಅತಿವೃಷ್ಟಿ, ಅನಾವೃಷ್ಟಿ, ರೋಗ ಬಾಧೆ ಇತ್ಯಾದಿ ಯಾವುದೇ ಕಾರಣಕ್ಕೆ ಬೆಳೆ ನಷ್ಟವಾದರೂ ಇದರ ಜವಾಬ್ದಾರಿಯನ್ನು ನೇರವಾಗಿ ಸರ್ಕಾರಗಳೇ ಹೊರಬೇಕು.

3) 5 ಸದಸ್ಯರಿರುವ ಒಂದು ರೈತ ಕುಟುಂಬಕ್ಕೆ ಮಾಸಿಕ ಕನಿಷ್ಟ 15,000/- ರೂಪಾಯಿಗಳ ಆದಾಯ ಖಾತ್ರಿಪಡಿಸುವ ಒಂದು ಕಾಯಿದೆ ತರಬೇಕು.

ಈ ಪ್ರಚಾರಾಂದೋಲನ ನಡೆಸುತ್ತಿರುವ ರೀತಿ ಕೂಡ ವಿಶಿಷ್ಟವಾದುದು. ದೇಶಾದ್ಯಂತ ಒಂದು ಲಕ್ಷ ಹಳ್ಳಿಗಳಲ್ಲಿ ಪ್ರಚಾರಾಂದೋಲನ ನಡೆಸಿ, ಅಲ್ಲಿನ ಮಣ್ಣನ್ನು ಒಂದು ಕಳಶದಲ್ಲಿ ಸಂಗ್ರಹಿಸಿ ಒಂದು ಲಕ್ಷ ಮಣ್ಣು ತುಂಬಿದ ಕಳಶಗಳನ್ನು ಪಾರ್ಲಿಮೆಂಟಿಗೆ ತಲುಪಿಸುವ ಯೋಜನೆ ಹಮ್ಮಿಕೊಂಡಿದೆ. ಯೋಗೇಂದ್ರ ಯಾದವ್ ಪ್ರಕಾರ ಜೈ ಕಿಸಾನ್ ಆಂದೋಲನದ ಮೂಲಕ ನಗರವಾಸಿಗಳನ್ನು ಹಳ್ಳಿಯ ರೈತಾಪಿ ಸಮುದಾಯದೊಂದಿಗೆ ಬೆಸೆಯುವಂತಾದರೆ, ಅಂದರೆ ನಗರವಾಸಿಗಳು ರೈತರ ಸಂಕಷ್ಟಕ್ಕೆ ಸ್ಪಂದಿಸಿ ಅವರ ಹೋರಾಟದಲ್ಲಿ ಹೆಗಲು ಕೊಡುವಂತಾದರೆ ಈ ಚಳವಳಿ ಖಂಡಿತ ಯಶಸ್ಸು ಸಾಧಿಸುತ್ತದೆ. ಈ ಉದ್ದೇಶಕ್ಕಾಗಿ ಆಗಸ್ಟ್ 10ರಂದು ದೆಹಲಿಯ ಜಂತರ್‌ಮಂತರ್‌ನಲ್ಲಿ ಬೃಹತ್ ಸಮಾವೇಶ ನಡೆಯಲಿದೆ.

ಕರ್ನಾಟಕದಲ್ಲೂ ಈ ಆಂದೋಲನ ಸದ್ದುಗದ್ದಲವಿಲ್ಲದೆ ಹಲವು ಜಿಲ್ಲೆಗಳನ್ನು ತಲುಪಿದೆ. ಸಾವಿರಾರು ಹಳ್ಳಿಗಳಲ್ಲಿ ಪ್ರಚಾರ ನಡೆಸಿ ಮಣ್ಣಿನ ಕಳಶಗಳನ್ನು ಸಂಗ್ರಹಿಸಲಾಗಿದೆ. ಆಗಸ್ಟ್ 10ರ ದೆಹಲಿ ಸಮಾವೇಶಕ್ಕೆ ಸಾವಿರಾರು ಸಂಖ್ಯೆಯಲ್ಲಿ ಕನ್ನಡಿಗ ರೈತರು ಭಾಗವಹಿಸುವ ನಿರೀಕ್ಷೆಯೂ ಇದೆ.


ಮತ್ತೊಂದು ಕಡೆ ಆಗಸ್ಟ್ ಒಂದನೇ ತಾರೀಕಿನಿಂದ ಉತ್ತರ ಭಾರತದಲ್ಲಿ ಒಂದು ಬೃಹತ್ ಟ್ರಾಕ್ಟರ್ ರ್‍ಯಾಲಿ ಆರಂಭವಾಗಿದೆ. ಪಂಜಾಬಿನ ತಿಕ್ರಿತ್ ಎಂಬ ಪಟ್ಟಣದಿಂದ ಹೊರಟಿರುವ ನೂರಾರು ಟ್ರಾಕ್ಟರ್‌ಗಳ ಈ ಜಾಥಾ ಈಗ ಹರ್ಯಾಣ ಪ್ರವೇಶಿಸಿದೆ. ಅಲ್ಲಿಂದ ಮುಂದಕ್ಕೆ ಉತ್ತರಪ್ರದೇಶಕ್ಕೆ ಪ್ರವೇಶಿಸಿ ಅಂತಿಮವಾಗಿ ಆಗಸ್ಟ್ 10ರಂದು ದೆಹಲಿಯ ಜಂತರ್‌ಮಂತರ್‌ನಲ್ಲಿ ಸಮಾವೇಶಗೊಳ್ಳಲಿದೆ. ಒಂದು ಲಕ್ಷ ರೈತರನ್ನು ಸಂಘಟಿಸುವ ಗುರಿ ಹಮ್ಮಿಕೊಂಡಿದ್ದು, ಎಲ್ಲೆಡೆ ರೈತರ ಉತ್ಸಾಹ, ಸ್ಪಂದನೆಯನ್ನು ಗಮನಿಸಿ ಹೇಳುವುದಾದರೆ ಭಾರೀ ಸಂಖ್ಯೆಯಲ್ಲಿ ರೈತರು ನೆರೆಯುವ ಎಲ್ಲ ನಿರೀಕ್ಷೆ ಇದೆ.

ಈಗ ಪಾರ್ಲಿಮೆಂಟ್ ಅಧಿವೇಶನ ನಡೆಯುತ್ತಿದ್ದು ವಿರೋಧ ಪಕ್ಷಗಳು ಮೋದಿಯ ವಿರುದ್ಧ ತಿರುಗಿ ಬಿದ್ದಿವೆ. ಸಂಸತ್ತಿನಲ್ಲಿ ಭೂಸ್ವಾಧೀನ ಕಾಯ್ದೆಯದೇ ದೊಡ್ಡ ಗದ್ದಲ. ಹೇಗೂ ರಾಜ್ಯಸಭೆಯಲ್ಲಿ ಬಹುಮತವಿಲ್ಲದ ಕಾರಣಕ್ಕೆ ಈ ಕರಾಳ ಕಾಯ್ದೆಯನ್ನು ರೈತರ ಮೇಲೆ ಹೇರುವುದು ಮೋದಿಗೆ ಸುಲಭ ಸಾಧ್ಯವಲ್ಲ. ಇದರ ವಿರುದ್ಧ ಇಡೀ ದೇಶದಲ್ಲಿ ಜನಾಭಿಪ್ರಾಯ ಮೂಡುತ್ತಿದೆ. ಸಾವಿರಾರು ಪ್ರತಿಭಟನೆಗಳು ನಡೆದಿವೆ. ಈ ಹಿನ್ನೆಲೆಯಲ್ಲಿ ಬೇರೆ ವಿಧಿಯಿಲ್ಲದೆ ತನ್ನ ತಿದ್ದುಪಡಿಗಳನ್ನು ವಾಪಸ್ ಪಡೆದುಕೊಳ್ಳುವ ಗಾಳಿಸುದ್ದಿಗಳನ್ನು ಮೋದಿ ಸರ್ಕಾರ ಇದೀಗ ತೇಲಿಬಿಟ್ಟಿದೆ. ಇದರಲ್ಲಿ ಸತ್ಯವೆಷ್ಟು? ಮಿಥ್ಯವೆಷ್ಟು ಎಂಬುದು ಮುಂದಿನ ಒಂದೆರಡು ವಾರಗಳಲ್ಲಿ ಇತ್ಯರ್ಥವಾಗಬೇಕಷ್ಟೆ.

ಮೋದಿಯ ಗ್ರಹಗತಿಗಳು ನೆಟ್ಟಗಿಲ್ಲ ಅಂತ ಕಾಣುತ್ತೆ. ಭೂಸ್ವಾಧೀನ ಕಾಯ್ದೆ ತಿದ್ದುಪಡಿ ವಿಷಯದಲ್ಲಿ ಹೇಗಾದರೂ ಮುಖ ಉಳಿಸಿಕೊಳ್ಳಲು ಹೆಣಗುತ್ತಿರುವ ಮೋದಿ ಕೂಟಕ್ಕೆ ಯಾದವ್ ನೇತೃತ್ವದ ಸ್ವರಾಜ್ ಅಭಿಯಾನ್ ಮತ್ತೊಂದು ಮರ್ಮಾಘಾತ ಕೊಡಲು ಸಜ್ಜಾಗಿದೆ. ಅದು ಅಂತಿಂಥ ಸವಾಲಲ್ಲ. ಇದುವರೆಗೆ ದೇಶ ಆಳಿಹೋದ ಎಲ್ಲ ಪ್ರಧಾನಿಗಳ ಸಾರ್ವಜನಿಕ ಬದ್ಧತೆಯನ್ನೇ ಪ್ರಶ್ನಿಸುವಂಥ ಸವಾಲು. ಈ ಸವಾಲು ಪ್ರಧಾನಿ ಮೋದಿಯ ಅಧಿಕೃತ ನಿವಾಸ ಎದುರುಗಡೆ ಇರುವ ರೇಸ್‌ಕೋರ್ಸ್ ಭೂಮಿಯ ಅಕ್ರಮಕ್ಕೆ ಸಂಬಂಧಿಸಿದ್ದು. ಪ್ರಧಾನಿಯ ಕಣ್ಣೆದುರಿಗೇ ನಡೆಯುತ್ತಿರುವ ಜೂಜಾಟಕ್ಕೆ ಸಂಬಂಧಿಸಿದ್ದು! (ವಿವರಗಳಿಗೆ ಬಾಕ್ಸ್ ನೋಡಿ.)

ಈಗ ಒಂದು ಪ್ರಶ್ನೆ ಹಾಕಿಕೊಳ್ಳೋಣ. ಆಮ್ ಆದ್ಮಿ ಪಕ್ಷ ಹೋಳಾಗಿದ್ದರಿಂದ ಬಿಜೆಪಿ ಮತ್ತು ಮೋದಿ ಕೂಟಕ್ಕೆ ಅನುಕೂಲವಾಗಿದೆಯೋ ಅಥವ ಪ್ರತಿಕೂಲ ಪರಿಣಾಮ ಬೀರಿದೆಯೋ? ದೆಹಲಿಯಲ್ಲಿ ಅಧಿಕಾರದಲ್ಲಿರುವ ಆಮ್ ಆದ್ಮಿ ಪಕ್ಷದ ಸವಾಲು ದೆಹಲಿಗೆ ಮಾತ್ರ ಸೀಮಿತವಾಗಿದ್ದರೆ, ಹೊಸದಾಗಿ ಹುಟ್ಟಿಕೊಂಡ ಸ್ವರಾಜ್ ಅಭಿಯಾನ್ ದೇಶಾದ್ಯಂತ ಹೊಸ ಅಲೆಯನ್ನೆಬ್ಬಿಸುತ್ತಿದ್ದು ಮೋದಿ ಮಾದರಿಗೆ ಗಂಭೀರ ಸವಾಲಾಗಿ ಬೆಳೆಯುತ್ತಿರುವುದು ಆಶಾದಾಯಕ ಬೆಳವಣಿಗೆ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ



ಕುದುರೆ ಜೂಜು ಯಾರ ಹಿತಕ್ಕಾಗಿ?

ಕಳೆದ ವಾರ ಪ್ರಧಾನಿ ಮೋದಿಗೆ ಒಂದು ನೋಟಿಸ್ ...ಯಾಗಿದೆ. ಇದು ಸಾರ್ವಜನಿಕ ಹಿತಾಸಕ್ತಿಯ ನೋಟಿಸ್. ...ನ್ನು ಜಾರಿ ಮಾಡಿದವರು ಸ್ವರಾಜ್ ಅಭಿಯಾನದ ...ಂತ್ ಭೂಷಣ್, ಯೋಗೇಂದ್ರ ಯಾದವ್ ಮತ್ತಿತರರು. ...ಕ್ಕೆ ಹೆಚ್ಚಿನ ವಿವರಣೆ ಅಗತ್ಯವಿಲ್ಲದ್ದರಿಂದ ಅದರ ...ಸಾರಾಂಶವನ್ನು ಯಥಾವತ್ ನೀಡಲಾಗಿದೆ.

"ದೆಹಲಿ ರೇಸ್‌ಕೋರ್ಸನ್ನು ರೈತರ ರಾಷ್ಟ್ರೀಯ ...ಕವನ್ನಾಗಿ ಪರಿವರ್ತಿಸುವ ಬಗ್ಗೆ

ಇವರಿಗೆ

ಶ್ರೀ ನರೇಂದ್ರ ದಾಮೋದರದಾಸ್ ಮೋದಿ

ಪ್ರಧಾನ ಮಂತ್ರಿಗಳು

ಭಾರತ ಸರ್ಕಾರ

ಭಾರತದ ಎಲ್ಲಾ ರೈತರ ಹಾಗೂ ಪ್ರಜೆಗಳ ಪರವಾಗಿ ...ಕಿಸಾನ್ ಆಂದೋಲನ ಈ ಕೆಳಕಂಡ ವಿಚಾರವನ್ನು ಗಮನಕ್ಕೆ ತರಲು ಉದ್ದೇಶಿಸಿದೆ.

1. ನಿಮ್ಮ ಅಧಿಕೃತ ನಿವಾಸದ ಎದುರುಗಡೆ, ರಸ್ತೆಯ ...ಂದು ಬದಿಯಲ್ಲಿ ಒಂದು ರೇಸ್‌ಕೋರ್ಸ್ ಇದೆ.

2. ಈ ರೇಸ್‌ಕೋರ್ಸ್‌ನ ಭೂಮಿಯನ್ನು 1912ರಲ್ಲಿ ...ಗ್ರಾಮದ ರೈತರಿಂದ "ಸಾರ್ವಜನಿಕ ಉದ್ದೇಶ"ಕ್ಕೆಂದು ...ವಾಗಿ ಸ್ವಾಧೀನಪಡಿಸಿಕೊಳ್ಳಲಾಗಿತ್ತು.

3. ಭೂಮಿ ಸ್ವಾಧೀನಪಡಿಸಿಕೊಂಡ ನಂತರ ...ಸರ್ಕಾರ ಘೋಷಿತ ಉದ್ದೇಶವನ್ನು ...ಒಂದು ಖಾಸಗಿ ಕ್ಲಬ್‌ಗೆ ಭೂಮಿಯನ್ನು ...ನೀಡಿತು. ದೆಹಲಿ ರೇಸ್‌ಕ್ಲಬ್ ಎಂದು ...ಕರೆಯಲ್ಪಡುವ ಈ ಕ್ಲಬ್ ಕುದುರೆ ರೇಸ್ ನಡೆಸುತ್ತಾ ...ದೇಶದ ಇತರೆಡೆಗಳಲ್ಲಿ ಜೂಜಾಟ ನಡೆಸುವ ...ಲಾಭ ಮಾಡುತ್ತಿರುವ ಒಂದು ಸಂಸ್ಥೆಯಾಗಿದೆ.

4. ಈ ಕರಾರಿನ ಗುತ್ತಿಗೆ ಕರಾರು 1998ಕ್ಕೆ ...ಮುಗಿದಿದೆ. ಆದರೂ ರೇಸ್‌ಕ್ಲಬ್ ಈ ಸರ್ಕಾರಿ ಭೂಮಿಯನ್ನು ಸ್ವಾಧೀನದಲ್ಲಿಟ್ಟುಕೊಂಡು ಲಾಭ ಮಾಡಿಕೊಳ್ಳುತ್ತಿದೆ.

ಜೂಜಾಟ ನಡೆಸುತ್ತಾ ಖಾಸಗಿ ಲಾಭ ಗಳಿಸಲು ಸದರಿ ಭೂಮಿಯನ್ನು ಬಳಸುತ್ತಿರುವುದು "ಸಾರ್ವಜನಿಕ ಉದ್ದೇಶ" ಎಂಬುದನ್ನೇ ಬುಡಮೇಲು ಮಾಡಿದಂತಾಗಿದೆ. ಅದರಲ್ಲೂ ಪ್ರಧಾನಮಂತ್ರಿಯವರ ಅಧಿಕೃತ ನಿವಾಸ ಹಾಗೂ ಗೃಹ ಕಚೇರಿಯ ಎದುರುಗಡೆಯೇ ಇದೆಲ್ಲಾ ನಡೆಯುತ್ತಿರುವುದು ಯಾವುದೇ ಸಾರ್ವಜನಿಕ ಹಗರಣಕ್ಕಿಂತಲೂ ಕಡಿಮೆಯೇನಲ್ಲ; ಅದರ ಗುತ್ತಿಗೆ ಕರಾರು ಮುಗಿದ ನಂತರವೂ ಈ ಕ್ಲಬ್ ತನ್ನ ಚಟುವಟಿಕೆಗಳನ್ನು ನಡೆಸುತ್ತಿರುವುದನ್ನು ನೋಡಿದರೆ ಸಾರ್ವಜನಿಕ ಆಡಳಿತ ಯಂತ್ರಾಂಗ ಶಾಮೀಲಾಗಿರುವುದು ಕಂಡುಬರುತ್ತದೆ;

ಇಂಥ ಹಿನ್ನೆಲೆಯಲ್ಲಿ ಜೈ ಕಿಸಾನ್ ಆಂದೋಲನ ಈ ಕೆಳಕಂಡ ಬೇಡಿಕೆಗಳನ್ನು ನಿಮ್ಮ ಮುಂದಿಡುತ್ತದೆ ಹಾಗೂ ಕೂಡಲೇ ಇವುಗಳನ್ನು ಈಡೇರಿಸುವಂತೆ ಆಗ್ರಹಿಸುತ್ತದೆ.

1. ಖಾಸಗಿ ಲಾಭಕೋರರಿಂದ ಸಾರ್ವಜನಿಕ ಸ್ವತ್ತಿನ ಇಂಥ ಆಘಾತಕಾರಿ ದುರ್ಬಳಕೆಯನ್ನು ಕೊನೆಗಾಣಿಸಲು ದೆಹಲಿ ರೇಸ್ ಕ್ಲಬ್‌ಅನ್ನು ಈ ಭೂಮಿಯಿಂದ ಕೂಡಲೆ ತೆರವು ಮಾಡಿ.

2. ಈ ಭೂಮಿಯಲ್ಲಿ ರೈತರ ಒಂದು ರಾಷ್ಟ್ರೀಯ ಸ್ಮಾರಕವನ್ನು ನಿರ್ಮಿಸುವ ಮೂಲಕ ನಿಜವಾದ ಸಾರ್ವಜನಿಕ ಉದ್ದೇಶ ಮತ್ತು ಮಹತ್ತರವಾದ ಉದ್ದೇಶಕ್ಕೆ ಬಳಸಬೇಕು. ಈ ಮೂಲಕ 1857ರ ಪ್ರಥಮ ಸ್ವಾತಂತ್ರ ಸಂಗ್ರಾಮದಲ್ಲಿ ಬಲಿದಾನ ಮಾಡಿದ ಹುತಾತ್ಮ ರೈತರನ್ನು ಹಾಗೂ ಈ ಸ್ವತಂತ್ರ ಭಾರತದಲ್ಲಿ ನಡೆದಿರುವ ಬಲವಂತದ ಭೂಸ್ವಾಧೀನಗಳಿಂದಾಗಿ ತಮ್ಮ ಜೀವನವನ್ನು ... ಜೀವನೋಪಾಯವನ್ನು ಕಳೆದುಕೊಂಡಿರುವ ರೈತರನ್ನು ಸ್ಮರಿಸಬೇಕು. ಹಾಗೆಯೇ ಇದುವರೆಗೆ ಆಳ್ವಿಕೆ ನಡೆಸಿದ ಎಲ್ಲ ಸರ್ಕಾರಗಳು ದೇಶದ ಕೃಷಿ ಕ್ಷೇತ್ರದ ಬಗ್ಗೆ ತೋರಿದ ತಾರತಮ್ಯ ಹಾಗೂ ನಿರ್ಲಕ್ಷ್ಯ ಧೋರಣೆಯ ಪರಿಣಾಮವಾಗಿ ಆತ್ಮಹತ್ಯೆಗೆ ದೂಡಲ್ಪಟ್ಟ ರೈತರನ್ನು ನಾವು ಸ್ಮರಿಸುವಂತಾಗಬೇಕು.

3. ಸ್ಮಾರಕ ನಿರ್ಮಾಣದ ನಂತರ ಉಳಿದ ಭೂಮಿಯನ್ನು ಸುಸ್ಥಿರ ಕೃಷಿ ಪದ್ಧತಿಗೆ ಉತ್ತೇಜನ ನೀಡುವ ಹಾಗೂ ಪ್ರಚಾರ ಮಾಡುವ ಉದ್ದೇಶಕ್ಕೆ ಬಳಸಿಕೊಳ್ಳಬೇಕು. ರೈತರು ಬೆಳೆದ ಸುರಕ್ಷಿತ ಮತ್ತು ಆರೋಗ್ಯಕರ ಸಾವಯವ ಆಹಾರ ಬೆಳೆಗಳನ್ನು ರೈತರೇ ನೇರವಾಗಿ ಮಾರಾಟ ಮಾಡುವಂತಹ "ರೈತ ಸಂತೆ"ಯೊಂದನ್ನು ಏರ್ಪಾಟು ಮಾಡಬೇಕು.

4. ಆಧುನಿಕ ದೆಹಲಿಯ ನಿರ್ಮಾಣಕ್ಕಾಗಿ ವಿವರಿಸಲು ಸಾಧ್ಯವಿಲ್ಲದಷ್ಟು ಕಷ್ಟ ಕೋಟಲೆಗಳನ್ನು ಅನುಭವಿಸಿದ ಮಲ್ಕಾ ಗ್ರಾಮ ಮತ್ತು ಆ ರೈತರ ಸ್ಮರಣೆಯಲ್ಲಿ ಇಂದಿನ "ರೇಸ್ ಕೋರ್ಸ್" ಮೆಟ್ರೋ ರೈಲು ನಿಲ್ದಾಣವನ್ನು "ಮಲ್ಕಾ" ರೈಲು ನಿಲ್ದಾಣ ಎಂದು ಮರು ನಾಮಕರಣ ಮಾಡಬೇಕು.

ಈ ಜಮೀನು ವಸಾಹತುಶಾಹಿ ಧಣಿಗಳು ಮತ್ತು ಅವರ ಇಂದಿನ ವಾರಸುದಾರರು ತಮ್ಮ ಮೋಜು ಮಜಾಗಳಿಗಾಗಿ ನಮ್ಮ ನೆಲದ ರೈತರನ್ನು ಸುಲಿಗೆ ಮಾಡಿದ್ದರ ಸಂಕೇತದಂತಿದೆ. ಮಾತ್ರವಲ್ಲ, ಇತಿಹಾಸದುದ್ದಕ್ಕೂ ರೈತರ ವಿರುದ್ಧ ನಡೆದ ಪ್ರಮಾದಗಳ ಜೀವಂತಸಾಕ್ಷಿಯಾಗಿದೆ. ಹೀಗಾಗಿ ಈ ಭೂಮಿ ಭಾರತದ ರೈತರ ಭವಿಷ್ಯಕ್ಕೆ ದೀವಿಗೆಯಾಗಿಯೂ ಇದೆ.

ಆದ್ದರಿಂದ ಭಾರತದ ರೈತರು ಮತ್ತು ಪ್ರಜೆಗಳಾದ ನಾವು ನಿಮಗೆ ಈ ನೋಟಿಸನ್ನು ಜಾರಿ ಮಾಡುತ್ತಿದ್ದೇವೆ. ನಿಮ್ಮ ಸರ್ಕಾರ ಇಂದಿನಿಂದ ಎರಡು ವಾರಗಳ ಒಳಗಾಗಿ, ಅಂದರೆ ಆಗಸ್ಟ್ 9 (ಅಂತರರಾಷ್ಟ್ರೀಯ ಮೂಲನಿವಾಸಿಗಳ ದಿನ ಮತ್ತು ಆಗಸ್ಟ್ ಕ್ರಾಂತಿಯ ದಿನ) ರ ಸಂಜೆಯ ಒಳಗೆ ತಮ್ಮ ಪ್ರತಿಕ್ರಿಯೆ ನೀಡಬೇಕೆಂದು ಆಗ್ರಹಿಸುತ್ತಿದ್ದೇವೆ. ತಪ್ಪಿದಲ್ಲಿ ಈ ಮೇಲೆ ವಿವರಿಸಲಾದ ನಮ್ಮ ಬೇಡಿಕೆಗಳ ಜಾರಿಗಾಗಿ ಶಾಂತಿಯುತ ಮತ್ತು ಪ್ರಜಾತಾಂತ್ರಿಕ ರೀತಿಯ ಅನ್ಯಮಾರ್ಗಗಳನ್ನು ಅನುಸರಿಸಬೇಕಾಗುತ್ತದೆಂದು ಈ ಮೂಲಕ ತಿಳಿಯಪಡಿಸುತ್ತಿದ್ದೇವೆ."

ಸ್ವರಾಜ್ ಅಭಿಯಾನದ ರಾಷ್ಟ್ರೀಯ ಸಂಚಾಲಕ ಆನಂದ ಕುಮಾರ್, ರಾಷ್ಟ್ರೀಯ ಕಾರ್ಯದರ್ಶಿ ಅಜಿತ್ ಝಾ ಹಾಗೂ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರಾದ ಪ್ರಶಾಂತ ಭೂಷಣ್ ಮತ್ತು ಯೋಗೇಂದ್ರ ಯಾದವ್ ಅವರುಗಳ ಸಹಿಯೊಂದಿಗೆ ಈ ನೋಟಿಸನ್ನು ಜಾರಿ ಮಾಡಲಾಗಿದೆ.

ವಸಾಹತುಶಾಹಿಗಳ ವಾರಸುದಾರರಂತಿರುವ ಭಾವೀ ಕಾರ್ಪೋರೇಟ್ ಧಣಿಗಳ ದುರ್ಲಾಭಕ್ಕಾಗಿ ವಸಾಹತುಶಾಹಿ ಭೂಸ್ವಾಧೀನ ಕಾಯಿದೆಯನ್ನು ಜಾರಿಗೆ ತರಲು ತವಕಿಸುತ್ತಿರುವ ನರೇಂದ್ರ ಮೋದಿಗೆ ಈಗ ಪೀಕಲಾಟ. ಹೇಳಿಕೇಳಿ ಮೋದಿ ಜಾಗಲುವೇಷಗಳಲ್ಲಿ ನಿಸ್ಸೀಮ. ಆದರೆ ಅಂಗೈಹುಣ್ಣಿನಂತಿರುವ ಈ ವಿಚಾರದಲ್ಲಿ ತಪ್ಪಿಸಿಕೊಳ್ಳಲು ಹೇಗೆ ಸಾಧ್ಯ? ಅರಸ್ಥಾನ ಗದ್ದುಗೆ ... ಕಲಿತು ಚಿಂತನ-ಮಂಥನ ನಡೆಸಿ, ಯಾವ ರೀತಿಯ ತಂತ್ರ ... ■

ಹಗರಿಬೊಮ್ಮನಹಳ್ಳಿ: ಸರ್ಕಾರಿ ಆಸ್ಪತ್ರೆಗೆ ವೈದ್ಯೆಯೇ ರೋಗ

ಸರ್ಕಾರಿ ಆಸ್ಪತ್ರೆಯನ್ನೇ ಐಸಿಯುಗೆ ದಾಖಲಿಸಬೇಕಾದ ದುಸ್ಥಿತಿ ಹಗರಿಬೊಮ್ಮನಹಳ್ಳಿಯಲ್ಲಿ ನಿರ್ಮಾಣವಾಗಿದೆ. ಜನರ ರೋಗಗಳನ್ನು ವಾಸಿ ಮಾಡಬೇಕಾದ ವೈದ್ಯರೇ ಆಸ್ಪತ್ರೆಗೆ ರೋಗಗಳಾಗಿ ವಕ್ಕರಿಸಿಕೊಂಡರೆ ಆಸ್ಪತ್ರೆಯ ಗತಿ ಇನ್ನೇನಾಗಬೇಡ. ಆರೋಗ್ಯ ಇಲಾಖೆ ಎಚ್ಚೆತ್ತುಕೊಳ್ಳದಿದ್ದರೆ ಹಗರಿಬೊಮ್ಮನಹಳ್ಳಿ ಆಸ್ಪತ್ರೆ ಜನಮಾನಸದಿಂದ ಸತ್ತೇ ಹೋದರೂ ಆಚ್ಚರಿಯಿಲ್ಲ. 100 ಹಾಸಿಗೆಯ ಹೊಸ ಕಟ್ಟಡ ಹೊಂದಿದ್ದರೂ ಈಗಾಗಲೇ ಜೀವಸತ್ವವನ್ನು ಕಳೆದುಕೊಂಡು ಕೇವಲ ಕಲ್ಲುಮಣ್ಣಿನ ಕಟ್ಟಡವಾಗಿ ನಿಂತಿರುವ ಆಸ್ಪತ್ರೆಯನ್ನು ಕಡುಭ್ರಷ್ಟ ವೈದ್ಯಾಧಿಕಾರಿಣಿ ಡಾ.ಸುಲೋಚನಮ್ಮ ಮುಕ್ಕುತ್ತಿರುವ ಪರಿ ಇದೇರೀತಿ ಮುಂದುವರೆದರೆ ಕೆಲವೇ ದಿನಗಳಲ್ಲಿ ಕಟ್ಟಡದ ಕುರುಹೂ ಅಲ್ಲಿ ಕಾಣಸಿಗುವುದು ಡೌಟು!

ಸುಲೋಚನಾ ಇಲ್ಲಿಗೆ ವೈದ್ಯಾಧಿಕಾರಿಯಾಗಿ ಬರುವ ಮುನ್ನ ಡಾ.ಪ್ರಕಾಶ್ ರೆಡ್ಡಿ ಎಂಬ ಪರಮ ಕೋಪಿಷ್ಠ ದೂರ್ವಾಸ ಮುನಿಯೊಬ್ಬ ಇದೇ ಆಸ್ಪತ್ರೆಯನ್ನು ತನ್ನ ಆಶ್ರಮ ಮಾಡಿಕೊಂಡಿದ್ದ. ಚಿಕಿತ್ಸೆಗೆಂದು ಬರುವ ರೋಗಿಗಳು ಕೂಡಾ ಮನುಷ್ಯರು ಎಂಬ ಪರಿವೆಯೇ ಇಲ್ಲದಂತೆ ರೇಗಾಡುತ್ತಿದ್ದ ಆತನ ವರ್ತನೆ ಕಂಡವರು ಇವನ ಸಹವಾಸಕ್ಕಿಂತ ರೋಗದ ವೇದನೆಯೇ ಹೆಚ್ಚು ಅಂತ ವಾಪಾಸ್ ಹೋದದ್ದಿದೆ. ಅಂತಹವನನ್ನು ಎತ್ತಂಗಡಿ ಮಾಡಿ ಆ ಜಾಗಕ್ಕೆ ಸುಲೋಚನಮ್ಮನನ್ನು ತಂದಾಗ, ಹೆಣ್ಮಗಳು ಅಧಿಕಾರ ಹಿಡಿದಿದ್ದಾಳೆ ಇನ್ನಾದರು ಈ ಆಸ್ಪತ್ರೆಗೆ ಮುಕ್ತಿ ಸಿಗುತ್ತದೆ ಅಂತ ಜನ ಆಶಾಭಾವನೆ ಹೊಂದಿದ್ದರು. ಆದರೆ ತಾವು ಬಾಣಲೆಯಿಂದ ಹಾರಿ ಬೆಂಕಿಗೆ ಬಿದ್ದಿದ್ದೇವೆಂಬ ಸತ್ಯ ಜನರಿಗೆ ಅರ್ಥವಾಗಲು ಬಹಳ ಕಾಲವೇನೂ ಬೇಕಾಗಲಿಲ್ಲ.

ಹನ್ನೊಂದು ತಜ್ಞ ವೈದ್ಯರನ್ನು ಹೊಂದಿರಬೇಕಾದ ಈ ತಾಲೂಕು ಆಸ್ಪತ್ರೆಗೆ ಇದ್ದವರು ಕೇವಲ ಡಾ.ಪ್ರಕಾಶ್ ರೆಡ್ಡಿಯವರು ಮಾತ್ರ. ಪ್ರಕಾಶ್ ರೆಡ್ಡಿಯ ನಂತರ, ತಾಲೂಕು ವೈದ್ಯಾಧಿಕಾರಿಯಾಗಿ ತಾಲೂಕಿಗೆ ಕಾಲಿಟ್ಟಿದ್ದ ಇವರಿಗೆ ಸಾರ್ವಜನಿಕ ಆಸ್ಪತ್ರೆಯ ಜವಾಬ್ದಾರಿಯನ್ನು ನೀಡಲಾಯಿತು. ಅಲ್ಲಿಂದ ಶುರುವಾದ ಇವರ ಭ್ರಷ್ಟ ಆಡಳಿತ ಎಂತಹ ಒತ್ತಡಕ್ಕೂ ಕುಗ್ಗುತ್ತಿಲ್ಲ.

ತಾಲೂಕು ವೈದ್ಯಾಧಿಕಾರಿಯಾಗಿ ಬರುವುದಕ್ಕಿಂತ ಮುಂಚೆ ಚಿಕ್ಕಜೋಗಿಹಳ್ಳಿಯಿಂದ ಕೊಟ್ಟೂರಿಗೆ, ಕೊಟ್ಟೂರಿನಿಂದ ಉಜ್ಜನಿ ಆಸ್ಪತ್ರೆಗೆ ವರ್ಗವಾಗಿದ್ದ ಹಿನ್ನೆಲೆ ಈ ಸುಲೋಚನಮ್ಮನಿಗಿದೆ. ಇಂತಹ ವರ್ಗಗಳು ಅವರ ಸ್ವಂತ ಇಚ್ಛೆಯಿಂದ ಆದದ್ದಲ್ಲ. ಕೆಲಸ ಮಾಡಿದ ಎಲ್ಲಾ ಜಾಗಗಳಲ್ಲೂ ಇವರ ನಡವಳಿಕೆ ಮತ್ತು ಭ್ರಷ್ಟತೆಯ ದೂರುಗಳಿಗಾಗಿ ಸಾರ್ವಜನಿಕರು ಮತ್ತು ಸಂಘಸಂಸ್ಥೆಗಳ ಒತ್ತಡಕ್ಕಾಗಿಯೇ ಮೇಲಧಿಕಾರಿಗಳು ಇವರನ್ನು ಬೇರೆ ಸ್ಥಳಗಳಿಗೆ ವರ್ಗಾವಣೆ ಮಾಡಿ ಕೈತೊಳೆದುಕೊಂಡಿದ್ದಾರೆ. ಇಲ್ಲೂ ಸಹ ಅದೇ ಪರಿಪಾಠವನ್ನು ಮುಂದುವರೆಸಿದ್ದಾರೆ.

ಸಾರ್ವಜನಿಕ ಆಸ್ಪತ್ರೆಯ ಜವಾಬ್ದಾರಿ ಸಿಕ್ಕ ಕೂಡಲೇ ಇವರು ಶುರು ಮಾಡಿದ ಕೆಲಸ ಕಮಿಷನ್ ದಂಧೆ. ಸರ್ಕಾರದಿಂದಲೇ 10 ಲಕ್ಷದಷ್ಟು ಔಷಧಿಗಳು ಸರಬರಾಜಾಗುತ್ತಿದ್ದರೂ ಅವುಗಳನ್ನು ಬಳಸದೆ ಆರೋಗ್ಯರಕ್ಷ ಸಮಿತಿ, usefund ಗಳಿಂದ ಸಂಗ್ರಹವಾಗುವ ಹಣದಿಂದ ಖಾಸಗಿಯಾಗಿ ಔಷಧಗಳನ್ನು ಖರೀದಿಸಿ ರೋಗಿಗಳಿಗೆ ವಿತರಿಸುತ್ತಿದ್ದಾರೆ. ಇಂತಹ ಖರೀದಿಯೂ ಸುಲೋಚಮ್ಮನಿಗೆ ಭರ್ಜರಿ ಕಮಿಷನನ್ನೇ ತಂದುಕೊಡುತ್ತಿದೆ. ಇತ್ತೀಚಿಗೆ ಇಲಾಖೆಯಿಂದ ಸುಮಾರು 10 ಲಕ್ಷದ ಔಷಧಿ, ಪೀಠೋಪಕರಣಗಳನ್ನು ಆಸ್ಪತ್ರೆಗೆ ಸರಬರಾಜಾದಾಗ ಅದರಲ್ಲಿ ಶೇ. 40 ರಷ್ಟು ಕಮಿಷನ್ ಅನ್ನು ಸುಲೋಚನಾ ಲಪಟಾಯಿಸಿದ್ದಾರೆ ಎನ್ನುವ ವರ್ತಮಾನ ಆಸ್ಪತ್ರೆಯ ಆವರಣದಲ್ಲೇ ಹರಿದಾಡುತ್ತಿದೆ.

ಬೆಳಗ್ಗೆ 11-30ಕ್ಕೆ ಆಸ್ಪತ್ರೆಗೆ ಬರುವ ಇವರು ಸಂಜೆ ನಾಲಕ್ಕಾಗುತ್ತಿದ್ದಂತೆಯೇ ನಾಪತ್ತೆಯಾಗಿಬಿಡುತ್ತಾರೆ. ಇನ್ನು ಆಸ್ಪತ್ರೆಯಲ್ಲಿ ವೈದ್ಯರ ಕೊರತೆ ಇದೆ ಅಂತ



ನೆಪನೀಡಿ ಪಕ್ಕದ ಪ್ರಾಥಮಿಕ ಕೇಂದ್ರಗಳ ವೈದ್ಯರನ್ನು ಕೆಲಸಕ್ಕೆ ನಿಯೋಜಿಸಿಕೊಂಡಿರುವ ಈಕೆ ತಾನು ಕೆಲಸ ಮಾಡುವುದನ್ನೇ ಮರೆತಿದ್ದಾರೆ. ಸಾರ್ವಜನಿಕರ ಎಲ್ಲಾ ಪ್ರಶ್ನೆಗಳಿಗೂ ಪಿ.ಹೆಚ್.ಸಿ. ವೈದ್ಯರ ಕಡೆಗೆ ಕೈ ತೋರಿಸೋದಷ್ಟೆ ಈಕೆಯ ಕಾಯಕವಾಗಿದೆ.

ವೃದ್ಧಾಪ್ಯವೇತನ, ವಿಧವಾ ವೇತನಕ್ಕೆ ವಯಸ್ಸಿನ ದೃಢೀಕರಣಕ್ಕಾಗಿ ಬರುವ ವಯೋವೃದ್ಧರು, ವಿಧವೆಯರ ಪಾಡಂತು ಕೇಳುವುದೇ ಬೇಡ. ಪ್ರತಿಯೊಂದು ದೃಢೀಕರಣಕ್ಕೆ 200 ರಿಂದ 500 ರೂಪಾಯಿ ಫಿಕ್ಸ್ ಮಾಡಿರುವ ಸುಲೋಚನಾ, ಅದನ್ನು ಕಲೆಕ್ಟ್ ಮಾಡಲೆಂದೇ ಗೂಂಗ್ಲಿಬಾಯಿ ಎಂಬ ಮಧ್ಯವರ್ತಿಯನ್ನು ಆಸ್ಪತ್ರೆಯಲ್ಲೇ ಸಾಕಿಕೊಂಡಿದ್ದಾರೆ. ಒಂಚೂರು ಕೈಬಿಚ್ಚಿಕೊಟ್ಟರೆ 65 ವರ್ಷ ತುಂಬದವರಿಗೂ ಸಲೀಸಾಗಿ ವಯೋವೃದ್ಧತೆಯ ದೃಢೀಕರಣಪತ್ರ ಸಿದ್ಧಗೊಳ್ಳುತ್ತೆ, ಇವರ ಈ ದಂಧೆಯಿಂದಾಗಿ ಬೋಗಸ್ ಫಲಾನುಭವಿಗಳು ಹುಟ್ಟಿಕೊಂಡು ಸರ್ಕಾರದ ಕೋಟಿಗಟ್ಟಲೆ ಹಣ ಪೋಲಾಗುತ್ತಿದೆ.

ಸಾಮಾನ್ಯವಾಗಿ ಹೆರಿಗೆಯಾಗಿ ಎರಡು ದಿನ ಆಸ್ಪತ್ರೆಯಲ್ಲಿ ಇರುವ ಬಾಣಂತಿಯರಿಗೆ ಊಟ ಕೊಡುವ ವ್ಯವಸ್ಥೆ ಇದೆ. ಆದರೆ ಕೇವಲ ಒಂದು ದಿನದ ಊಟವನ್ನು ವಿತರಿಸಿ ಎರಡು ದಿನದ ಬಿ ಜಡಿದು ಅಲ್ಲಿಂದಲೂ ಲಕ್ಷಾಂತರ ಹಣ ಲೂಟಿ ಮಾಡುತ್ತಿದ್ದಾರೆ. ಗರ್ಭಿಣಿಯರಿಗೆ, ಬಾಣಂತಿಯರಿಗ ಉಚಿತ ಆಂಬುಲೆನ್ಸ್ ವ್ಯವಸ್ಥೆ ಇದ್ದರೂ ರೆಫರ್ ಅ ರೋಗಿಗಳು ತಾವೇ ವಾಹನದ ಇಂಧನ ವೆಚ್ಚ ಭರಿಸುವ ದುಸ್ಥಿತಿ ಈ ಆಸ್ಪತ್ರೆಗೆ ಬರುವ ರೋಗಿಗಳದ್ದು.

ಡಾಕ್ಟರಮ್ಮನ ಭಾನಗಡಿಗಳ ಬಗ್ಗೆ ಸಾರ್ವಜನಿಕ ದೂರುಗಳು ಕೇಳಿಬಂದರೂ ಇಲಾಖೆ ಈಕೆಯ ವ ಕ್ರಮಕ್ಕೆ ಮುಂದಾಗದಿರುವುದು ಮೇಲಧಿಕಾರಿಗಳ ಮೇಲೆಯೇ ಅನುಮಾನ ಮೂಡುವಂತೆ ಮಾಡಿದೆ. ಹಿಂದೆ ಮಾನವ ಹಕ್ಕುಗಳ ಸೇವಾ ಸಮಿತಿ ಎಷ್ಟೋ ಬಾರಿ ದಾಖಲೆ ಸಮೇತ ಮೇಲಧಿಕಾರಿಗಳಿಗೆ ದೂ ನೀಡಿದೆ. ಆಗೆಲ್ಲ ತಾತ್ವಿಕ ವಿಚಾರಣೆಯಂತಹ ಕಣ್ಣೊರೆಸುವ ತಂತ್ರಮಾಡುವ ಮೇಲಧಿಕಾರಿಗಳು ಆಮೇಲಿಂದ ಅದೇನು ಪ್ರಸಾದ ಸ್ವೀಕರಿಸುತ್ತಾರೊ ತೆಪ್ಪಗಾಗಿಬಿಡುತ್ತಾರೆ. ಸುಲೋಚನಮ್ಮನ ಕಮೀಷನ್ ಡಿ.ಹೆಚ್.ಒ. ಸಾಹೇಬರಿಗೆ ಎಷ್ಟು ಮುಟ್ಟುತ್ತದೆ ಬಲ್ಲವರ್ಯಾರು? ಮೊದಲೇ ವೈದ್ಯರ ಕೊರತೆಯಿಂದ ಹಗರಿಬೊಮ್ಮನಹಳ್ಳಿ ಸೊರಗಿದೆ. ಬಡವರಂತೂ ಖಾಸಗಿ ಆಸ್ಪತ್ರೆಗಳ ಹಾದಿ ತುಳಿಯಲು ಶಕ್ತಿಯಿಲ್ಲ ಸಣ್ಣಪುಟ್ಟ ಕಾಯಿಲೆಗೂ ಗಂಭೀರವಾಗಿ ನರಳಾಡುತ್ತಿದ್ದಾರೆ. ಅಂತಹದ್ದರಲ್ಲಿ ಗಾಯದ ಮೇಲೆ ಬರೆ ಹಾಕಿದಂತೆ ಸಾರ್ವಜನಿಕ ಆಸ್ಪತ್ರೆಗೆ ಸುಲೋಚನಮ್ಮನಂತಹ ಭ್ರಷ್ಟ ವೈದ್ಯೆ ವಕ್ಕರಿಸಿಕೊಂಡಿರೋದು ಜನರ ಕರ್ಮವೇ ಸರಿ. ಜನಪ್ರತಿನಿಧಿಗಳು, ಇಲಾಖೆಯ ಅಧಿಕಾರಿಗಳು ಇನ್ನಾದರೂ ಕಣ್ಣು ತೆರೆಯುತ್ತಾರಾ? ಕಾದು ನೋಡಬೇಕು....


■ವರದಿಗ

ಸಮಾಜ ವಿಜ್ಞಾನದ ಲಘುಬರಹ ದಾಟಿಯ ಪ್ರಬಂಧಗಳ

ಮೈಸೂರಿನ ಹರಿಪ್ರಸಾದ್ ಅವರ 'ರಾಮಂದ್ರ' ಪುಸ್ತಕ ಈಚೆಗೆ ಓದಿ ಮನಸ್ಸಲ್ಲಿ ಗಟ್ಟಿಯಾಗಿ ಸ್ಥಾನ ಪಡೆದ ಕೃತಿ. ಇದರಲ್ಲಿ ದಿನಬದುಕಿನ ಚಿಕ್ಕ ಚಿಕ್ಕ ಸಂಗತಿಗಳೆ ಪ್ರಬಂಧಗಳಾಗಿ ರೂಪಾಂತರಗೊಂಡಿವೆ. ಬರಹದಲ್ಲಿ ನವಿರಾದ ತಾಜಾತನವಿದೆ. ಇಲ್ಲಿನ ಬರಹಗಳನ್ನು ಓದಿಯಾದ ನಂತರ ನನ್ನ ನೆನಪುಗಳು ಪ್ರಬಂಧದ ರೂಪದಲ್ಲಿಯೇ ಎದುರಾಗಿ ನನ್ನನ್ನೆ ಗೇಲಿಮಾಡಿದಂತಹ ಅನುಭವವಾಯಿತು.

'ಹೆಸರೇನೆ ಹುಡುಗಿ' ಪ್ರಬಂಧದಲ್ಲಿ ಮಗಳಿಗೆ ಹೆಸರಿಡುವ ಹಿಂದಿನ ಸ್ವಾರಸ್ಯವನ್ನು ವಿಸ್ತರಿಸುತ್ತಲೇ ಹೆಸರಿಗೆ ಅಂಟಿಕೊಂಡ ನಂಬಿಕೆಯ ಲೋಕವನ್ನು ಅನಾವರಣಗೊಳಿಸುತ್ತಾರೆ. ನಮ್ಮಲ್ಲಿ ಎಂ.ಎಂ.ಕಲ್ಬುರ್ಗಿ ಅವರಿಂದ ಹಿಡಿದು ಈಚಿನವರೆಗೂ ವ್ಯಕ್ತಿನಾಮಗಳ ಕುರಿತ ಸಂಶೋಧನೆಗಳು ನಡೆದಿವೆ. ಈ ಸಂಶೋಧನೆಗಳ ಜಡತೆ ಎಷ್ಟಿದೆಯೆಂದರೆ ಒಂದು ಪುಟದಾಚೆ ಓದಲು ಸಾಧ್ಯವೆ ಇಲ್ಲ, ಆದರೆ ಒಂದು ಹೆಸರಿನ ಹಿಂದಿನ ಆತ್ಮೀಯತೆ ಬೆರಗಿನ ನವಿರು ಭಾವದ ಒತ್ತಾಸೆಗಳು ಬೆರೆತ ಈ ಬರಹ ಹೆಸರಿನ ಸಂಶೋಧನೆಗಳಿಗಂಟಿದ ಜಡತೆಯ ಬಿಗುವನ್ನು ಹಗುರಾಗಿಸುವಂತಿದೆ. ಅಮ್ಮನ ಡಾಕ್ಟರುಗಳು ಪ್ರಬಂಧ ದೇವರ ನಂಬಿಕೆಯನ್ನು ವೈಚಾರಿಕತೆಯಿಂದ





ರಾಮಂದ್ರ ಪ್ರಬಂಧಗಳು
2014, ಪುಟ: 96, ಬೆಲೆ: 80/-
ನಿರಂತರ ಪ್ರಕಾಶನ, ಕಾಂತರಾಜ ಅರಸ್ ...
ಸರಸ್ವತಿ ಪುರಂ, ಮೈಸೂರು-09
ಮೊ:9591824262 lokayatha@gmail.com

ನೋಡುತ್ತಲೇ ಅದರ ಹಿಂದಣ ಚೈತನ್ಯವನ್ನು ನವಿರಾಗಿ ಕಟ್ಟಿಕೊಡುತ್ತದೆ.

ರಾಮಂದ್ರ ಹೆಸರಿನ ಪ್ರಬಂಧ ಹೆಚ್ಚು ಆಪ್ತವಾಗಿದೆ. ಸಾಕ್ಷ್ಯಚಿತ್ರ ನೋಡಿದ ಅನುಭವವಾಗುವಷ್ಟು ಚಿತ್ರವತ್ತಾಗಿದೆ. ಬಾಲ್ಯದ ರಾಮಮಂದಿರವೆಂಬ ಗುಡಿ ಪಡೆದ ಸಾಮುದಾಯಿಕ ಆಯಾಮವನ್ನು ವಿವರಿಸುತ್ತಲೇ ಅದು ಜನಸಮುದಾಯದೊಳಗೆ ಬೆರೆತ ಎಳೆಗಳನ್ನು ತುಂಬಾ ಸೂಕ್ಷ್ಮವಾಗಿ ಕಟ್ಟಿಕೊಟ್ಟಿದ್ದಾರೆ. ಶಾಲೆ, ನಾಟಕದ ತಾಲೀಮು, ಡೈರಿ ಹೀಗೆ ರೂಪಾಂತರಗಳನ್ನು ಹೊಂದುತ್ತಿದ್ದ ಬಾಲ್ಯದಲ್ಲಿ ಕಂಡ ರಾಮಂದ್ರ ಸೌಹಾರ್ದತೆಯ ಸಂಕೇತದಂತಿತ್ತು, ಅದೇ ಊರಿಗೆ ಪ್ರಬಂಧಕಾರರು ಭೇಟಿ ನೀಡಿದಾಗ ಭಾರತ ಪಾಕಿಸ್ತಾನದ ಎದುರುಬದುರು ಕ್ರಿಕೆಟ್ ಪಂದ್ಯಕ್ಕೆ ಜನರು ಪ್ರತಿಕ್ರಿಯಿಸುವ ರೀತಿಯಲ್ಲಿ ಒಡೆದ ಸೌಹಾರ್ದತೆಯನ್ನು ಕಾಣುತ್ತಾರೆ. ಆ ಊರಿನ ಸಾಂಸ್ಕೃತಿಕ ಸಂಗತಿಗಳಲ್ಲಿ ಮುಸ್ಲಿಂ ಕೋಮಿನ ಸಮುದಾಯದ ಗೈರುಹಾಜರಿ ಪ್ರಬಂಧಕಾರರನ್ನು ಕಾಡುವಂತೆ ಓದುಗರನ್ನು ತಾಕುತ್ತದೆ. ಈ ಪ್ರಬಂಧ ಇಡೀ ಕೃತಿಯ ರೂಪಕದಂತಿದೆ.

ಇಲ್ಲಿನ ಪ್ರಬಂಧಗಳಲ್ಲಿ ಹಲವು ಸಮಾನ ಎಳೆಗಳಿವೆ. ಬದಲಾದ ಕಾಲಘಟ್ಟದ ಘಟನಾವಳಿಗಳು ಅದೇ ಘಟನೆಯ ಸಕಲ ಪುರಾತನದ ಜತೆ ತಳಕು ಹಾಕುವಾಗಲೆಲ್ಲಾ ನಗೆಯ ಮಿಂಚನ್ನು ಕಾಣಿಸುವಂತಿದೆ. ಗ್ರಾಮೀಣ ಮತ್ತು ನಗರ ಜೀವನದ ಬದಲಾದ ಕೆಲವು ಸಂಗತಿಗಳು ಸೂಕ್ಷ್ಮವಾಗಿ ಕಾಣಿಸುವಾಗಲೆಲ್ಲಾ ಸಮಾಜವಿಜ್ಞಾನದ ಲಘುಬರಹಗಳಂತೆ ಕಾಣುತ್ತವೆ. ಹಾಗಾಗಿ ಈ ಬರಹಗಳಲ್ಲಿ ಪ್ರಬಂಧ ಪ್ರಕಾರವನ್ನು ಹಿಗ್ಗಿಸುವ ಗುಣವಿದೆ.

ಯಾವುದೋ ಒಂದು ಸಂಗತಿಯ ಸುತ್ತಲೂ ನವಿರುತನವನ್ನು ಹೆಣೆದು ಅಲ್ಲಲ್ಲಿ ನಗುವಿನ ಪಟಾಕಿಗಳನ್ನು ಮರೆಯದಂತೆ ಇಟ್ಟು ಸಿಡಿಸುವ ಮಾದರಿಯೊಂದು ಪ್ರಬಂಧಗಳ ಸಾಮಾನ್ಯಬಂಧವಾಗಿದೆ. ಆದರೆ ಇಲ್ಲಿನ ಕೆಲವು ಪ್ರಬಂಧಗಳಲ್ಲಿ ಹೀಗೆ ನಗುವಿನ ಪಟಾಕಿ ಇಡುವುದನ್ನು ಮರೆತಂತೆ ಕಾಣುತ್ತದೆ. ಕಾರಣ ಈ ನವಿರು ದಾಟಿಯೇ ತುಸು ಗಂಭೀರವಾದಂತೆಯೂ, ಮುಂದುವರಿದು ಅದು ವಿಷಾದದಲ್ಲಿ ಕೊನೆಗೊಂಡಂತೆಯೂ ಕಾಣುತ್ತದೆ. ಇದಕ್ಕೆ ಲೇಖಕರು ಸಾಮಾಜಿಕ ಜೀವಪರತೆಗಾಗಿ ಚಳವಳಿಗಳ ಸಂಗಾತಿಯಾಗಿರುವ ಅನುಭವವೂ ಕಾರಣವಾದಂತಿದೆ.

ಪ್ರಬಂಧಕ್ಕೆ ಆಯ್ಕೆ ಮಾಡಿಕೊಂಡ ಸಂಗತಿಗಳು ಆಯಾ ಲೇಖಕನ ಸಾಮಾಜಿಕ ದೃಷ್ಟಿಕೋನವನ್ನೂ ಒಳ ತುಡಿತವನ್ನೂ ಕಾಣಿಸುತ್ತವೆ. ಅಂತೆಯೇ ಲಘುವಾದ ಸಂಗತಿಗಳನ್ನು ಆಯ್ದು ನಗೆ ಉಕ್ಕಿಸುವ ಕೆಲಸ ಸುಲಭ. ಆದರೆ ಸಾಮಾಜಿಕ ಸಮಸ್ಯೆಯೊಂದನ್ನೋ, ತೀರಾ ಸೂಕ್ಷ್ಮ ವಿಷಯವೊಂದನ್ನೋ ಆಯ್ದುಕೊಂಡು ನವಿರಾಗಿ

ಪುಸ್ತಕ ವಿಮರ್ಶೆ

• ಅರುಣ್ ಜೋಳದಕೂಡ್ಲಿಗಿ

ಹೇಳುವುದು, ನಗು ತರಿಸುವುದು ಕಷ್ಟದ ಕೆಲಸ. ಇಲ್ಲಿನ ಬಹುಪಾಲು ಪ್ರಬಂಧಗಳಲ್ಲಿ ಹರಿಪ್ರಸಾದ್ ಕಷ್ಟವನ್ನು ಅನುಭವಿಸಿದಂತೆ ಕಾಣುತ್ತದೆ. ದೇವನೂ ಪೋಸ್ಟ್, ಬಸವಣ್ಣನಿಂದ ಭಗೀರಥನವರೆಗೆ, ರಾಮ ಮುಂತಾದ ಪ್ರಬಂಧಗಳಲ್ಲಿ ಇದನ್ನು ಕಾಣಬಹುದು

ಎಲ್ಲಾ ಪ್ರಬಂಧಗಳಲ್ಲಿ ಆತ್ಮಕಥಾನಕ ಮಾದರಿ ಎಳೆಯೊಂದು ದಾಟಿ ಹೋಗಿದೆ. ಇದರಿಂದ ಸಹಜವಾಗಿ ಲೇಖಕರ ಬಾಲ್ಯದ ನೆನಪುಗಳು ಪ್ರಬಂಧಗಳಿಗೆ ಕಸುವು ತುಂಬಿವೆ. ಈ ನೆನಪುಗಳು ಎಲ್ಲಿಯೂ ಅಸಹಜ ಎನ್ನಿಸದೆ ಪ್ರಾಮಾಣಿಕವೆನ್ನಿಸು ಕಾರಣಕ್ಕೆ ಈ ಕೃತಿಯ ಓದು ಆಪ್ತವಾಗುತ್ತವೆ. ನ ಮನದ ಮೂಲೆಯಲ್ಲಿ ಧೂಳಿಡಿದ ನೆನಪುಗಳು ಹುಣುಸೆ ನಾರಿನಿಂದ ತಿಕ್ಕಿಯಾದ ನಂತರ ಹೊಳೆ ತಾಮ್ರದ ಗಿಂಡಿಯಂತೆ ಕಾಣುತ್ತವೆ.

ಇಲ್ಲಿನ ಕೆಲವು ಪ್ರಬಂಧಗಳು ಇನ್ನಷ್ಟು ಚೂಪಾಗಬಹುದಿತ್ತು ಅನ್ನಿಸುತ್ತದೆ. ಕೆಲವು ಬರಹ ದಿಢೀರ್ ಮುಗಿದಂತೆಯೂ ಮೊಟುಕಾದಂತೆಯೂ ಕಾಣುತ್ತವೆ. ರಾಮಂದ್ರ ಪ್ರಬಂಧವು ಟೇಕ್‌ಆಫ್ ನಿಧಾನಕ್ಕೆ ಮೇಲೇರುತ್ತಾ ಹೋದಂತಹ ಅನುಭವ ಕಟ್ಟಿಕೊಡುತ್ತದೆ. ಈ ಕ್ರಮವೇ ಈ ಪ್ರಬಂಧದ ಗಾಢತೆಯನ್ನು ಹೆಚ್ಚಿಸುತ್ತಾ ಹೋಗಿ ಓದುವ ಮನ ತನ್ನ ಬೇರುಗಳನ್ನು ಇಳಿಸುತ್ತದೆ. ಈ ಗುಣ ಕೆಲವ ಪ್ರಬಂಧಗಳಲ್ಲಿ ಸಾಧ್ಯವಾಗಿಲ್ಲ, ಬದಲಾಗಿ ಮೂರ್ನಾ ಬರಹಗಳಲ್ಲಿ ತುಂಡು ತುಂಡು ಅನುಭವಗಳನ್ನು ಜೋಡಿಸಿದಂತೆಯೂ, ಅವುಗಳ ಮಧ್ಯೆ ಸಾವಯವ ಸಂಬಂಧ ಕಡಿತವಾದಂತೆಯೂ ಕಾಣುತ್ತದೆ. ಇಂತ ಮಿತಿಗಳನ್ನು ಹರಿಪ್ರಸಾದ್ ಮೀರಲು ಸಾಧ್ಯವಾದ ಪ್ರಬಂಧ ಪ್ರಕಾರವನ್ನು ಹಿಗ್ಗಿಸುವ ಶಕ್ತಿ ಅವರಿಗಿದೆ. ರಾಮಂದ್ರ ಮರುಮುದ್ರಣಕ್ಕೆ ಹೊರಟಿದೆಯಂತೆ, ಅದುವೆ ಈ ಕೃತಿಯ ಜಿಗುಟುತನವನ್ನೂ ತೋರ

...ಡು ಗುರುತಿಸಬೇಕಾದ 'ಹೆಣ್ಣುಹೆಜ್ಜೆ'

...ಗ ಸಾವಿತ್ರಿಯವರ ಪ್ರಯತ್ನದಿಂದ ಪುಟ್ಟಾದ ಹಾಸ್ಟೆಲೊಂದರಲ್ಲಿ ಅಡುಗೆ ...ಸೇರಿಕೊಂಡಿದ್ದಾಳೆ. ಭಿಕ್ಷಾಟನೆಗಿಂತ ಸ್ವಾವಲಂಬಿ ಬದುಕು ಅವಳನ್ನು ...ದೇವತೆಯ ವ್ಯಕ್ತಿತ್ವದಿಂದ ಹೊರತಂದು ನೈಜ ಮಾನವೀಯ ವ್ಯಕ್ತಿತ್ವ

ಧನದಾಹಿ ಗಂಡ

...ವ್ವ ಎಂಬ ಯುವತಿ ವ್ಯವಸಾಯ ಕುಟುಂಬದ ಮುಗ್ಧೆ. ಅಪ್ಪ ...ಅಣ್ಣ ಅಕ್ಕಂದಿರ ಮಧ್ಯೆ ಮುದ್ದಾಗಿ ಬೆಳೆದವಳು. ಪಕ್ಕದ ಊರಿನ ... ಯುವಕನೊಂದಿಗೆ ಮದುವೆಯಾಯಿತು. ಪ್ರಥಮ ರಾತ್ರಿ ಗಂಡ ...ತಿಕೊಂಡು ಮಲಗಿದ. ಶಾರವ್ವ ಅತ್ತೆಯನ್ನು ನಂಬಿದ್ದಳು. ಪ್ರಥಮ ...ಘಟನೆಯನ್ನು ಸೂಚ್ಯವಾಗಿ ತಿಳಿಸಿದಳು. 'ಅದಕ್ಕಾಗಿ ಅಳತಿದಿ ಬಿಡ ...ನೋಡಾಕ ಚಂದ ಅದಿ, ವಯಸ್ಸು ಭಾಳ ಸಣ್ಣದು. ಗಂಡ ಹಂಗ ...ತು' ಎಂದು ಮುಂತಾಗಿ ಹೇಳಿದಳು. ಶಾರವ್ವನಿಗೆ ಇದಾವುದೂ ...ಆಗಲಿಲ್ಲ. ನಾಲ್ಕಾರು ದಿನ ಕಳೆದಿರಬಹುದು. ರಾತ್ರಿ 12 ಗಂಟೆ. ... ಬಡಿದ ಶಬ್ದ. ಗಂಡ ಬಂದಿರಬಹುದೆಂದು ಶಾರವ್ವ ಬಾಗಿಲು ...ಉ ಹೋದಳು. ಆದರೆ ಅತ್ತೆಯೆ ಬಂದು ಬಾಗಿಲು ತೆಗೆದಳು. ...ಂದವನೊಬ್ಬ ಕಾಮುಕ. ಕೋಣೆಯೊಳಗೆ ಎಳೆದುಕೊಂಡು ಹೋಗಿ, ... ಚೀರಾಡದಂತೆ ಬಾಯಿಗೆ ಬಟ್ಟೆ ತುರುಕಿ ಕಾಮತೃಷೆಯನ್ನು ...ಂಡು ಬಿಟ್ಟ! ನಂತರ ಮತ್ತೊಬ್ಬ ಒಳಹೊಕ್ಕ. ಶಾರವ್ವ ಎಚ್ಚರ ... ಎಚ್ಚರಾದಾಗ ಬೆಳಗಾಗಿತ್ತು.

...ಮುದಿನ ಗಂಡ ಗೆಳೆಯರೊಂದಿಗೆ ಕುಡಿದು ಬಂದ. ಗಂಡನ ಕಬಂಧ ...ಳಲ್ಲಿ ಸಿಕ್ಕ ಶಾರವ್ವಳನ್ನು ಆತನ ಗೆಳೆಯರು ಭೋಗಿಸಿದರು. ...ಬತ್ತಿದ್ದಂತೆ ಗಂಡ ಮತ್ತು ಅತ್ತೆ ಬೆತ್ತ ಹಿಡಿದುಕೊಂಡು ನಿಂತಿದ್ದರು. ...ದಿ ನಮ್ಮ ಮನ್ಯಾಗ ಏನೇನ ನಡೀತೈತಿ ಅಂತ ಹೊರಗ ಯಾರಿಗರ ...ಲೇ ಜೀವ ಸಹಿತ ಉಳಿಯಾಂಗಿಲ್ಲ...' ಎಂದು ಹೆದರಿಕೆ ಹಾಕಿದರು.

ಕರಾಳ ದಿನಗಳು

...ಟಿ ತಗುಲಿ ಸುಟ್ಟ ಕಲೆಗಳನ್ನು ಹೊತ್ತುಕೊಂಡಿದ್ದ ಸುಂದರ ಯುವತಿ ...ಳ್ಳ ಮೂಕ ಯುವಕನೊಬ್ಬ ಮದುವೆಯಾಗಲು ಸಿದ್ಧನಾದ. ಮನೆಯವರು ...ಯಿಂದ ಮದುವೆ ಮಾಡಿಕೊಟ್ಟರು. ದಿನಗಳೆದಂತೆ ಆಕೆಯ ಗಂಡ ...ಬರುವುದು ಅಪರೂಪವಾಗತೊಡಗಿತು. ಒಂದು ರಾತ್ರಿ ಗಂಡನ ...ಯುತ್ತ ಲತಾ ಕೋಣೆಯಲ್ಲಿ ಮಲಗಿದ್ದಾಗ, ಮಬ್ಬುಗತ್ತಲಿನಲ್ಲಿ ಒಬ್ಬ ... ಹತ್ತಿರ ಬಂದಂತಾಗಿ, ಯಾರದು ಎಂದು ಗಾಬರಿಯಿಂದ ಚೀರಿದ್ದಾಳೆ. ... ಬಂದಿದ್ದ ವ್ಯಕ್ತಿ ಲತೆಯ ಬಾಯಿಯನ್ನು ಗಟ್ಟಿಯಾಗಿ ಹಿಡಿದು ... ಗದ್ದೆ, ಮನೆ ನಿನ್ನ ಹೆಸರಿಗೆ ಬರೆಯುತ್ತೇನೆ' ಎಂದ. ಅದು ಆಕೆಯ ... ಧ್ವನಿ!

ಹೊಸ ಬಾಳು

...ಥೆ ನೇತ್ರಾ ಮಹಿಳಾ ಸಮಖ್ಯಾ ಸಂಸ್ಥೆಯ ಕಣ್ಣಿಗೆ ಬಿದ್ದಳು. ಕಸ್ತೂರ ...ತಿಶಾಲೆ ಸೇರಿದಳು. ಎಸ್.ಎಸ್.ಎಲ್.ಸಿ ವರೆಗೆ ಓದಿದಳು. ಮೊದಲ ...ಲ್ಲಿ ಪಾಸಾದಳು. ಸಂಸ್ಥೆಯವರು ಕಾಲೇಜಿಗೆ ಕಳುಹಿಸುವ ವ್ಯವಸ್ಥೆ ...ರು. ಆದರೆ ಅವಳ ಅಣ್ಣ ಬಂದು ರಂಪಾಟ ಮಾಡಿ ಕರೆದುಕೊಂಡು ... 15ನೇ ವಯಸ್ಸಿಗೆ ಮದುವೆ ಮಾಡಿಸಿದ. ಮದುವೆಯಾದ 15 ...ಲ್ಲಿ ಗಂಡನಾದವನು ಮಹಾರಾಷ್ಟ್ರಕ್ಕೆ ದುಡಿಯಲೆಂದು ಗುಳೆ ಹೋದ. ...ಣದತ್ತಿನಂತೆ ದುಡಿಯುತ್ತಲೇ ಹೊಲಿಗೆ ಕಲಿತು ಮನೆಯ ಖರ್ಚನ್ನು ...ಸತೊಡಗಿದಳು. ಆರು ವರ್ಷಗಳ ನಂತರ ನೇತ್ರಾಳ ಗಂಡ ಬರಿಗೈಲಿ ...ಮರಳಿದ. ದುಡಿಯದೆ ಅವಳ ಸಂಪಾದನೆಯಲ್ಲೇ ದಿನ ನೂಕಿದ. ...ವನ ದೈನಂದಿನ ಕ್ರಿಯೆಯಾಗಿತ್ತು. ಮುಂದೊಂದು ದಿನ ಗೊತ್ತಾಯಿತು, ...ಚ್.ಐ.ವಿಗೆ ಬಲಿಯಾಗಿದ್ದಾನೆ ಎಂಬುದು! ಇಷ್ಟೆಲ್ಲ ಇದ್ದರೂ ನೇತ್ರಾಗೆ ...ಹಿಂಸೆ ತಪ್ಪಲಿಲ್ಲ. ಕೊನೆಗೆ ಒಂಟಿಯಾಗಿ ಬದುಕಲು ಪೊಲೀಸ್ ...ಸಹಾಯ ಪಡೆಯಬೇಕಾಯಿತು.


... ಗಂಡನಿಂದ ಅಂಟಿಸಿಕೊಂಡಿದ್ದ ಎಚ್.ಐ.ವಿ. ಚಿಕಿತ್ಸೆಗಾಗಿ ನೇತ್ರಾ ...ಹೋಗುವಾಗ ಅಲ್ಲೊಬ್ಬ ರಘುರಾಮ ಎಂಬ ನತದೃಷ್ಟ ಸಿಕ್ಕ. ಆತ ...ರಡತಿಯಿಂದಾಗಿ ಎಚ್.ಐ.ವಿ. ಕಾಯಿಲೆ ಅಂಟಿಸಿಕೊಂಡಿದ್ದ. ಆದೇ ...ಯಿಂದ ಹೆಂಡತಿ ಸತ್ತಿದ್ದಳು. ಹುಟ್ಟ ಮಗುವನ್ನು ನೋಡಿಕೊಳ್ಳುವ ...ತಿ ಇತ್ತು. ಈ ಇಬ್ಬರೂ ಸಮದುಃಖಿಗಳು ಒಟ್ಟಾಗಿ ಬಾಳಲು ...ದರು. ನೇತ್ರಾ ಆ ಮಗುವಿಗೆ ಅಕ್ಕರೆಯ ತಾಯಿಯಾದಳು.

ಕಲೆಯ ಬಲೆ

...ಗಳೂರಿನ ಕುಮಾರಕೃಪಾ ರಸ್ತೆಗುಂಟ ಚಿತ್ರಸಂತೆ ನಡೆಯುವ ವೇಳೆ ...ಯೊಬ್ಬಳು ಬಂದು ಸಾವಿತ್ರಿಯವರನ್ನು ಮಾತನಾಡಿಸಿದಳು. ಹಿಂದೆ ...ಯಲ್ಲಿ ನೋಡಿದ್ದಳಂತೆ. 'ಮೇಡಂ ನನಗೆ 200 ರೂಪಾಯಿ ಕೊಡಿ; ...ಲೆ ಹುಟ್ಟಿಸುತ್ತೇನೆ' ಎಂದಳು. ವಾಪಸ್ ಕೊಡಬೇಡ ಎಂದು 200 ...ಉ ಅವಳ ಕೈಗಿತ್ತ ಸಾವಿತ್ರಿ, ಅವಳು ಕಂಗಾಲಾದುದನ್ನು ಗಮನಿಸಿ ...ಹೋಟೆಲ್‌ಗೆ ಊಟಕ್ಕೆ ಕರೆದುಕೊಂಡು ಹೋದಳು.

... ರೋಗದಿಂದ ತಂದೆತಾಯಿಯನ್ನು ಕಳೆದುಕೊಂಡ ಆ ಯುವತಿ ...ನ್ನು ಒಬ್ಬ ಮಹಿಳೆ ಕೆಲಸ ಕೊಡಿಸುವುದಾಗಿ ಹೇಳಿ ಬೆಂಗಳೂರಿಗೆ ...ಂಡು ಬಂದು ಮುದುಕಿಯೊಬ್ಬಳ ಗುಡಿಸಲಿನಲ್ಲಿ ಇರುವ ವ್ಯವಸ್ಥೆ ...ಳು. ಆ ಮುದುಕಿ ಚಿತ್ರಕಲಾ ಶಾಲೆಯೊಂದರ ಮುಖ್ಯಸ್ಥನಿಗೆ ...ಳು.

...ಸಿದ, ಮೇಲೆ ದೊಡ್ಡ ಟೇಬಲ್. ಅದರ ಮೇಲೆ ಕುಳ್ಳಿರಿಸಿ ಬಿಳಿಬಟ್ಟೆ



ಬೇಗ ಬಟ್ಟೆ ಬಿಚ್ಚಮ್ಮ ಕ್ಲಾಸಿಗೆ ಹೊತ್ತಾಗ್ತದೆ ಎಂದು ಮುಖ್ಯಸ್ಥ ಹೇಳಿದ. ಆಕೆಯ ಕುಪ್ಪುಸದ ಗುಂಡಿಗಳನ್ನು ಬಿಚ್ಚತೊಡಗಿದ. ಪಾರವ್ವ ತಲೆಯನ್ನು ಕಾಲುಗಳಲ್ಲಿ ಸಿಲುಕಿಸಿ, ಎರಡೂ ಕೈಗಳಿಂದ ಕಾಲುಗಳನ್ನು ಬಿಗಿದುಕೊಂಡು ಕುಳಿತಳು. ಕಲಾವಿದರೆಲ್ಲ ನಕ್ಕರು. 'ಇಂಥ ಚಿತ್ರ ತೆಗೆಯೋದು ಹೆಂಗರೀ ಸರ್' ಎಂದು ಒಬ್ಬ ಕಿಚಾಯಿಸಿದ. ಮುಖ್ಯಸ್ಥ ಹಾಗೂಹೀಗೂ ಸರಿಯಾಗಿ ಕೂಡಿಸಿದ. ಎರಡೂ ಕೈಗಳನ್ನು ಒಂದು ಕೋನದಲ್ಲಿ ಬಾಗಿಸಿ ತುಂಬಿದೆದೆ ಮುಂದೆ ಬರುವಂತೆ ಸರಿಪಡಿಸಿದ. 'ಡೌನ್ ಪೋರ್ಷನ್ ಸರಿಯಾಗಿ ಫೋಕಸ್ ಆಗುತ್ತಿಲ್ಲ ಸರ್' ಎಂಬ ಮತ್ತೊಬ್ಬ ಕಲಾವಿದನ ಆಕ್ಷೇಪಣೆಗೆ ಉತ್ತರವಾಗಿ ಮುಖ್ಯಸ್ಥ ಪಾರವ್ವನ ಎರಡೂ ತೊಡೆಗಳನ್ನು ಅಗಲವಾಗಿಸಿದ. ಈಗ ಪಾರವ್ವನಿಗೆ ಜೀವವೇ ಹೋದಂತಾಯಿತು. 'ಸ್ವಲ್ಪ ನಗಬೇಕು' ಎಂಬ ಮುಖ್ಯಸ್ಥನ ಸೂಚನೆಯಂತೆ ಕೃತಕ ನಗೆ ಬೀರಿದಳು.

ಅವನು

ಸಾವಿತ್ರಿ ಬಸ್ ಹತ್ತಿ ಹುಲಗಿಯ ಕಡೆಗೆ ಹೋಗುವ ಸಂದರ್ಭದಲ್ಲಿ ಪಕ್ಕದಲ್ಲೊಬ್ಬ ಜೋಗಪ್ಪ ಬಂದು ಕುಳಿತ. ಆತನ ಸಜ್ಜನಿಕೆಯಿಂದಾಗಿ ಸಾವಿತ್ರಿಗೆ ಆತನ ಜೊತೆ ಮಾತನಾಡಲು ಸಾಧ್ಯವಾಯಿತು. ಗಂಡಾಗಿ ಅಥವಾ ಹೆಣ್ಣಾಗಿ ಬದುಕಲಿಕ್ಕಾಗದ ಜೋಗಪ್ಪನ ಬದುಕನ್ನು ಅರಿತುಕೊಳ್ಳುವ ಕುತೂಹಲದಿಂದ 'ಏಕೆ ಜೋಗಪ್ಪ ಆದ್ರಿ' ಎಂದು ಕೇಳಿದರು.

ಜೋಗಪ್ಪನ ಮೂಲ ಹೆಸರು ಪರಶುರಾಮ. ಹುಲಗಿಯಿಂದ 100 ಕಿ.ಮೀ. ದೂರದ ಹಳ್ಳಿಯ ಬಡವ. ಬಾಲ್ಯದಲ್ಲಿ ಪಕ್ಕದ ಮನೆಯ ಅತ್ತೆಯ ಮಗಳು ನಿಂಗಿಯ ಜೊತೆ ಅನ್ಯೋನ್ಯವಾಗಿದ್ದ. ಒಂದು ಸಲ ಹಳ್ಳಿಯಲ್ಲಿ 'ಗಿರಿಜಾಕಲ್ಯಾಣ' ದೊಡ್ಡಾಟ ಆಡಲಾಯಿತು. ಅದರಲ್ಲಿ ಪರಶುರಾಮ ರತಿಯ ಪಾತ್ರ ಮಾಡಿದ್ದ. ಹಳ್ಳಿಗರೆಲ್ಲ ಆತನ ಕಲೆಗೆ ಮೆಚ್ಚಿದರು. ಮುಂದೆ ನಡೆದ ಹಳ್ಳಿಯ ನಾಟಕಗಳಲ್ಲಿ ಆತನಿಗೊಂದು ಹೆಣ್ಣು ಪಾತ್ರ ಮೀಸಲಾಗಿರುತ್ತಿತ್ತು. ಮುಂದೊಂದು ದಿನ ಹುಲಿಗೆಮ್ಮನ ಒಕ್ಕಲದವರೊಬ್ಬರು ಪರಶುರಾಮನ ತಾಯಿಯ ಮುಂದೆ ಪ್ರಸ್ತಾಪವೊಂದನ್ನು ಇಟ್ಟರು. 'ನಿನ್ನ ಮಗಾ ಛಲೋ ಕುಣಿತಾನ, ಹೆಣ್ಣು ಪಾತ್ರಾನೂ ಛಲೋ ಮಾಡತಾನ. ಸೀರಿ, ಕುಬಸಾ ಅವಂಗ ಭಾಳ ಛಲೋ ಒಪ್ಪತೈತಿ. ಅದಕ ನಮ್ಮ ಊರ ಪತಿಯಿಂದ ಅವನ್ನ ಹುಲಿಗೆಮ್ಮಗ ಬಿಟ್ರ ಛಲೋ ಆಗತೈತಿ' ಎಂದರಂತೆ. 'ಹಂಗ ಅನ್ನಬ್ಯಾಡ್ರಿ. ಪರಸ ನನಗೆ ಒಬ್ಬನ ಮಗ' ಎಂದು ಮನೆಗೆ ಬಂದಳಂತೆ.

ಐದಾರು ತಿಂಗಳ ನಂತರ ಪರಶುರಾಮನಿಗೆ ಹೊಟ್ಟೆ ನೋವು. ಪರಶುರಾಮನ ತಾಯಿ ಜ್ಯೋತಿಷಿಯ ಬಳಿ ಹೋದಳು. 'ಇದು ದೇವಿಯ ಕಾಟ. ದೇವಿ ಅವನನ್ನು ಬೇಡುತ್ತಾಳೆ. ಇಲ್ಲದಿದ್ದರೆ ನಿಮ್ಮ ಮನೆ ನಾಶವಾಗುವುದು' ಎಂದು ಜ್ಯೋತಿಷಿ ಅಂಜಿಸಿದ.

ಒಂದು ಹುಣ್ಣಿಮೆ ದಿವಸ ಊರಿಗೆ ಊರೇ ಸಂಭ್ರಮದಲ್ಲಿತ್ತು. ಎಲ್ಲರೂ ಸೇರಿ ಹುಲಿಗಿಗೆ ಬಂದರು. ವಿಧಿವಿಧಾನಗಳಿಂದ ಪರಶುರಾಮನನ್ನು ದೇವಿಗೆ ಒಪ್ಪಿಸಿಬಿಟ್ಟರು. ಸೀರೆಯುಡಿಸಿ, ಕುಪ್ಪಸ ತೊಡಿಸಿ, ತಲೆಯ ಮೇಲೆ ದೇವಿಯ ಜುಗ ಹೊರಿಸಿ ಕೈಯಲ್ಲಿ ಪಡ್ಲಿಗೆ ಕೊಟ್ಟರು. ಪರಶುರಾಮನ ತಾಯಿ ಮಗನನ್ನು ತಬ್ಬಿ ಅಳುತ್ತ ನೆಲಕ್ಕುರುಳಿದಳು.

ವೈವಿಧ್ಯಮಯ ಸಂಕಟ

ಮಗಳನ್ನು ವೇಶ್ಯಾವಾಟಿಕೆಗೆ ಎಳೆಯುವ ತಾಯಿ. ಮಗುವಿಗಾಗಿ ತನ್ನ ಜೀವವನ್ನೇ ಬಲಿ ಕೊಡುವ ತಾಯಿ. ಏಡ್ಸ್ ರೋಗಿಗಳಿಂದ ಕೂಡಿದ ಹಳ್ಳಿ. ದೇವದಾಸಿಯರ ದುರಂತ ಕಥೆಗಳು. ನಿಧಿ ದುರಾಸೆಯಿಂದ ಬೀದಿಗೆ ಬೀಳುವ ಕುಟುಂಬ. ಮಾನಸಿಕ ಅಸ್ವಸ್ಥಳನ್ನೂ ಬಿಡದ ಕಾಮುಕರು. ಅಂಗನವಾಡಿ ಕಾರ್ಯಕರ್ತೆಯ ದಾರುಣ ಬದುಕು. ವೃದ್ಧೆಯ ಮೇಲೂ ಅತ್ಯಾಚಾರ ಮಾಡಿದ ಕೂನಿ. ಉಪನ್ಯಾಸಕನಿಂದ ಏಡ್ಸ್ ಪಡೆದ ವಿದ್ಯಾರ್ಥಿನಿ. ಮೈದುನನ ಜೊತೆ ಮಲಗಲು ಹೇಳುವ ಅತ್ತೆ. ಸಬೀದಾಳ್ವೂರ್ ಹುಟ್ಟಿಸಿದ 'ಬೀಕರಿಯಿಂ... ಬೆಂದ ವನಜಳ ಬದುಕು.' ಎರಡನೇ ಹೆಂಡತಿಯಾಗಿ ಕಷ್ಟ ಅನುಭವಿಸಿದ ಹುಲಿಗೆಮ್ಮ. ಮರಳು ದಂಧೆಯ ಕೂಲಿ ಮಹಿಳೆಯರು. ಬಾಲ್ಯವಿವಾಹದ ಬವಣೆ ಮುಂತಾದ ಘಟನೆಗಳು ನಮ್ಮನ್ನು ವಿಚಲಿತಗೊಳಿಸಿ ನಮ್ಮ ಮಾನವೀಯತೆಯನ್ನು ಪ್ರಶ್ನಿಸುತ್ತ ನಾಗರಿಕತೆಗೆ ಸವಾಲು ಎಸೆಯುತ್ತಲೇ ಇರುತ್ತವೆ.


'ಯೋಧನ ಬಲಿದಾನ - ತಾಯಿಯ ರೋದನ' ಘಟನೆಯಲ್ಲಿ ತಾಯಿ ಹೇಳುವ ಮಾತು ಎಂಥವರನ್ನೂ ಧೃತಿಗೆಡಿಸುತ್ತದೆ. ಯುದ್ಧ ಎಂದರೆ ಮಗನಿಲ್ಲದ ತಾಯಿ. ಗಂಡನನ್ನು ಕಳೆದುಕೊಂಡ ವಿಧವೆ. ಸಹೋದರರನ್ನು ಕಳೆದುಕೊಂಡ ಸಹೋದರಿಯರು ಎಂಬ ಮಾತು ಸತ್ಯ. ಇದ್ದೊಬ್ಬ ಮಗ ಮಾಂತಯ್ಯ ಬಡತನದ ಬೇಗೆಯಲ್ಲಿ ಬೆಳೆದು ಕೊನೆಗೆ ಮಿಲಿಟರಿ ಸೇರಿದ. ಮುಂದೆ ಭಾರತ-ಪಾಕ್ ಯುದ್ಧದಲ್ಲಿ ಮಡಿದ. ಹುತಾತ್ಮನಾದ ವೀರಯೋಧನ ಪಾರ್ಥಿವ ಶರೀರವನ್ನು ಆತನ ಹಳ್ಳಿಗೆ ತರಲಾಯಿತು. ಊರಿಗೆ ಊರೇ ನೆರೆದಿತ್ತು. ಸರ್ಕಾರಿ ಗೌರವದೊಂದಿಗೆ ಸಮಾಧಿಯಾಯಿತು. ಹುತಾತ್ಮರ ದಿನಾಚರಣೆಯಂದು ಸಾವಿತ್ರಿಯವರು ಗಂಗಮ್ಮನ ಮನೆಗೆ ಹೋದರು. ಹುತಾತ್ಮನ ತಾಯಿ ಗಂಗಮ್ಮ ಬಿಕ್ಕಿಬಿಕ್ಕಿ ಅತ್ತಳು. ನಿನ್ನ ಮಗ ಭಾರತಾಂಬೆಯ ವೀರಪುತ್ರ ಅಳಬೇಡ ಎಂದು ಹೇಳಿದ್ದಕ್ಕೆ ಆ ತಾಯಿ ಅಂದಳು: ಭಾರತಾಂಬೆಗೆ ಕೋಟಿ ಕೋಟಿ ಮಕ್ಕಳು. ಆದರೆ ನನಗಾರಿದ್ದಾರೆ?

'ಮಗ ಮಠಾಧೀಶ – ತಾಯಿಗೆ ಸಂಕಟ - ಊರಿಗೆ ಸಂಭ್ರಮ' ಘಟನೆ ನಮ್ಮ ಹುಸಿ ಧಾರ್ಮಿಕತೆಗೆ ಹಿಡಿದ ಕನ್ನಡಿಯಾಗಿದೆ. ಗುರುವರ್ಗಕ್ಕೆ ಸೇರಿದ ಮಠವೊಂದಕ್ಕೆ ಸಂಬಂಧಿಸಿದ ವೀರಯ್ಯನವರು ಪತ್ನಿ ಶಿವಮ್ಮ, ಮಗ ಮತ್ತು ಮಗಳೊಂದಿಗೆ ನೆಮ್ಮದಿಯ ಜೀವನ ಸಾಗಿಸುತ್ತಿದ್ದರು. ಮಠದ ಆಸ್ತಿ ಮತ್ತು ನೂರಾರು ಎಕರೆ ಜಮೀನು ಈ ಮನೆತನದವರ ಹೆಸರಿನಲ್ಲಿತ್ತು. ಹಳ್ಳಿಯ ಪುಢಾರಿಗಳ ಬಾಯಲ್ಲಿ ಈ ಮಠದ ಚರ್ಚೆ ಆರಂಭವಾಯಿತು. ಈ ಮಠಕ್ಕೆ ಟ್ರಸ್ಟ್ ಮಾಡಿ, ತಾವು ಟ್ರಸ್ಟಿಗಳಾಗಿ ಆಸ್ತಿಯನ್ನು ಕಬಳಿಸುವ ಯೋಜನೆ ರೂಪಿಸಿದರು. ಕೋರ್ಟಿಗೆ ಹೋದರೂ ವೀರಯ್ಯನವರಿಗೆ ನ್ಯಾಯ ಸಿಗುವ ಭರವಸೆ ಕಾಣದಾಯಿತು. ಮಠಾಧೀಶರ ಹೆಸರಿನಲ್ಲಿ ಆಸ್ತಿ ಇದ್ದರೆ ಅದನ್ನು ಟ್ರಸ್ಟ್‌ಗೆ ವಹಿಸಿಕೊಡಬೇಕಿಲ್ಲ ಎಂದು ದೊಡ್ಡ ಮಠದ ಮಠಾಧೀಶರೊಬ್ಬರು ವೀರಯ್ಯನವರಿಗೆ ಸಲಹೆ ಮಾಡಿದರು.

ಒಂದು ದಿನ ಊರ ಹಿರಿಯರೆಲ್ಲ ಸಭೆ ಸೇರಿದರು. 'ಈ ಮಠಕ್ಕೆ ಸ್ವಾಮಿ ಇಲ್ಲ, ಆದ್ದರಿಂದ ಮಠದ ಉಸ್ತುವಾರಿಗೆ ಒಂದು ಟ್ರಸ್ಟ್ ಬೇಕು' ಎಂಬುದು ಸಭೆಯ ಅಭಿಪ್ರಾಯವಾಯಿತು. 'ಈ ಮಠಕ್ಕೆ ಉತ್ತರಾಧಿಕಾರಿಯಾಗಿ ಮತ್ತು ಮರಿಸ್ವಾಮಿಯಾಗಿ ನನ್ನ ಮಗನನ್ನೇ ಬಿಡುತ್ತೇನೆ' ಎಂದು ವೀರಯ್ಯನವರು ಘೋಷಿಸಿದರು. ಟ್ರಸ್ಟಿಗಳಾಗುವವರು ನಿರಾಶರಾದರು. ಊರಜನ ಚಪ್ಪಾಳೆ ತಟ್ಟಿದರು. ಸಂಸ್ಕೃತ ಕಲಿಯಲು ಮತ್ತು ಸ್ವಾಮೀಜಿಯಾಗಲು ವೀರಯ್ಯನವರ ಮಗನನ್ನು ವಿದ್ಯಾಭ್ಯಾಸಕ್ಕಾಗಿ ಕಾಶಿಗೆ ಕಳುಹಿಸಲು ಸಭೆ ನಿರ್ಧರಿಸಿತು.


ಪುಟ್ಟ ಮಗು ಶಿವಯೋಗಿಯನ್ನು ಕಾಶಿಗೆ ಕಳುಹಿಸಲು ಊರ ಜನರು ಸ್ಟೇಷನ್‌ಗೆ ಬಂದಿದ್ದರು. ಏನೂ ತಿಳಿಯದ ಶಿವಯೋಗಿ ಅಪ್ಪನ ತೊಡೆಯ ಮೇಲೆ ಕುಳಿತು ರೈಲಿನಲ್ಲಿ ಪ್ರಯಾಣ ಮಾಡುವ ಸಂಭ್ರಮದಲ್ಲಿದ್ದ. ಶಿವಮ್ಮ ಹತಾಶಳಾಗಿದ್ದಳು.

ಇಂಥ 30 ಘಟನೆಗಳನ್ನು ಓದುತ್ತ ಹೋದಂತೆಲ್ಲ ನಾವು ಎಂಥ ಅಸಹ್ಯ ವ್ಯವಸ್ಥೆಯಲ್ಲಿ ಇದ್ದೇವೆ ಎಂಬುದರ ಅರಿವಾಗುವುದು. ಯಾವುದು ದೇಸೀಯತೆ? ಯಾವುದು ಸ್ಥಳೀಯತೆ? ಯಾವುದು ಬೆಳವಣಿಗೆ? ಎಂಬೆಲ್ಲ ಪ್ರಶ್ನೆಗಳು ನಮ್ಮೊಳಗೇ ಹುಟ್ಟತೊಡಗುವವು. ಇವುಗಳ ಜೊತೆ ಹೃದಯ ಕಲಕುವ ಇನ್ನೂ ಅನೇಕ ಘಟನೆಗಳನ್ನು ಕೂಡ ಸಂಪೂರ್ಣ ಓದಿ ನೋವು ಮತ್ತು ವಿಷಾದವನ್ನು ಅನುಭವಿಸಿದಾಗ ಮಾತ್ರ ನಿಜಮಾನವರಾಗುವ ಭರವಸೆ ಮೂಡಲು ಸಾಧ್ಯ.



■ ರಂಜಾನ್ ದರ್ಗಾ

ವಾಸನೆಗಳ ನೆನಪುಗಳು ಮತ್ತು ರಸಾಯನಿಕತೆ



ಈಗಾಗಲೇ ಮಾವಿನ ಹಣ್ಣಿನ ಕಾಲ ಮುಗಿಯುತ್ತಾ ಬಂತು. ಮಾರುಕಟ್ಟೆಯಲ್ಲಿನ ಹಣ್ಣಿನ ರಾಶಿಯಲ್ಲಿ ಆರಿಸಿಕೊಳ್ಳುವಾಗ ಬೇಕಾದ ಹಣ್ಣನ್ನು ಮೂಸಿ ನೋಡಿ ಮಾಗಿರುವ ಬಗ್ಗೆ ಹಾಗು ಸಿಹಿಯಾಗಿರುವ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು ತೀರ ಸಹಜ ಅಲ್ಲವೇ? ಬರೀ ಮಾವಿನ ಹಣ್ಣು ಅಷ್ಟೇ ಅಲ್ಲ, ಈ ಬಗೆಯ ಪರಿಮಳದಿಂದ ಹಲವಾರು ನಿರ್ಧಾರಗಳನ್ನೂ ತೆಗೆದುಕೊಳ್ಳುತ್ತೇವೆ. ಅಷ್ಟೇಕೆ ನಿಮ್ಮ ಗೆಳೆಯ/ಗೆಳತಿಯರ ಮನೆಗೆ ಹೋದಾಗ ಹಲಸಿನ ಹಣ್ಣಿನ ವಾಸನೆ ಬಂದೊಡನೆಯೇ "ಏನು? ಹಲಸಿನ ಪರಿಮಳ" ಎನ್ನುತ್ತೇವೆ. ಅದು ಬಿಡಿ ಊಟಕ್ಕೆ ಕುಳಿತಾಗಲೂ ಇದರಲ್ಲಿ ಬೆಳ್ಳುಳ್ಳಿ ಇದೆ ಅಂತಲೋ ಅಥವಾ ಇಂಗಿನ ವಾಸನೆ ಅಂತಲೋ ನೋಡದೆಯೇ ಹೇಳುತ್ತೇವೆ. ಆಕಸ್ಮಾತ್ ಮನೆಯಲ್ಲಿ ಮರೆತು ಹಾಲೋ ಮೊಸರನ್ನೋ ಇಟ್ಟು ಹೊರಹೋಗಿ ಒಂದೆರಡು ದಿನ ಬಿಟ್ಟು ಬಂದ ಕೂಡಲೇ ವಾಸನೆಯಿಂದಲೇ ಮರೆತುಹೋದ ಘಟನೆ ನೆನಪಾಗುತ್ತದೆ. ಹೀಗೆ ಹಲವಾರು ಸಂಗತಿಗಳು ಕೇವಲ ವಾಸನೆಯ ಅನುಭವದಿಂದಲೇ ನೆನಪುಗಳಿಗೆ ಜಾರುವ ಅಥವಾ ಅದೇನೆಂದು ಪತ್ತೆ ಹಚ್ಚುವ ಬಗೆಗೆ ನಮ್ಮ ಅನುಭವಗಳು ಹತ್ತಾರು.


ಅಡುಗೆ ಮನೆಯಲ್ಲಿಯೂ ಅಥವಾ ಪ್ರಯೋಗಾಲಯದಲ್ಲೂ ಈ ವಾಸನೆಯ ಗ್ರಹಿಕೆಯಿಂದ ವಸ್ತುಗಳ ಪತ್ತೆ ಹಚ್ಚುವಿಕೆ ಹಾಗೂ ತಾಜಾತನದ ಅರಿವಿಗೂ ನೆನಪು ಸಹಾಯ ಮಾಡುತ್ತದೆ. ನೆನಪಿನ ನಕ್ಷೆಯನ್ನು ಮನಸ್ಸಿನ ಪುಟಗಳಲ್ಲಿಟ್ಟು ಅದಕ್ಕೆ ವಾಸನೆಯ ಸಮೀಕರಣದಿಂದ ಗುರುತಿಸುವ ಜಾಣತನವನ್ನು ನಾವೇಕೆ, ಅನೇಕ ಪ್ರಾಣಿಗಳೂ ಬಳಸುತ್ತವೆ. ನಾಯಿಗಳಂತೂ ತಮ್ಮ ಪೊಲೀಸ್ ಕೆಲಸಕ್ಕೂ ವಾಸನೆಯ ನೆನಪನ್ನೇ ಒಂದು ಕ್ವಾಲಿಫಿಕೇಶನ್ ಆಗಿ ಬಳಸುತ್ತವೆ. ಅದಕ್ಕೆ ಅವಕ್ಕೆ ತರಬೇತಿಯೂ ಇದೆ. ಹೀಗೆ ವಾಸನೆಯು ಹತ್ತು ಹಲವು ಕೆಲಸಗಳನ್ನು ಜಾರಿಗೊಳಿಸುತ್ತದೆ. ಅಂದರೆ ಪರಿಮಳವು ಗಾಳಿಯಂತೆ ಏನೋ ಎಂಬ ಭಾವ ಬರುವುದೂ ನಿಜವೆ! ಅದು ನಮ್ಮ ಮಂಡಲವನ್ನೂ ವ್ಯಾಪಿಸಿ ನಮ್ಮನ್ನು ಕ್ರಿಯಾಶೀಲವಾಗಿ ಇರುವಂತೆಯೂ ಮಾಡುತ್ತದೆ. ಇದೆಲ್ಲಾ ಮೂಗಿನ ಕೆಲಸ, ಮುಖಕ್ಕೆ ಕಣ್ಣುಗಳ ಜತೆಗೆ ಮೂಗೂ ಸೇರದಿದ್ದರೆ ಮುಖದ ಅಂದ ಹೆಚ್ಚಲಾರದು. ಅದಕ್ಕಿಂತ ಹೆಚ್ಚಿನ ಸಂಗತಿಗಳು ಮೂಗಿನ ಕೆಲಸದಲ್ಲಿವೆ. ಮೂಗು ಕೇವಲ ನಮ್ಮ ಶ್ವಾಸಕೋಶಗಳಿಗೆ ಗಾಳಿಯನ್ನು ತಳ್ಳುವ ಕೆಲಸದ ಜತೆಗೆ ಮೆದುಳಿಗೂ ಒಳಹೊಕ್ಕು ಜೈವಿಕ ಪರಂಪರೆಯನ್ನು ಜಾಣತನಕ್ಕೆ ಬೆಸೆದಿದೆ.

ನಮ್ಮ ಮೆದುಳು ವಾಸನೆಯನ್ನು ನೆನಪಿಗೆ ಸೇರಿಸುವ ಕ್ರಿಯೆಯನ್ನು ವಿಶೇಷ ನರತಂತುಗಳು ಮಾಡುತ್ತವೆ. ಅದಕ್ಕೆಂದೇ ಮೆದುಳಿನಲ್ಲಿ ಅಲೆಯ ರೂಪದಲ್ಲಿ ವಾಸನೆಯ ಗ್ರಹಿಕೆಯು ನೆನಪಾಗಿ ಸೇರುತ್ತದೆ, ಅಲ್ಲಿಯೇ ಉಳಿಯುತ್ತದೆ. ಸಾಮಾನ್ಯವಾಗಿ ನಾವು ಮೂಸಿದ ಕ್ಷಣವೇ ಮೂಗಿನ ಮೇಲೆಯೇ ಇರುವ ಘ್ರಾಣಿಸುವ ನರಗಳು ಸಿಗ್ನಲ್‌ಗಳನ್ನು ಹೊರಡಿಸುತ್ತವೆ; ಅವು ಮೆದುಳಿಗೆ ಸಂದೇಶಗಳನ್ನು ತಲುಪಿಸುತ್ತವೆ. ಅವು ಮೊದಲು ಘ್ರಾಣಿಸುವ ಬಲ್ಬನ್ನು ತಲುಪುತ್ತವೆ. ಅಲ್ಲಿಂದ ಸಂದೇಶವು ಮೆದುಳಿನಲ್ಲಿನ ಲಿಂಬಿಕ್ ವ್ಯವಸ್ಥೆಯಲ್ಲಿನ ನೆನಪಿನ ಸಂಗತಿಯ ನಕ್ಷೆಗೆ ಸಾಗಿಸುತ್ತವೆ. ಹೇಗೆಂದರೆ ನಿಮ್ಮ ಮೂಗಿನ ವಾಸನೆಯಲ್ಲಿನ ಸಿಗ್ನಲ್‌ಗಳು ಒಂದು ರೀತಿಯಲ್ಲಿ ಆರ್ಕೆಸ್ಟ್ರಾ ಮಾದರಿಯ ಸ್ವರಮೇಳದಂತೆ ಮೆದುಳನ್ನು ತಲುಪಿ ನೆನಪುಗಳಾಗಿ ಬದಲಾಗುತ್ತವೆ. ಮೆದುಳಿನ ಈ ಲಿಂಬಿಕ್ ವ್ಯವಸ್ಥೆಯು ಕೆಲವು ವಿಶೇಷ ರಚನೆಗಳನ್ನು ಒಳಗೊಂಡಿದೆ. ಈ ರಚನೆಗಳೇ ನೆನಪುಗಳ ಭಾವನಾ ಪ್ರಪಂಚಕ್ಕೂ ಕಾರಣ ಎಂದು ಊಹಿಸಲಾಗಿದೆ. ನಮ್ಮ ವರ್ತನೆಗಳು, ನೆನಪಿನ ಸಂಗತಿಗಳು ಇತ್ಯಾದಿಗಳನ್ನು ಈ ರಚನೆಯ ಕಾರ್ಯವೈಖರಿಯು ನಿರ್ಧರಿಸುತ್ತದೆ. ಅಂದಂತೆ ವಿಕಾಸದಲ್ಲಿ ಈ ವ್ಯವಸ್ಥೆಯು ಅತ್ಯಂತ ಹಳೆಯದೆಂದೂ ನಂಬಲಾಗಿದೆ. ಹಾಗಾಗಿಯೇ ವಾಸನೆಯನ್ನು ಅತ್ಯಂತ ಪ್ರಬಲವಾದ ನೆನಪಿನ ತಿಳುವಳಿಕೆಯನ್ನು ಪ್ರಾಣಿಗಳಿಗೆ ಒದಗಿಸಿದೆ. ಬರೀ ವಾಸನೆಯಿಂದಲೇ ಪ್ರಾಣಿ ಪ್ರಪಂಚದ ಹಲವಾರು ವರ್ತನೆಗಳು ವ್ಯವಸ್ಥಿತವಾಗಿ ನಡೆಯುತ್ತವೆ. ಹೆಚ್ಚೂಕಡಿಮೆ ಸಂವಹನಕ್ಕೂ ಬೇಕಾಗುವ ಅಡಿಪಾಯವನ್ನು ವಾಸನೆಯು ಕೊಡುತ್ತದೆ. ಅದು ನೆನಪುಗಳ ಮಾದರಿಯಲ್ಲಿ ಸಂವಹನಕ್ಕೆ ಬೇಕಾದ ಸಾಮಗ್ರಿಯನ್ನು ಒದಗಿಸುತ್ತದೆ. ಮೂಗು ಒಂದು ಮುಖ್ಯ ಇಂದ್ರಿಯವಾಗಿ ನಮ್ಮ ನೆನಪಿನ ಚರಿತ್ರೆಯನ್ನು ನಿರ್ಮಿಸಿದೆ. ಇದರ ಕುರಿತು ಹೆಚ್ಚಿನ ಸಂಗತಿಗಳು ವಿಜ್ಞಾನ ಜಗತ್ತಿನಲ್ಲಿ ಸುದ್ದಿ ಮಾಡಿವೆ.

ಮೂಗಿನ ವಾಸನೆಯ ನೆನಪಿಗೂ, ನಮ್ಮೆಲ್ಲಾ ಇತರ ಇಂದ್ರಿಯಗಳ ನೆನಪಿಗಿಂತಲೂ ಪ್ರಬಲವಾದ ನಂಟೇ ಇದೆಯಂತೆ. ಈ ನೆನಪಿನ ವ್ಯವಸ್ಥೆ ಹೇಗೆಂದರೆ ನಮ್ಮ ಅನೇಕ ಸಂಗತಿಗಳನ್ನು ವಾಸನೆಯಿಂದಲೇ ಅನೇಕ ವರ್ಷಗಳ ಕಾಲದ ಹಿಂದೆ ಕೊಂಡೊಯ್ಯಬಲ್ಲದು. ಅದಕ್ಕೆ ನಮ್ಮ ಬಾಲ್ಯದ ವಾಸನೆಯ ಸಂಗತಿಗಳು ಸದಾ ನಮ್ಮ ಜತೆಯಲ್ಲಿಯೇ ಇರುವುದು. ಕೆಲವೊಮ್ಮೆ ಈ ನೆನಪುಗಳು ಇದ್ದಕ್ಕಿದ್ದಂತೆ ಬರುತ್ತವೆ. ವಾಸನೆಯ ನಂಟು ಹಾಲು ಕುಡಿವ ಹಸುಗೂಸುಗಳಿಂದ ಆರಂಭವಾಗುತ್ತದೆ. ಹಲವು ಪ್ರದೇಶಗಳಲ್ಲಿ ಹಸುಗೂಸುಗಳಿಗೆ ತಾಯಿಯ ಸೀರೆಯನ್ನು ಹೊದಿಸಿ ಮಲಗಿಸುವ ಪರಿಪಾಠವಿದೆ. ತಾಯಿಯ ಸಾಂಗತ್ಯದ ಅನುಭವದ ಪರಿಮಳ ಆಕೆಯ ಸೀರೆಯ ಹೊದಿಕೆಯಿಂದ ಮಗುವಿಗೆ ಅಮ್ಮನ ಅಪ್ಪುಗೆಯ ಅನುಭವವನ್ನು ಕೊಡುತ್ತದೆ. ಇದರಿಂದ ಮಕ್ಕಳು ಸುಖನಿದ್ರೆಯನ್ನು ಅನುಭವಿಸುತ್ತವೆ. ಅದೂಅಲ್ಲದೆ ವಾಸನೆಗಳು ಅನೇಕ ನೆನಪುಗಳಿಗೆ ಸಮೀಕರಿಸಿರುತ್ತವೆ. ಆಯಾ ಸಂಬಂಧಿತ ವಾಸನೆಯನ್ನು ಗ್ರಹಿಸಿದ ಕ್ಷಣವೇ ಆದರ ನೆನಪು ಬರುತ್ತವೆ. ಈ ತೆರನಾದ ನೆನಪುಗಳು ಭಾವನಾತ್ಮಕ ಸಂಗತಿಗಳಿಗೂ ಸೇರಿಕೊಂಡಿರುತ್ತವೆ. ಆಹ್ಲಾದಕತೆಯನ್ನೂ ನಮ್ಮ ನೆನಪಿನ ಬ್ಯಾಂಕನ್ನು ಉತ್ತೇಜಿಸುವುದಂತೆ. ಪ್ರಶಾಂತ ವಾತಾವರಣದ ಜತೆ ಹಿತಕರ ಪರಿಮಳವು ಉತ್ತೇಜನೆಯ ಸೊಗಸನ್ನು ಕೊಡುವುದು. ಆದ್ದರಿಂದಲೇ ಪರಿಮಳದ ಉದ್ಯಮವು ಇಷ್ಟೊಂದು ಬೆಳೆದಿದೆ. ಕೆಲವು ಪರಿಮಳಗಳನ್ನು ಕೆಲವೊಂದಕ್ಕೆ ಬಳಸುತ್ತೇವೆ. ಅವನ್ನೇ ಪ್ರಚೋದಿಸುವಂತಹ ಭಾವನೆಗಳೇ ತಳುಕು ಹಾಕಿಕೊಂಡಿರುತ್ತವೆ. ಇವು ನಮ್ಮ ಗೆಳೆಯ/ಗೆಳತಿಯರ ಸ್ನೇಹ ಸಂಬಂಧಗಳಿಗೂ ಸಹಕರಿಸುತ್ತವೆ. ಆದಕ್ಕೆ ನಾವು ಅದೆಷ್ಟೋ ಬಾರಿ ಗೊತ್ತಿಲ್ಲದಂತೆ 'ಓ.., ಅವನಾ?' ಎಂತಲೋ 'ಓ.., ಅವಳಾ' ಅಂತಲೋ ಕೇವಲ ವಾಸನೆಯ ನೆನಪಿನಿಂದ ಉದ್ಧರಿಸುತ್ತೇವೆ. ಜತೆಗೆ ನಮಗೆ ಒಗ್ಗದ ವಾಸನೆಗಳಂತೂ ಅತ್ಯಂತ ಹೆಚ್ಚಿನ ನೆನಪನ್ನು ಉಳಿಸಿಬಿಡುತ್ತವೆ. ಧೂಮಪಾನದ ವಾಸನೆ, ಪೆಟ್ರೋಲಿನ ವಾಸನೆ, ಸೀಮೆಎಣ್ಣೆಯದು ಹೀಗೆ ಮತ್ತಾವುದೋ ಕೊಳೆತು ನಾರುವ ವಾಸನೆಗಳು ನಮ್ಮ ಪರ್ಮನೆಂಟ್ ನೆನಪಿನ ಅನುಭವಗಳಾಗಿ ದಾಖಲಾಗಿರುತ್ತವೆ. ಇವು ತತ್‌ಕ್ಷಣವೇ ಅವುಗಳಿಂದ ದೂರ ಸರಿಸುವ ಅಥವಾ ವಿರೋಧ ಭಾವನೆ ವ್ಯಕ್ತಪಡಿಸುವ ಕ್ಷಣವಾಗುತ್ತವೆ.


ವಾಸನೆಯ ರಸಾಯನಿಕತೆಗೆ ನೊಬೆಲ್ ಕಿರೀಟ

ವಾಸನೆಯ ನೆನಪುಗಳ ಬಗೆಗಿನ ಸಂಗತಿಗಳು ವಿಜ್ಞಾನದ ಔನ್ನತ್ಯದಲ್ಲೂ ಸುದ್ದಿ ಮಾಡಿವೆ. ವಾಸನೆಯ ರಸಾಯನಿಕತೆಗೆ ನೊಬೆಲ್ ಪ್ರಶಸ್ತಿಯ ಗರಿ ಸಿಕ್ಕಿದೆ. 2004ರ ಶರೀರಕ್ರಿಯಾಶಾಸ್ತ್ರ ಮತ್ತು ವೈದ್ಯಕೀಯ ವಿಜ್ಞಾನದಡಿ ರಿಚರ್ಡ್ ಆಕ್ಸೆಲ್ ಮತ್ತು ಲಿಂಡಾ ಬಕ್ ಅವರಿಗೆ ನೊಬೆಲ್ ತಂದು ಕೊಟ್ಟಿದೆ. ನೆನಪಿಗೆ ಸಹಕರಿಸುವಲ್ಲಿ ರಸಾಯನಿಕ ಸಂಬಂಧಗಳಿವೆ. ಇಬ್ಬರು ವಿಜ್ಞಾನಿಗಳೂ ವಾಸನೆಯ ವಿಜ್ಞಾನಕ್ಕೆ ದಶಕವನ್ನೇ ಸವೆಸಿರುವುದು ಇದರ ಮಹತ್ವವನ್ನು ಸಾರುತ್ತವೆ. ಲಿಂಡಾ ಬಕ್ ಅವರಂತೂ 16 ವರ್ಷಗಳ ನಿರಂತರ ಸಂಶೋಧನೆಯನ್ನು ಮಾಡಿದ್ದಾರೆ. ಇವೆಲ್ಲವೂ ರಸಾಯನಶಾಸ್ತ್ರದ ವಿವರಗಳಿಂದ ಮತ್ತು ನರವಿಜ್ಞಾನದ ಸಂಬಂಧಗಳಿಂದ ಸಮೃದ್ಧವಾಗಿವೆ. ವಸ್ತುಗಳ ವಾಸನೆಯು ಮೂಲತಃ ಅವುಗಳ ಸಂಯುಕ್ತಗಳ ರಚನೆಯನ್ನೂ ಮತ್ತು ಅವು ಉಂಟುಮಾಡುವ ವರ್ತನೆಯನ್ನೂ ಒಳಗೊಂಡಿವೆ. ಇವೆಲ್ಲವೂ ನೆನಪಿನ ನಕ್ಷೆಯಲ್ಲಿ ದಾಖಲಾಗಲು ವಿಕಾಸಗೊಂಡಿರುವ ಜೈವಿಕತೆಯು ನಮ್ಮ ಗ್ರಹಿಕೆಯ ಇಂದ್ರಿಯಗಳ ಕಾರ್ಯದಲ್ಲೇ ಅತೀ ಹಳೆಯದು.



ಪಿಯುಸಿಯಲ್ಲಿನ ವಿಜ್ಞಾನದ ವಿದ್ಯಾರ್ಥಿಗಳು ರಸಾಯನಶಾಸ್ತ್ರದ ಬಗ್ಗೆ ಹಲವು ತಕರಾರು ಎತ್ತುತ್ತಿರುತ್ತಾರೆ. ಅನೇಕರು ಅದರಲ್ಲೇ ಮಾರ್ಕ್ಸ್ ಕಳೆದುಕೊಂಡು ಅದರಿಂದಲೇ ತಮ್ಮ ಸ್ಥಾನ ಕೆಳಕ್ಕಿಳಿದಿರುವ ಬಗ್ಗೆ ಕಂಪ್ಲೇಂಟ್ ಮಾಡುತ್ತಿರುತ್ತಾರೆ. ಬಹುಪಾಲು ಪಿಯುಸಿ ವಿಜ್ಞಾನದ ವಿದ್ಯಾರ್ಥಿಗಳು ರಸಾಯನಶಾಸ್ತ್ರದ ಓದು ಮತ್ತದರ ನೆನಪಿನ ಬಗೆಗೆ ಗೋಳಿಡುತ್ತಾರೆ. ಆದರೆ ಅಚ್ಚರಿ ಎಂಬಂತೆ ರಸಾಯನಶಾಸ್ತ್ರೀಯ ಕಾರಣಗಳೇ ನೆನಪಿಗೂ ಸಹಕರಿಸುತ್ತವೆ ಮತ್ತು ಆ ಮೂಲಕವೇ ಅಗಾಧ ನೆನಪಿನ ಭಂಡಾರವಾಗಿರುವಂತೆ ಮೆದುಳು ವಿಕಾಸಗೊಂಡಿದೆ. ಓರ್ವ ವಿದ್ಯಾರ್ಥಿಯ ತಾಯಿಯಂತೂ, ವೈದ್ಯೆಯಾಗಿ ರಸಾಯನಶಾಸ್ತ್ರದ ಕುರಿತು ಕಷ್ಟ ತೋಡಿಕೊಂಡಿದ್ದರು. ಅವರಿಗೆ "ಅಲ್ಲಾ ಡಾಕ್ಟ್ರೇ, ರೋಗ ಮತ್ತು ದೇಹದ ಸಂಬಂಧಗಳು ರಸಾಯನಶಾಸ್ತ್ರದ ವಿವರಗಳುಳ್ಳ ಶರೀರಕ್ರಿಯಾ ವರ್ತನೆಗಳ ತಿಳಿವ... ಅರ್ಥವಾಗುವುದು ಹೇಗೇ" ಎಂದು ಪ್ರಶ್ನಿಸಿ... ಉತ್ತರಕ್ಕಾಗಿ ತಡಕಾಡಿದ್ದರು. ಪೋಷಕರ ಮತ್ತು ಮ... ಸಂಕಟಗಳು ರಸಾಯನಶಾಸ್ತ್ರದ ಸಂಗತಿಗಳ... ನೆನಪಿನಲ್ಲಿಡುವ ಕಷ್ಟವನ್ನು ಕುರಿತಾಗಿತ್ತು. ಅವರದ್ದು... ಅಲ್ಲ, ಅನೇಕ ವಿಜ್ಞಾನದ ವಿದ್ಯಾರ್ಥಿಗಳಿಗೆ ರಸಾಯನಶಾ... ಅಧ್ಯಯನ ಕುರಿತು ಅದರ ನೆನಪಿನ ಬಗೆಗೆ ಇ... ಅನುಮಾನಗಳಿವೆ. ಮುಖ್ಯವಾಗಿ ವಸ್ತುಗಳ ವರ್ತನೆ... ಆಯಾ ವಸ್ತುಗಳ ಅಣು ರಚನೆಯನ್ನು ಅವಲಂಬಿಸಿರು... ವಸ್ತುಗಳ ಅಣುರಚನೆಯು ಗೊತ್ತಾದ ವರ್ತನೆ... ವಾಸನೆಯನ್ನೂ ತಂದೊಡ್ಡಬಲ್ಲದು. ನೆನ... ಸಂಗತಿಯಾಗಿಸಲು ಮೆದುಳು ಸಹ ಈ ಅಣುರಚನೆ... ಅವಲಂಬಿಸಿದೆ. ಅಂದರೆ ಅಣುರಚನೆಯಿಂದ... ಪರಿಮಳದಿಂದಾಗಿ ಅದನ್ನು ನೆನಪಿನ ನೆಪ... ಬಳಸುತ್ತದೆ. ಹೀಗೆ ನೆನಪನ್ನು ನಿರ್ಧರಿಸ... ರಸಾಯನಶಾಸ್ತ್ರವು ನೆನಪಿನಲ್ಲೇ ಇರದು ಎಂಬ... ವಿರುದ್ಧವಾಗಿ, ನೆನಪಿಗಾಗಿಯೂ ಸಹಕರಿಸುತ್ತಿದೆ.

ಮಾನವರು ಸಹಸ್ರಾರು ವಿವಿಧ ವಾಸನೆಗ... ನೆನಪಿನಲ್ಲಿಟ್ಟುಕೊಳ್ಳಬಲ್ಲರು. ಪ್ರತೀ ಜೀವಿಯು ... ಸುತ್ತಲಿನ ಪ್ರಪಂಚದ ಗ್ರಹಿಕೆಯನ್ನು ಅ... ವೈವಿಧ್ಯಮಯವಾದ ವಾಸನೆಗಳಿಂದ ವಿಸ್ತರಿಸಿಕೊಳ್ಳುವುದಂತೆ. ಅಗಾಧವಾದ ವಿಶ್ವದ ... ಪ್ರತಿಕ್ರಿಯಿಸಲು ಅವುಗಳನ್ನು ಉಂಟುಮಾಡಿ... ಮಾಲೆಕ್ಯುಲಾರ್ ರಚನೆಗಳನ್ನೇ ನಂಬಿದೆ. ವಾಸ... ಗ್ರಾಹ್ಯವು ನರಮಂಡಲದ ಉತ್ಪನ್ನವಾಗಿ ಬದಲಾ... ಕ್ರಿಯೆಯನ್ನೇ ಅವಲಂಬಿಸಿದೆ. ಗ್ರಾಹ್ಯವಾಗಿ ಪರಿಮ... ವಸ್ತುವಾಗುಳ್ಳದ್ದು ತುಂಬಾ ಜಾಗರೂಕ... ವಿವರಣೆಯನ್ನು ಒಳಗೊಂಡಿದ್ದು, ಗೊತ್ತಾದ ರಸಾಯ... ರಚನೆಯನ್ನು ಹೊಂದಿರುತ್ತದೆ. ವಾಸನೆಯಲ್ಲಿನ ಪರಿ... ನೋಡಲು ಬೇಕಾದ ಚಿತ್ರಕ್ಕಿಂತ ಸರಳವಾಗಿರು... ನೋಡಿ ತಿಳಿಯಲು ಚಿತ್ರ ಹೆಚ್ಚು ಸಂಕೀರ್ಣವಾಗಿರು... ಸರಳವಾದ ವಾಸನೆಯ ಚಿತ್ರವು ನೆನಪಿನಾಳದಲ್ಲಿ ಉ... ಮನಸ್ಸಿನ ನಕ್ಷೆಯಲ್ಲಿ ಪ್ರತಿಷ್ಠಾಪಿಸಿರುತ್ತದೆ. ... ಮುಖ್ಯವಾಗಿ ರಸಾಯನಿಕ ಚಿತ್ರಣವೇ ಆಗಿರುವ... ವಿಶೇಷ. ಒಟ್ಟಿನಲ್ಲಿ ವಾಸನೆಯ ನೆನಪಿಗೂ ರಸಾಯ... ರಚನೆಗಳಿಗೂ ಸಂಬಂಧವಿದ್ದು, ಮನಸ್ಸೇ ಅ... ಬಳಸಲು ವಿಕಾಸಗೊಂಡಿರುವಾಗ ಕೇ... ಭಾವನಾತ್ಮಕವಾಗಿ ರಸಾಯನಶಾಸ್ತ್ರವನ್ನು ದೂ... ವಿಜ್ಞಾನದ ವಿದ್ಯಾರ್ಥಿಗಳು ಹೆಚ್ಚುತ್ತಿರುವ ಸಂದರ್ಭ... ಇದೆಲ್ಲಾ ನೆನಪಾಗುತ್ತಿದೆ. ನೊಬೆಲ್ ಪಾರಿತೋಷ... ಕಿರೀಟವನ್ನು ತಂದುಕೊಟ್ಟ ವಾಸನೆಯ ಗ್ರಹಿಕೆಯ ... ಇಬ್ಬರು ವಿಜ್ಞಾನಿಗಳೂ ರಸಾಯನಶಾಸ್ತ್ರೀಯ ನೆಪಗ... ಬಳಸಿಕೊಂಡಿದ್ದಾರೆ. ಶ್ರೀಮತಿ ಲಿಂಡಾ ಅವರ ಪ... 10,000ದಿಂದ 1,00,000ದಷ್ಟು ವಾಸನೆಗ... ಮನಸ್ಸು ಗ್ರಹಿಸಬಲ್ಲದಂತೆ. ಅಂದರೆ ನಮ್ಮ ನೆನಪ... ಪಟ್ಟಿಯನ್ನು ವಾಸನೆಯು ನಮಗರಿವಿಲ್ಲದ... ನಿರ್ಧರಿಸುತ್ತಿದೆ. ಮೂಗಿನ ಕ್ರಿಯೆಗಳಲ್ಲಿ ವಾಸ... ಆರಂಭವಿದ್ದರೂ ಅದರ ವ್ಯಾಪ್ತಿಯು ಮೆದು... ತಲುಪುತ್ತದೆ. ಅಲ್ಲಿಗೇ ನಿಲ್ಲದೆ ಜಾಣತನಕ್ಕೂ ಚಾ... ಆದರೆ ಕೆಲವರು ಕೆಲವೊಂದು ವಾಸನೆಗಳ ಬಗ್ಗೆ ಜಾ... ತೋರಬಹುದು. ಆಗ ಅದಕ್ಕೇ ಅವರನ್ನು ... ಮೂಗಿನವರು ಎನ್ನುತ್ತೇವಲ್ಲವೇ?



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಬುದ್ಧಂ ಶರಣಂ ಗಚ್ಛಾಮಿ

ಬುದ್ಧ ಮತ್ತು ಬುದ್ಧತ್ವದ ಬಗ್ಗೆ ತಿಳಿದಾದ ಮೇಲೆ ಶರಣಂ ಗಚ್ಛಾಮಿಯ ಕುರಿತಾಗಿ ಒಂದು ಜಿಜ್ಞಾಸೆ ು ಸಾಧ್ಯವಿದೆ. ಆಶ್ರಯ ಪಡೆಯುವ ಬುದ್ಧನೆಂದರೆ ? ಅದು ಗೌತಮ ಬುದ್ಧನೇ? ಅಲ್ಲ ಎನ್ನುತ್ತದೆ ್ಮ. ಧಮ್ಮವೆಂದರೆ ಸಾಮಾನ್ಯ ಪರಿಭಾಷೆಯಲ್ಲಿ ವಾದರೂ ಅದು ಸ್ಥಾಪಕ ಧರ್ಮದ ರೀತಿಯದಲ್ಲ, ತ್ತು ಕೊಟ್ಟದ್ದು ಹಾಗೂ ಅಗತ್ಯವಿದ್ದದ್ದು ಸಂಘಕ್ಕೆ. ಕಾಲದಲ್ಲಿ ಸಾಂಘಿಕ ಜೀವನಕ್ಕೆ ಬಹಳ ಮಹತ್ವವೂ ಅಗತ್ಯವೂ ಇತ್ತು. ಅದು ಏಕೆ ಮತ್ತು ಹೇಗೆ ದನ್ನು ದೇವಿಪ್ರಸಾದ್ ಚಟ್ಟೋಪಾಧ್ಯಾಯ ುತ್ತಾರೆ.


ಬುದ್ಧ ಮತ್ತು ಪ್ರಾಚೀನ ಬೌದ್ಧಮತ

ಬುದ್ಧ ಕ್ರಿ ಪೂ 483ರಲ್ಲಿ ಮರಣ ಹೊಂದಿದನು. ು ಯಾವುದೇ ಗ್ರಂಥವನ್ನು ರಚಿಸಲಿಲ್ಲ, ಅಷ್ಟೇ ಯಾವುದೇ ಬೌದ್ಧ ಗ್ರಂಥವೂ ಬುದ್ಧನ ಕಾಲದಲ್ಲಿ ರಚಿತವಾದುದಲ್ಲ. ಅತಿ ಪುರಾತನ ಬೌದ್ಧ ವನ್ನು ಪಿಟಕ ಎಂಬ ದೊಡ್ಡ ಸಂಕಲನದಲ್ಲಿ ಒಟ್ಟಿಗೆ ಸಲಾಗಿದೆ. ಅಂತಹ ಮೂರು ಪಿಟಕಗಳಿವೆ. ನ್ನು ತ್ರಿಪಿಟಕಗಳು ಅಂದರೆ 'ಮೂರು ಬುಟ್ಟಿಗಳು' ಕರೆಯುತ್ತಾರೆ. ಅವು ವಿನಯಪಿಟಕ ಅಥವಾ ಹಿತೆಗಳು, ಸುತ್ತಪಿಟಕ ಅಥವಾ ಬುದ್ಧನ ಹೇಳಿಕೆಗಳು ಅಭಿದಮ್ಮ ಪಿಟಕ ಅಥವಾ ತಾತ್ವಿಕ ಚರ್ಚೆಗಳು. ಪಾಲಿ ಭಾಷೆಯಲ್ಲಿವೆ. ಇವುಗಳನ್ನು ಬೌದ್ಧಧರ್ಮದ ಣ ಗ್ರಂಥಗಳೆಂದು ಪರಿಗಣಿಸಲಾಗುತ್ತದೆ. ರ್ಶನಗಳು ಬುದ್ಧನು ಮರಣ ಹೊಂದಿ ಎಷ್ಟೋ ಗಳಾದ ನಂತರ ರೂಪುಗೊಂಡವು. ಬೌದ್ಧ ದಯು ಬುದ್ಧನು ಬೋಧಿಸಿದ್ದ ನಾಲ್ಕು ಶ್ರೇಷ್ಠಸತ್ಯಗಳನ್ನು ರ್ಯ ಸತ್ಯಗಳನ್ನು ಆಧರಿಸಿವೆ. ಅವುಗಳು ದುಃಖ, ಮೂಲ, ದುಃಖ ನಿವಾರಣೆ, ದುಃಖ ನಿವಾರಣಾ . ಪ್ರಾಪಂಚಿಕ ದುಃಖಗಳಿಗೆ ಹನ್ನೆರಡು ಕಾರಣಗಳನ್ನು ಸಿದ್ಧಾಂತ ನೀಡುತ್ತದೆ ಮತ್ತು ಎಲ್ಲಾ ದುಃಖಗಳಿಂದ ಡೆ ಹೊಂದುವ ಸ್ಥಿತಿಯನ್ನು ನಿರ್ವಾಣವೆಂದು ಸುತ್ತದೆ.

ಬುದ್ಧನಿಗೆ ಇಡೀ ವಿಶ್ವವೇ ದುಃಖದ ಸಾಗರ ಅದರ ಕೆಯೇ ನಿರ್ವಾಣ ಎನ್ನುವ ಭಾವನೆ ಬರಲು ವೇನು ಎನ್ನುವುದನ್ನು ಅರ್ಥ ಮಾಡಿಕೊಳ್ಳಲೇಬೇಕು. ಕಾಲ ಒಂದು ಮಹತ್ತರ ಸಾಮಾಜಿಕ ಲನದ ಕಾಲ. ಈಶಾನ್ಯ ಭಾರತದಲ್ಲಿ ಬುಡಕಟ್ಟು ಾಯಗಳನ್ನು ನಾಶ ಮಾಡಿ ಮಗಧ ಹಾಗೂ ದಂತಹ ನಿರಂಕುಶ ಪ್ರಭುತ್ವಶಕ್ತಿಗಳು ತಲೆಯೆತ್ತಿದ್ದವು. ಂದಿಗೆ ಮೇರೆಯಿಲ್ಲದ ದುರಾಸೆ, ಅಮಾನುಷವಾದ ೋಗದ ಅಭಿಲಾಷೆ, ಜಿಪುಣತನ, ಸಾರ್ವಜನಿಕರನ್ನು ಡೆಯುವ ಸ್ವಾರ್ಥ ಮನೋಭಾವ ಮತ್ತು ಅಧಿಕಾರ ಇವೆಲ್ಲಾ ತಾಂಡವವಾಡತೊಡಗಿದವು. ಅದರ ಪ್ರಾಕೃತ ಸಮುದಾಯದ ಸರಳತೆ, ಮುಕ್ತತೆ, ್ಯ ಸಮಾನತೆ ಮುಂತಾದ ಮೌಲ್ಯಗಳು ಮಾಗತೊಡಗಿದವು. ಕೋಸಲದ ರಾಜನು ಬುದ್ಧನ ಾಖ್ಯ ಬುಡಕಟ್ಟಿನ ಮೇಲೆ ಅತ್ಯಂತ ಘೋರವಾದ ನಡೆಸಿ, ಹೆಂಗಸರು ಮಕ್ಕಳನ್ನೂ ಬಿಡದೆ ುಷವಾಗಿ ಕೊಲೆ ಮಾಡಿದ. ಇಷ್ಟು ಸಾಲದೆಂಬಂತೆ ಬಲಾತ್ಕಾರದಿಂದ ಹಣ ಸಂಗ್ರಹಿಸುವುದು, ಬಡ್ಡಿ ರ, ದಾಸ್ಯ ಪದ್ಧತಿ ಮೊದಲಾದ ದಬ್ಬಾಳಿಕೆಯ ಹೊಸ ರೂಪಗಳು ತಲೆ ಎತ್ತಿದ್ದವು.

ಬುದ್ಧ ಇವೆಲ್ಲವುಗಳಿಗೂ ಪ್ರತ್ಯಕ್ಷದರ್ಶಿಯಾಗಿದ್ದ. ಈ ವಣೆಗಳು ಅವನ ಮನಸ್ಸನ್ನು ಆಳವಾಗಿ ಕಲಕಿದ್ದವು. ಳವಣಿಗೆಯಿಂದಾಗಿ ಭೂಮಿಯ ಮೇಲೆ ಶಾಂತಿ ಎನ್ನುವುದು ಬುದ್ಧನಿಗೆ ಮನವರಿಕೆಯಾಗಿತ್ತು, ಇದಕ್ಕೆ ಪರಿಹಾರವೇನು? ಪ್ರಾರ್ಥನೆಗಳಿಂದ, ಾಗಾದಿಗಳಿಂದ ಪರಿಹಾರ ದೊರಕುವುದಿಲ್ಲ ಎನ್ನುವ ಕೆ ಬುದ್ಧನಿಗಿತ್ತು, ಪಾರಮಾರ್ಥಿಕ ಜ್ಞಾನದಿಂದ ಮೋಕ್ಷ ಲಭ್ಯತೆ ಎಂಬ ಉಪನಿಷತ್ ಪ್ರತಿಪಾದನೆ ಕೂಡ ಸಮಂಜಸವಾಗಿ ತೋರಲಿಲ್ಲ, ವಸ್ತುಗಳ ಆದಿ ಬಗೆಗಿನ ಜಿಜ್ಞಾಸೆಯಲ್ಲಿ ಅವನಿಗೆ ಆಸಕ್ತಿಯಿರಲಿಲ್ಲ. ್ಕೆ ಬಾಣ ತಗುಲಿದಾಗ, ತಕ್ಷಣ ಕಿತ್ತು ಹಾಕುವುದರ ಆ ಬಾಣವನ್ನು ಯಾರು ತಯಾರಿಸಿದರು, ಅದನ್ನು ಹೇಗೆ ಎಸೆದ ಇತ್ಯಾದಿ ಕುರಿತು ಯೋಚಿಸುವ ಕೆ ಪಡಬಾರದು" ಎಂದು ಬುದ್ಧ ತನ್ನ ಶಿಷ್ಯರಿಗೆ ದ್ದ, ಹಾಗಾಗಿ ಅಂತಹ ಪ್ರಶ್ನೆಗಳನ್ನು ಕೇಳಿದಾಗ ಮೌನವಾಗಿ ಇರುತ್ತಿದ್ದ, ಅವನನ್ನು ಕಾಡುತ್ತಿದ್ದದ್ದು ಯೂ ಪ್ರಾಯೋಗಿಕ ಪ್ರಶ್ನೆ, ತನ್ನ ಪ್ರತಿದಿನದ ಸಂಕಟಗಳನ್ನು, ಪರಿಹರಿಸಲು ಕಾರ್ಯರೂಪಕ್ಕೆ ಬರುವ ಪರಿಹಾರ ಮಾರ್ಗ ಅವನಿಗೆ ಬೇಕಿತ್ತು,





ಹಾಗಾಗಿ ಬುದ್ಧನಿಗೆ ಸಾಧ್ಯವಿದ್ದದ್ದು ಒಂದೇ ಮಾರ್ಗ. ಆಚರಣೆಯಲ್ಲೂ ಮತ್ತು ತತ್ವದಲ್ಲೂ ಆಗಿನ ಕಾಲಕ್ಕೆ ಯೋಗ್ಯವಾದ ಒಂದು ಧರ್ಮವನ್ನು ರೂಪಿಸಬೇಕಿತ್ತು, ಆತ ಸೃಷ್ಟಿಸಿದ ಧರ್ಮ ದೇವರಿಲ್ಲದ ಧರ್ಮವಾಗಿತ್ತು, ಮಾನವನಿಗೆ ನಿಜವಾದ ಸಂತೋಷ ದೊರಕಬೇಕಾದರೆ, ಭ್ರಮೆಯ ಅಗತ್ಯವಿಲ್ಲದ ಪರಿಸ್ಥಿತಿ ನಿರ್ಮಾಣವಾಗಬೇಕು. ಆದರೆ, ಆ ಕಾಲದಲ್ಲಿ ಬುದ್ಧನಿಗೆ ಅದು ಸಾಧ್ಯವಿರಲಿಲ್ಲ; ಆಗ ಆತನಿಗಿದ್ದ ಇನ್ನೊಂದು ಪರ್ಯಾಯವೆಂದರೆ ಕಾಲಕ್ಕೆ ಸರಿಹೊಂದುವಂತಹ ಭ್ರಮೆಯೊಂದನ್ನು ಸೃಷ್ಟಿಸುವುದು. ಬುದ್ಧನು ಪ್ರಪಂಚದ ನೈತಿಕ ಸುಧಾರಣೆ ಆಗಬೇಕೆಂದು ಪ್ರತಿಪಾದಿಸಿದ. ಹಾಗಾಗಿಯೇ ಈ ಮೌಲ್ಯಗಳನ್ನು ಆಧರಿಸಿದ ಬೌದ್ಧ ಸಂಘಗಳನ್ನು ರೂಪಿಸಿದ. ಬುದ್ಧನು ದಿನೇದಿನೇ ಬೆಳೆಯುತ್ತಿದ್ದ ರಾಜಪ್ರಭುತ್ವಗಳ ಅಟ್ಟಹಾಸ ಮತ್ತು ಆಡಂಬರಗಳನ್ನು ಗಮನಕ್ಕೆ ತೆಗೆದುಕೊಳ್ಳದೆ ನಾಶವಾಗುತ್ತಿದ್ದ ಬುಡಕಟ್ಟು ಸಮಾಜದ ಕಡೆ ತನ್ನ ಗಮನವನ್ನು ಕೇಂದ್ರೀಕರಿಸಿ ಅವುಗಳನ್ನು ಪುನಶ್ಚೇತನಗೊಳಿಸುವ ಕೆಲಸಕ್ಕೆ ಕೈಹಾಕಿದ.

ದುಃಖದ ಕಾರಣವನ್ನು ಬುದ್ಧ ಹುಡುಕಾಡಿದನು. ಈ ಹುಡುಕಾಟದ ಫಲವಾಗಿ ಆದಿ ಬೌದ್ಧಮತವು ಒಂದು ಕಾರ್ಯ-ಕಾರಣ ಸಂಬಂಧದ ತತ್ವವನ್ನು ರೂಪಿಸಿತು. ಅದನ್ನು





ಪ್ರತೀತ್ಯ ಸಮುತ್ಪಾದ ತತ್ವ ಎಂದು ಕರೆಯುತ್ತಾರೆ. 'ಅದು ಇರುವುದರಿಂದ ಇದು ಉಂಟಾಗುತ್ತದೆ' ಎನ್ನುವುದು ಅದರ ಅರ್ಥ. ಇದೊಂದು ಅತ್ಯಂತ ಕ್ರಿಯಾತ್ಮಕ ವಾದ, ಸಕಾರಾತ್ಮಕವಾದ ಗ್ರಹಿಕೆ. ಪ್ರತಿಯೊಂದು ಸಂಗತಿಯೂ ಒಂದು ವಿಶಿಷ್ಟ ಪರಿಸ್ಥಿತಿಗೆ ಕಾರಣವಾಗುತ್ತದೆ ಮತ್ತು ಆ ಪರಿಸ್ಥಿತಿಗಳು ಇಲ್ಲವಾದಾಗ ದುಃಖವೂ ಇಲ್ಲವಾಗುತ್ತದೆ ಎಂದು, ಬುದ್ಧನು ದುಃಖಕ್ಕೆ ಕಾರಣವಾಗುವ ಪರಿಸ್ಥಿತಿಗಳನ್ನು ಅರಿತುಕೊಳ್ಳಲು ಪ್ರಯತ್ನಿಸಿದ. ಇದನ್ನು ಹನ್ನೆರಡು ಕೊಂಡಿಗಳ 'ದ್ವಾದಶ ನಿಧಾನಗಳ' ಮೂಲಕ ವಿವರಿಸುತ್ತಾನೆ. ಪ್ರತೀತ್ಯಸಮುತ್ಪಾದ ಸಿದ್ಧಾಂತವನ್ನು ಆಧರಿಸಿ ಹಲವಾರು ಉಪಸಿದ್ಧಾಂತಗಳನ್ನು ಪ್ರಾಚೀನ ಬೌದ್ಧಧರ್ಮವು ಪ್ರತಿಪಾದಿಸಿತು. ಪ್ರಪಂಚದಲ್ಲಿ ಯಾವುದೂ ಶಾಶ್ವತವಲ್ಲ, ನಿತ್ಯವಲ್ಲ, ಎಲ್ಲವೂ ನಶ್ವರ ಮತ್ತು ಆತ್ಮವೆಂಬುದು ಸತ್ಯವಲ್ಲ ಎಂಬ ಬೌದ್ಧಧರ್ಮದ ಪ್ರತಿಪಾದನೆಗಳು ಉಪನಿಷತ್ ವಿಚಾರಧಾರೆಗೆ ವಿರುದ್ಧವಾಗಿದೆ. ಇವು ತಾತ್ವಿಕವಾಗಿ ಮಹತ್ವದ ಪರಿಕಲ್ಪನೆಗಳು, ಜೊತೆಗೆ ಭೌತವಸ್ತುಗಳು ಒಂದು ನಿಮಿಷವೂ ಸ್ಥಿರವಾಗಿ ಉಳಿಯಲಾರವು ಎಂದು ಆದಿ ಬೌದ್ಧಧರ್ಮ ಪರಿಗಣಿಸುತ್ತದೆ. ವಸ್ತು ಮತ್ತು ಘಟನೆಗಳು ನಿರಂತರ ಪರಿವರ್ತನಾತ್ಮಕತೆಯಲ್ಲಿ ಮಾತ್ರ ಅಸ್ತಿತ್ವವುಳ್ಳದ್ದಾಗಿರುತ್ತದೆ ಎಂಬ ಪರಿಕಲ್ಪನೆಯು ತತ್ವಶಾಸ್ತ್ರಕ್ಕೆ ಆದಿ ಬೌದ್ಧಧರ್ಮವು ನೀಡಿದ ಪ್ರಧಾನ ಕಾಣಿಕೆಯಾಗಿದೆ. (ಪ್ರಕಾಶಕರು: ಕನ್ನಡ ವಿಶ್ವವಿದ್ಯಾಲಯ, ಹಂಪಿ. ಲೇಖಕರು: ಟಿ.ಎಸ್.ವೇಣುಗೋಪಾಲ್)

ಮನೋದೇಗುಲ

ಬುದ್ಧನದು ದೇವಸ್ಥಾನವೋ ಅಥವಾ ಆಶ್ರಮವೋ ಆಗಿರಲಿಲ್ಲ, ಅವನು ಇರುವಾಗ ಅದೊಂದು ಧಾರ್ಮಿಕ ಸಂಸ್ಥೆಯೂ ಆಗಿರಲಿಲ್ಲ, ಒಬ್ಬಾತನ ಮನಸ್ಸನ್ನು ಸುಶೀಲಗೊಳಿಸಿ, ಕರ್ಮಬಂಧನದಿಂದ ಬಿಡುಗಡೆಗೊಳಿಸು ವಂತಹ ಮಾರ್ಗಕ್ಕೆ ಒಯ್ಯುವುದು, ದುಃಖದಿಂದ ಬಿಡುಗಡೆಗೊಳಿಸುವುದೇ ಬುದ್ಧನ ಉದ್ದೇಶವಾಗಿತ್ತು,

ಅಹಿಂಸೆಯೇ ಆತನ ಮಾರ್ಗ. ತಮ್ಮ ಮೇಲೆ ದಾಳಿ ಮಾಡುವವರನ್ನು ಪ್ರತಿದಾಳಿಯಿಂದ ಹಿಂದಕ್ಕಟ್ಟಿ ಅಥವಾ ಮಣಿಸಿ ತಮ್ಮ ಶಾಂತಿಯನ್ನು ಸ್ಥಾಪಿಸಿಕೊಳ್ಳುವುದು ಅಸ್ತಿತ್ವದಲ್ಲಿ ಸುಳ್ಳಾಗಿರುತ್ತದೆ. ಸಮಾನ ಹಕ್ಕು ಮತ್ತು ಸಹಜೀವನ ಪಡೆದಿರುವ ಮತ್ತೊಬ್ಬರು ಹಿಂಸೆಗೆ ಒಳಗಾಗುವುದರಿಂದ ಅಸ್ತಿತ್ವದಲ್ಲಿ ಮತ್ತೆ ಹಿಂಸೆಯನ್ನು ಪ್ರತಿಷ್ಠಾಪಿಸಿದಂತಾಗುತ್ತದೆ. ಆದ್ದರಿಂದ ಬುದ್ಧ ಅಶಾಂತಿಯನ್ನು ಶಾಂತಿಯಿಂದಲೂ, ದ್ವೇಷವನ್ನು ಪ್ರೇಮದಿಂದಲೂ, ಕ್ರೋಧವನ್ನು ಕರುಣೆಯಿಂದಲೂ ಶಮನ ಮಾಡುವ ಮಾರ್ಗವನ್ನು ಬೋಧಿಸಿದ. ನನ್ನನ್ನು ಹಿಂಸೆ ಮಾಡುವವನಿಗೆ ಹಿಂಸೆ ಕೊಟ್ಟು ತಾನು ಶಾಂತಿಯನ್ನು ಹೊಂದುವುದಾದರೆ ಹಿಂಸೆ ಇಲ್ಲವಾಗುವುದಿಲ್ಲ. ಬದಲಾಗಿ ಸ್ಥಳಾಂತರಿತವಾಗುತ್ತದಷ್ಟೆ. ಯೇಸುವಿನದ್ದೂ ಇದೇ ಸಿದ್ಧಾಂತವಾಗಿತ್ತು. ಒಂದು ಕೆನ್ನೆಗೆ ಹೊಡೆದರೆ ಮತ್ತೊಂದು ಕೆನ್ನೆಯನ್ನು ತೋರುವುದರಿಂದ ಮತ್ತೊಬ್ಬನ ಹೃದಯದಲ್ಲಿ ಅಥವಾ ಮನಸ್ಸಿನಲ್ಲಿರುವ ಕರುಣೆಯನ್ನು ಅಥವಾ ದಯೆಯನ್ನು ಪ್ರೇರೇಪಿಸುವ ಮೂಲಕ ನಕಾರಾತ್ಮಕವಾದಂತಹ ಕ್ರಿಯೆಯನ್ನು ಉಪಶಮನಗೊಳಿಸುವುದು.

ತಾನು ಕಂಡುಕೊಂಡ ಸತ್ಯವನ್ನು ಅಥವಾ ಅರಿವನ್ನು ತಿಳಿಸಲು ಮತ್ತು ಆಚರಿಸಲು ಬುದ್ಧ ಜನರನ್ನು ಒಗ್ಗೂಡಿಸುತ್ತಾ ತನ್ನ ಕಾಲದಲ್ಲಿ ಅವ್ಯಾಹತವಾಗಿ ನಡೆಯುತ್ತಿದ್ದ ಹಿಂಸೆ ದಳ್ಳುರಿ ಮತ್ತು ದುಃಖಗಳಿಂದ ಎಲ್ಲರನ್ನೂ ಬಿಡುಗಡೆಗೊಳಿಸುವ ಅನಿವಾರ್ಯದಲ್ಲಿದ್ದ.

ಹಾಗಾಗಿಯೇ ಧಾರ್ಮಿಕ ಸಂಸ್ಥೆಯ ಸ್ವರೂಪವಾಗಲಿ, ಬುದ್ಧನೆಂದರೆ ಒಬ್ಬ ಗೌತಮಬುದ್ಧನೆಂಬ ಆರಾಧ್ಯಪುರುಷನಾಗಲಿ ಧಮ್ಮ ಮತ್ತು ಬುದ್ಧನೆಂದರೆ ಆಗಿರಲಿಲ್ಲ. ಬದಲಾಗಿ ಬುದ್ಧನೆಂದರೆ ಬುದ್ಧತ್ವವನ್ನು ಹೊಂದಿದ ಪರಂಪರೆಯ ಮೂರ್ತರು ಯಾರಾದರೂ ಆಗಿದ್ದಿರಬಹುದು. ಬುದ್ಧ ಪರಂಪರೆಗೆ ಬಹಳ ದೀರ್ಘವಾದಂತಹ ದಾಖಲಾಗಿರದಂತಹ ಇತಿಹಾಸವಿದೆ. ಬುದ್ಧನ ಮುನ್ನವೂ ಎಷ್ಟೋ ಬುದ್ಧರು ಆಗಿಹೋಗಿದ್ದರು, ಬುದ್ಧನ ಕಾಲದಲ್ಲಿಯೂ ಇದ್ದರು ಹಾಗೂ ಬುದ್ಧನ ನಂತರವೂ ಅವರು ಬಂದರು. ಆದರೆ ಅವರು ಬೌದ್ಧರಾಗಿರಬೇಕಿರಲಿಲ್ಲ, ಒಬ್ಬನಿಗೆ ಎಲ್ಲಿಯಾದರೂ, ಯಾವ ಸಮಯದಲ್ಲಾದರೂ, ಯಾವ ದೇಶ, ಭಾಷೆ, ವೇಷದಲ್ಲಾದರೂ ಬುದ್ಧನ ದರ್ಶನವಾಗಬಹುದು. ನೀವು ಅವರಿಂದ ಅರಿವನ್ನೂ, ಪ್ರಜ್ಞೆಯನ್ನೂ ಮತ್ತು ಜ್ಞಾನವನ್ನೂ ಪಡೆಯಬಹುದು. ಹಾಗೆಯೇ ಬೌದ್ಧ ಬಿಕ್ಕುವಾಗಲು ಔಪಚಾರಿಕ ದೀಕ್ಷೆಯ ಅಗತ್ಯವೂ ಇಲ್ಲ, ನಾನು ಆಸ್ಟ್ರೇಲಿಯಾ ದೇಶದ ಓರ್ವ ಯುವಕನನ್ನು ಬೆಂಗಳೂರಿನ ಟಿಪ್ಪೂ ಅರಮನೆಯ ಆವರಣದಲ್ಲಿ ಕಂಡೆ. ನನ್ನ ಜೊತೆಯವರು ಕುತೂಹಲದಿಂದ ಅವನನ್ನು ನೀನು ಯಾವ ದೇಶದವನು ಮತ್ತು ಏನು ಮಾಡುತ್ತಿರುವೆ ಎಂದು ಕೇಳಿದರು. ಅವನು ತನ್ನ ಹೆಸರು ಮತ್ತು ದೇಶವನ್ನು ಹೇಳಿ ತಾನೊಬ್ಬ ಬೌದ್ಧ ಬಿಕ್ಕು ಎಂದು ಹೇಳಿದ. ಬೌದ್ಧ ಬಿಕ್ಕು ಎಂದಾಕ್ಷಣ ನನ್ನ ಜೊತೆ ಇದ್ದವರು ಅವನು ನಿಲುವಂಗಿ ಮತ್ತು ಕಾಷಾಯವಸ್ತ್ರವಿಲ್ಲದಿರುವುದರ ಬಗ್ಗೆ ಮಾತಾಡಿಕೊಂಡರು. ಆದರೆ ನನಗೆ ಅರ್ಥವಾಯಿತು ಅವನು ಎಂತಹ ಭಿಕ್ಕುವೆಂದು. ಅವನು ಸಾಧಾರಣವಾಗಿಯೇ ಜೀನ್ಸ್ ಪ್ಯಾಂಟಿನಲ್ಲಿದ್ದ ಮತ್ತು ಒಂದು ಟೀ ಶರ್ಟ್ ಹಾಗೂ ಅದರ ಮೇಲೊಂದು ತೆಳುವಾದ ಜಾಕೆಟ್ ಹಾಕಿಕೊಂಡಿದ್ದ, ಜೊತೆಯಲ್ಲಿ ಒಂದೇ ಜೊತೆಯ ಬಟ್ಟೆಯಿರಬಹುದಾದ ಒಂದು ಬ್ಯಾಗ್.

ಎಲ್ಲಿ ಉಳಿದುಕೊಂಡಿದ್ದೀಯ ಎಂದರೆ ಎಲ್ಲೂ ಇಲ್ಲ ಎಂದ. ನನ್ನ ಮನೆಗೆ ಆಹ್ವಾನಿಸಿದೆ. ಆತ ಬಂದ. ದಾರಿಯಲ್ಲಿ ಬರುತ್ತಾ ಕೇಳಿದೆ "ನೀನು ಯಾವ ಗುರುವನ್ನಾದರೂ ನಿರೀಕ್ಷಿಸುತ್ತಾ ಹುಡುಕುತ್ತಿದ್ದೀಯಾ?"

"ಇಲ್ಲ, ಬುದ್ಧನನ್ನು ಹುಡುಕಿಕೊಂಡು ಬಂದೆ."

"ನನಗೆ ವಿಹಾರಗಳಷ್ಟು ಗೊತ್ತಿವೆ."

"ನಾನು ಬಂತೇಜಿಗಳಲ್ಲ ಬೇಕಾಗಿರುವುದು. ಬುದ್ಧ..."

"ನಿನಗೆ ಬುದ್ಧ ಬೇಗನೆ ಸಿಗಲೆಂದು ಹಾರೈಸುತ್ತೇನೆ."

"ಧನ್ಯವಾದಗಳು. ನಾನು ನನಗೆ ಸಿಗುವ ಆ ಬುದ್ಧನಲ್ಲಿ ಆಶ್ರಯ ಹೊಂದುತ್ತೇನೆ."

"ಆಮೇಲೆ..."

"ಆಮೇಲೆ?" ಆತ ನಕ್ಕು ಹೇಳಿದ, "ನಾನೊಂದು ಬುದ್ಧನಾಗುವಷ್ಟು ಪ್ರಬುದ್ಧನಾಗುತ್ತೇನೆ ಎಂದು ಭಾವಿಸುತ್ತೇನೆ."

ನಾನೂ ಜೋರಾಗಿ ನಕ್ಕೆ.

ರಾಬರ್ಟ್ ಎಂದು ಅವನ ಮೊದಲ ಹೆಸರು. ಎರಡನೆಯ ಹೆಸರು ಮರೆತಿದ್ದೇನೆ. ಅವನು ನಮ್ಮ ಮನೆಯಲ್ಲಿ ಸುಮಾರು ಎರಡು ವಾರಗಳ ಕಾಲ ವಾಸವಿದ್ದ. ನನ್ನ ತಾಯಿಗೆ ಅಡುಗೆಗೆ ಸಹಕರಿಸುತ್ತಿದ್ದ. ನಮ್ಮ ನಾಯಿಗಳೊಂದಿಗೆ ಆಟವಾಡುತ್ತಿದ್ದ. ಮಳೆ ಬಂದು ನಿಂತಾಗ ರಸ್ತೆಯಲ್ಲಿ ಅಡ್ಡಾದಿಡ್ಡಿಯಾಗಿ ಬಂದು ವಾಹನಗಳಿಗೆ, ಪಾದಚಾರಿಗಳ ಚಪ್ಪಲಿಗಳಿಗೆ ಬಲಿಯಾಗುವುದನ್ನು ತಪ್ಪಿಸಲು ಬಸವನ ಹುಳು(ಸ್ನೈಲ್)ಗಳನ್ನು ಆಯ್ದು ಆಯ್ದು ಅವುಗಳನ್ನು ಪಕ್ಕದಲ್ಲಿರುವ ಹುಲ್ಲುಗಾವಲಿಗೆ ಬಿಡುತ್ತಿದ್ದ. ನಮ್ಮ ಕಡೆಯವರು ಯಾರೋ ಮದುವೆಗೆ ಹೋಗುತ್ತಿದ್ದೇವೆ ಎಂದು ಹೊರಟು, ನೀನೂ ಬರುತ್ತೀಯಾ ಎಂದು ಕೇಳಿದರೆ ಆಗಲಿ ಎಂದು ಹೊರಡುತ್ತಿದ್ದ. ಮದುವೆಯಲ್ಲಿ ಸಂಭ್ರಮವನ್ನು ಪಡುತ್ತಾ ಎಲ್ಲವನ್ನೂ ನೋಡುತ್ತಿದ್ದ. ವಿದೇಶಿಯವನು ಎಂದು ಯಾರೇ ಬಂದು ಅದೇನೇ ಮಾತಾಡಲಿ ಪ್ರಸನ್ನ ಮುಖದಿಂದ ಮಾತಾಡುತ್ತಾ ತನ್ನ ಬಳಿಗೆ ಬಂದವರಿಗೆಲ್ಲಾ ಆನಂದವನ್ನು ನೀಡುತ್ತಿದ್ದ. ಕೆಲವರು ಕುಚೋದ್ಯ ಮಾಡುತ್ತಿದ್ದರು. ಆದರೂ, ಅವನಿಗೆ ಅದು ಅರಿವಾದರೂ ಬಹಳ ಪ್ರಜ್ಞಾಪೂರ್ವಕವಾಗಿಯೇ ಅವರ ಜೊತೆ ಶಾಂತಿ ಮತ್ತು ಸಮಾಧಾನದಿಂದ ವರ್ತಿಸುತ್ತಿದ್ದ. ಅವನ ಬಗ್ಗೆ ಕುಚೋದ್ಯ ಮಾಡಿದವರಾದರೂ ಅವನ ಮುಗ್ಧತೆ ಅಥವಾ ಶಾಂತತೆ ಕಂಡು ತಮ್ಮ ವರ್ತನೆಯ ಬಗ್ಗೆ ಪಶ್ಚಾತ್ತಾಪವನ್ನು ಪಟ್ಟುಕೊಂಡು ಅವನನ್ನು ಮತ್ತೆ ಗೌರವದಿಂದ ಕಾಣುತ್ತಿದ್ದರು. ಯಾರಾದರೂ ಧೂಮಪಾನ ಮಾಡಲು ಅಥವಾ ಮದ್ಯಪಾನ ಮಾಡಲು ಆಹ್ವಾನಿಸಿದರೆ ನಯವಾಗಿ ನಿರಾಕರಿಸುತ್ತಿದ್ದ. ಶುದ್ಧ ಶಾಖಾಹಾರಿಯಾಗಿದ್ದ. ದಿನದ ಒಂದು ಹೊತ್ತು ಮಾತ್ರ ಊಟ ಮಾಡುತ್ತಿದ್ದ. ಬೆಳಗ್ಗೆ ಮತ್ತು ಸಂಜೆ ಒಂದೊಂದು ಲೋಟ ಹಾಲು ಕುಡಿಯುತ್ತಿದ್ದ.


ಮನೆಯಲ್ಲಿರುವಾಗ ಧ್ಯಾನದಲ್ಲಿರುತ್ತಿದ್ದ. ಧ್ಯಾನ ಎಂದರೆ ಪದ್ಮಾಸನವನ್ನು ಹಾಕಿ, ಚಿನ್ಮುದ್ರೆಯೋ, ಇನ್ನಾವುದೋ ಮುದ್ರೆಯನ್ನೋ ಹಾಕಿಕೊಂಡೇನೂ ಕೂರುತ್ತಿರಲಿಲ್ಲ. ಅವನು ಹೇಗೆ ಬೇಕಾದರೂ ಕೂತಿರುತ್ತಿದ್ದ, ಮಲಗಿರುತ್ತಿದ್ದ, ಓಡಾಡುತ್ತಿದ್ದ. ಆದರೆ ನಮಗೆ ಅವನು ಧ್ಯಾನದಲ್ಲಿದ್ದಾನೆ ಎಂದು ತಿಳಿಯುತ್ತಿತ್ತು. ಅವನ ಬ್ಯಾಗಿನಲ್ಲಿ ಧಮ್ಮಪದ ಮತ್ತು ಇನ್ನೂ ಒಂದೆರಡು ಬುದ್ಧನ ಕುರಿತಾದ ಎರಡು ಪುಟ್ಟ ಪುಸ್ತಕಗಳಿದ್ದವು.

ಅವನು ಮನೆಯಲ್ಲಿರುವಾಗ ನಮಗೆ ಅಬ್ಬರಿಸಿ ಎಂದಿನಂತೆ ಗಲಾಟೆ ಮಾಡಲು ಮನಸ್ಸಾಗುತ್ತಿರಲಿಲ್ಲ. ಅವನ ಜೊತೆಗೆ ಮೌನದಲ್ಲಿ ಪ್ರಶಾಂತವಾಗಿ ಕುಳಿತುಕೊಳ್ಳುವ ಬಯಕೆಯಾಗುತ್ತಿತ್ತು, ಎಷ್ಟೋ ದಿನಗಳು ಗಂಟೆಗಟ್ಟಲೆ ಹಾಗೆ ಕುಳಿತಿದ್ದೇವೆ. ಯಾವ ಸಂಗೀತ, ಮಾತುಕತೆ ಅಥವಾ ಟಿವಿಯ ಮನರಂಜನೆಗಳೇನೂ ಇರಲಿಲ್ಲ, ಅವನು ಇದ್ದಷ್ಟು ದಿನಗಳು ನಮ್ಮ ಮನೆಯಲ್ಲಿ ಬುದ್ಧನ ಶಾಂತಿ ತುಂಬಿತ್ತು, ಅವನು ಹೊರಟುಹೋದ ಮೇಲೆ ಅವನ ಶಾಂತಿಯ ಬೆಳಕು ಉಳಿದಿತ್ತು.

ಅವನು ಬೆಂಗಳೂರಿನಿಂದ ಹೊರಡುವಾಗ ನನಗೊಂದು ಪುಸ್ತಕವನ್ನು ಉಡುಗೊರೆಯಾಗಿ ನೀಡಿದ.

ಅದು ಹರ್ಮನ್ ಹೆಸ್ಸೆಯ 'ಸಿದ್ಧಾರ್ಥ'.

ಸಾಹಿತ್ಯ ಪರಿಷತ್ತು ಕರ್ತವ್ಯಪ್ರಜ್ಞೆಯನ್ನು ಮರೆಯ




ಸಾಹಿತ್ಯ ಸಮ್ಮೇಳನಗಳನ್ನು ದೇವಾಲಯಗಳಲ್ಲಿ ಆಯೋಜಿಸುವ ಪರಿಪಾಠವನ್ನು ವಿರೋಧಿಸಿ ಶ್ರೀಯುತರಾದ ಕೃಷ್ಣಶಾಸ್ತ್ರಿಯವರು ಮತ್ತು ರಾಮಕೃಷ್ಣರು ಪ್ರಕಟಪಡಿಸಿರುವ ನಿಲುವುಗಳಿಗೆ ನನ್ನ ಸಂಪೂರ್ಣ ಸಹಮತವಿದೆ. ನಾವು ಇಂದು ಪ್ರಜಾಪ್ರಭುತ್ವ, ಸಂವಿಧಾನ, ಜಾತ್ಯತೀತತೆ, ಸಮಾಜವಾದಗಳ ಕುರಿತು ಮಾತಾಡುವವರನ್ನು ಹುಚ್ಚರೆಂದು, ಅಪಾಯಕಾರಿಗಳೆಂದು ಪರಿಗಣಿಸುವ ದುರ್ದಿನಗಳಲ್ಲಿ ಇದ್ದೇವೆ. ಆದರೂ ಕೊನೆಯುಸಿರಿನವರೆಗೂ ದನಿ ಎತ್ತುವುದನ್ನು ನಿಲ್ಲಿಸದೆ ಹೋರಾಟವನ್ನು ಮುಂದುವರಿಸುವುದೊಂದೇ ದಾರಿ. ಒಂದು ಸರಕಾರಿ ಸಂಸ್ಥೆಯಾಗಿರುವ ಸಾಹಿತ್ಯ ಪರಿಷತ್ತಿಗೆ ಸಂವಿಧಾನದ ಮೌಲ್ಯಗಳನ್ನು ಪಾಲಿಸುವ ಕರ್ತವ್ಯ ತಂತಾನೇ ಒದಗಿಬರುತ್ತದೆಂದು ಬೇರೆ ಹೇಳಬೇಕಾಗಿಲ್ಲ. ಹಾಗಾಗಿ ಕೇವಲ ನಿರ್ದಿಷ್ಟ ಧರ್ಮವೊಂದಕ್ಕೆ ಸೇರಿದ ಪ್ರಾರ್ಥನಾ ಕೇಂದ್ರಗಳಲ್ಲಿ ಸಾಹಿತ್ಯ ಸಮ್ಮೇಳನ ನಡೆಸುವುದು ಸಂವಿಧಾನದಲ್ಲಿ ಹೇಳಿರುವ ಜಾತ್ಯತೀತತೆಯ ಮೌಲ್ಯಕ್ಕೆ ಅಪಚಾರ ಬಗೆದಂತೆ. ಇನ್ನೂ ನಿಖರವಾಗಿ ಹೇಳುವುದಾದರೆ ಸಂವಿಧಾನದ ವಿಧಿ 51ಎ, ಮೂಲಭೂತ ಕರ್ತವ್ಯಗಳು ಇದರ ಉಪವಿಧಿ (ಎ), (ಇ), (ಎಫ್) ಇವುಗಳ ಉಲ್ಲಂಘನೆ ಮಾಡಿದಂತೆ. ಆದುದರಿಂದ ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಪರಿಷತ್ತು ಇನ್ನಾದರೂ ತನ್ನ ಸಾಹಿತ್ಯ ಸಮ್ಮೇಳನಗಳನ್ನು ದೇವಸ್ಥಾನಗಳಲ್ಲಾಗಲಿ ಅಥವಾ ಇನ್ನಿತರ ಧರ್ಮಗಳ ಪ್ರಾರ್ಥನಾ ಸ್ಥಳಗಳಲ್ಲಾಗಲಿ ಆಯೋಜಿಸುವುದನ್ನು ಕೈಬಿಟ್ಟು ಎಲ್ಲಾ ಮಹಿಳೆಯರು ಮತ್ತು ಎಲ್ಲಾ ಧರ್ಮದವರು ನಿರಾತಂಕವಾಗಿ, ನಿಸ್ಸಂಕೋಚವಾಗಿ ಭಾಗವಹಿಸಬಹುದಾದಂತಹ ತಾಣಗಳಲ್ಲಿ ಏರ್ಪಡಿಸಿ ತನ್ನ ಕರ್ತವ್ಯಪ್ರಜ್ಞೆಯನ್ನು ಮೆರೆಯಲಿ.

- ಸುರೇಶ ಭಟ್ ಬಾಕ್ರಬೈಲು, ಮಂಗಳೂರು

ರಾಘವನ ಜೊಳ್ಳು ಉಪದೇಶ

ತನ್ನ ಸ್ವಯಂಕೃತಾಪರಾಧದಿಂದ ಕಟ್ಟಿಹಾಕಿದ ಕೋಳಿಯಂತಾದ ರಾಘವೇಶ್ವರ ಸ್ವಾಮಿ ಮೊನ್ನೆ ಬೆಂಗಳೂರಿನ ಗಿರಿನಗರದಲ್ಲಿ ತನ್ನ ಛಾತ್ರ ಚಾತುರ್ಮಾಸಾಚರಣೆಯ ಸಂದರ್ಭದಲ್ಲಿ ಚಿಕ್ಕಮಕ್ಕಳಿಗೆ ಬೋಧಿಸುತ್ತಾ "ನನ್ನ ಮೇಲೂ ಆರೋಪಗಳು ಬಂದಿವೆ. ಪರೀಕ್ಷೆಗಳನ್ನು ಸರಿಯಾಗಿ ಎದುರಿಸಿದರಷ್ಟೇ ಉನ್ನತ ಸ್ಥಾನ ಸಿಗುವುದು" ಎಂದಿದ್ದಾನೆ. ಅಸಲಿಗೆ ರಾಘವನ ಮಾತಿಗೂ ಕೃತಿಗೂ ತಾಳಮೇಳವಿಲ್ಲ. ಐಶ್ವರ್ಯವೆಲ್ಲ ನಶ್ವರ ಎನ್ನುತ್ತಾ ಗೋಕರ್ಣ ಹುಂಡಿಯನ್ನು ಒಡೆದು ದೋಚುತ್ತಾನೆ. ಹೆಣ್ಣುಗಳಿಗೆ ಸಂಸ್ಕಾರದ ಪಾಠ ಮಾಡುತ್ತಾ ತನ್ನ ಮೂಲ ಸಂಸ್ಕಾರವನ್ನು ಲಜ್ಜೆಯಿಲ್ಲದೇ ಹೊರಗೆಡಹುತ್ತಾನೆ. ಇಂಥವುಗಳು ಒಂದೇ ಎರಡೇ. ಇದರಲ್ಲಿ ಈ ಮಾತೂ ಸೇರುತ್ತದೆ. ಯಾಕೆಂದರೆ, ಈ ರಾಘವ ತನಗೆದುರಾದ ಪರೀಕ್ಷೆಯನ್ನು ಪ್ರಾಮಾಣಿಕವಾಗಿ ಯಾವಾಗಲಾದರೂ ಎದುರಿಸಿದ್ದುಂಟೆ? ಖಂಡಿತಾ ಇಲ್ಲ.

ಬಿಲ್ಲಿ ಹಣದಮೇಲೂ ತನ್ನ ಅಧಿಕಾರವಿಲ್ಲದ ಸ್ವಾಮಿತ್ವ ತನ್ನದಾಗಿದ್ದರೂ ಬರೀ ದುಡ್ಡಿನಲ್ಲೇ ಮಾತಾಡುವ ವಕೀಲರೇ ಈತನಿಗೆ ಬೇಕು. ರಾಘವನನ್ನು ಹಿಡಿಯಲು ಪೊಲೀಸರು ಕೆಕ್ಕಾರಿಗೆ ಬಂದಾಗ "ಹೋಗ್ರಿ, ಹೋಗ್ರಿ, ನಾಳೆ ನಾನೇ ಖುದ್ದು ಬರುತ್ತೇನೆ" ಎಂದು ಪೊಲೀಸರನ್ನೇ ಮೋಸಗೊಳಿಸಿದ್ದ. ವಾಮಮಾರ್ಗದ ಪರಮಾವಧಿ ಎಂಬಂತೆ ಸಂತ್ರಸ್ತ ಹೆಣ್ಣಿನ ಬಗ್ಗೆ ತನ್ನ ಹಿಂಬಾಲಕರಿಂದ ಅತ್ಯಂತ ಕೀಳು ಅಭಿಪ್ರಾಯಗಳನ್ನು ಎಲ್ಲೆಡೆ ಹರಿಬಿಟ್ಟು ಅಡ್ಡದಾರಿ ಯಿಂದ



ತನಗೆದುರಾದ ಕಂಟಕದಿಂದ ನುಣುಚಿಕೊಳ್ಳಲು ನೋಡಿದ್ದ.

ಇತ್ತೀಚೆಗೆ ಪ್ರೇಮಲತಾರ ಪತಿ ದಿವಾಕರ ಶಾಸ್ತ್ರಿಯವರು ಮಾಧ್ಯಮದೆದುರು ಅಲವತ್ತುಕೊಂಡಿದ್ದರು. 'ನಮಗೆ ಯಾರ್‍ಯಾರಿಂದಲೋ ಬೆದರಿಕೆ ಕರೆಗಳು ಬರುತ್ತಿವೆ. ನಾವು ಭಯದಲ್ಲೇ ಬದುಕುತ್ತಿದ್ದೇವೆ. ದೂರುಕೊಟ್ಟ ನಮ್ಮನ್ನೇ ಅಲೆಸಲಾಗುತ್ತಿದ್ದು ಘನ ಆರೋಪ ಹೊತ್ತ ರಾಘವನಿಗೆ ರಿಯಾಯಿತಿ ತೋರಲಾಗುತ್ತಿದೆ (ಈ ಬಗ್ಗೆ ಚಾರ್ಜ್‌ಶೀಟನ್ನು ಕೂಡ ಸಲ್ಲಿಸಲಾಗಿಲ್ಲ)" ಎಂದು ಕೊರಗಿದ್ದರು.

ಜನಪರ ಸರಕಾರ ಎಂದು ಹೆಸರು ಗಳಿಸಿರುವ ಸಿದ್ದರಾಮಯ್ಯನವರ ಸರಕಾರ ಈ ಪ್ರೇಮಲತಾ ಕೇಸಿನ ಬಗ್ಗೆ ಆದಷ್ಟು ಬೇಗ ಸೂಕ್ತ ತೀರ್ಮಾನವನ್ನು ಕೈಗೊಂಡು ಸಂತ್ರಸ್ತರಿಗೆ ನ್ಯಾಯವನ್ನು ಕೊಡುವಂತಾಗಬೇಕು.

- ಅವಿನಾಶ್ ಎಮ್ ಎಸ್, ನೆಲ್ಲಿಕಾರ್


ಯಾಕೂಬನಿಗಿಂತ ದೊಡ್ಡ ಕ್ರಿಮಿನಲ್‌ಗಳಿಗೆ ಯಾಕೆ ಕಡಿಮೆ ಶಿಕ್ಷೆ?

ಶಿಕ್ಷೆಯೊಂದರ ಪ್ರಧಾನ ಉದ್ದೇಶವೇನು? ಸುಧಾರಣೆಯೇ? ಪ್ರತೀಕಾರವೇ? ಭವಿಷ್ಯದಲ್ಲಿ ಅಪರಾಧ ಮಾಡಬಹುದಾದವರಿಗೆ ಕಠಿಣ ಸಂದೇಶ ರವಾನಿಸುವುದೇ? ಅಥವಾ ಸಂತ್ರಸ್ತರಿಗೆ ಸಮಾಧಾನ ಒದಗಿಸುವುದೇ? ಹೀಗೆ ಪ್ರಶ್ನೆಗಳನ್ನು ಕೇಳಿ ಈಗಿನ ಕಾಲದಲ್ಲೂ ಭಾರತದಲ್ಲಿ ಮರಣದಂಡನೆಯ ಪ್ರಸ್ತುತತೆಯ ಬಗ್ಗೆ ಜಾಗೃತಿ ಮೂಡಿಸುವ ಪ್ರಯತ್ನವಾಗುತ್ತಿರುವುದು ಸ್ವಾಗತಾರ್ಹ (ಲಂಕೇಶ್, 19-8-2015, ಶ್ರೀನಿವಾಸ್ ಕಾರ್ಕಳ).

ಆದರೆ ಸಮಾನ ಅಪರಾಧಕ್ಕೆ ಸಮಾನ ಶಿಕ್ಷೆ ಯಾಕಾಗುತ್ತಿಲ್ಲ ಎಂಬ ವಿಷಯದ ಬಗ್ಗೆಯೂ ಚರ್ಚೆಯಾಗಬೇಕು. ಅಂದರೆ ಟೈಗರ್ ಮೆಮನ್ ಮತ್ತು ದಾವೂದ್ ಇಬ್ರಾಹಿಮನಿಗೆ ಈ ಸಂಚಿನಲ್ಲಿ ತನುಮನಧನದಿಂದ ಸಹಾಯ ಮಾಡಿದ ಇತರ ಅಪರಾಧಿಗಳಿಗೆ ಯಾಕೆ ಗಲ್ಲು ಆಗಿಲ್ಲ ಎಂಬ ಬಗ್ಗೆಯೂ ಮೊದಲು ಚರ್ಚೆಯಾಗಬೇಕಿದೆ. ಅದರಲ್ಲಿ ಇಬ್ಬರು ಹಿಂದೂ ಕಸ್ಟಮ್ ಅಧಿಕಾರಿಗಳು ಪ್ರಮುಖರು. ಹೇಗೆಂದರೆ ಪಾಕಿಸ್ತಾನದಿಂದ ಸಣ್ಣ ಬೋಟುಗಳಲ್ಲಿ ಬಂದ ಆರ್‌ಡಿಎಕ್ಸ್ ತುಂಬಿದ ಪೆಟ್ಟಿಗೆಗಳನ್ನು ರಾಯಗಡ ಜಿಲ್ಲೆಯ ಶ್ರೀವರ್ಧನ್ ಜೆಟ್ಟಿಯಲ್ಲಿ ಇಳಿಸಿ ಅದನ್ನು ತಾವೇ ವಾಹನಗಳಲ್ಲೂ ತುಂಬಿ ಆ ವಾಹನವನ್ನು ತಾವೇ ಚಲಾಯಿಸಿಕೊಂಡು ಮುಂಬೈಗೆ ಬಂದವರು ಜಯಂತ್ ಗೌರವ್ ಮತ್ತು ಎಸ್.ಎಸ್. ತಲವಡೆಕರ್ ಎಂಬ ಇಬ್ಬರು ಕಸ್ಟಮ್ ಅಧಿಕಾರಿಗಳು. ದಾರಿಯಲ್ಲಿ ಬೇರೆ ಯಾವುದೇ ಕಸ್ಟಮ್ ಅಧಿಕಾರಿ ಅಥವಾ ಪೊಲೀಸರು ತಮ್ಮ ವಾಹನ ತಡೆದು ಹುಡುಕದಂತೆ ನೋಡಿಕೊಳ್ಳಲು ಆ ಇಬ್ಬರು ಅಧಿಕಾರಿಗಳು ಸ್ವತಃ ತಮ್ಮ ಇಲಾಖೆಯ ಸರಕಾರಿ ಬೋರ್ಡ್ ಇದ್ದ ವಾಹನ ಉಪಯೋಗಿಸಿದ್ದು ಎಂದು ಅವರೇ ಒಪ್ಪಿಕೊಂಡಿದ್ದಾರೆ. ಮೊದಲು ಅವರು ಬೇರೆ ಬಂದರಿನಲ್ಲಿ ಕಸ್ಟಮ್ ಅಧಿಕಾರಿಯಾಗಿದ್ದವರು ನಂತರ ದಾವೂದ್‌ನ ಯೋಜನೆಯಂತೆ ಈ ಆರ್‌ಡಿಎಕ್ಸ್ ಪೆಟ್ಟಿಗೆಗಳನ್ನು ರಾಯಗಢ ಜೆಟ್ಟಿಗೆ ಬೋಟಿನಲ್ಲಿ ಗುಟ್ಟಾಗಿ ಬರಮಾಡಿಕೊಂಡು ತಮ್ಮ ವಾಹನದಲ್ಲಿ ಮುಂಬೈಗೆ ಸಾಗಿಸಲು ಅನುಕೂಲವಾಗಲೆಂದು ತಮ್ಮ ಪ್ರಭಾವ ಬಳಸಿ ಶ್ರೀವರ್ಧನ್ ಜೆಟ್ಟಿಗೇ ಅವಸರವಸರವಾಗಿ ಕಸ್ಟಮ್ ಅಧಿಕಾರಿಯಾಗಿ ಅವರಿಬ್ಬರೂ ಪೋಸ್ಟಿಂಗ್ ಮಾಡಿಸಿಕೊಂಡಿದ್ದರು. ಅಂದರೆ ಈ ಸಂಚಿನಲ್ಲಿ ಮೊದಲಿನಿಂದಲೂ ಅವರಿಬ್ಬರು ಭಾಗಿಯಾಗಿದ್ದರು ಎಂಬುದು ಇದು ಸಾಬೀತುಮಾಡುತ್ತದೆ. ಹಾಗಿರುವಾಗ ದಾವೂದ್ ಗ್ಯಾಂಗಿನ ದೇಶದ್ರೋಹದ ಸಂಚಿನ ವಿಷಯ ಅವರು ಪೊಲೀಸರಿಗೆ ತಿಳಿಸದೇ ಆ ಸಂಚಿನಲ್ಲಿ ತಾವೇ ಭಾಗಿಯಾಗಿ ಆರ್‌ಡಿಎಕ್ಸ್ ಸ್ಮಗಲ್ ಮಾಡಲು ಅನುಕೂಲ ಮಾಡಿಕೊಟ್ಟಿರುವುದು ಯಾಕೂಬ್ ಮೆಮನನ ಅಪರಾಧಕ್ಕಿಂತ ಹೆಚ್ಚು ಗುರುತರ ದೇಶದ್ರೋಹದ ಅಪರಾಧವಾಗಿದೆ. ಆದರೂ ಅವರಿಬ್ಬರಿಗೆ ಮುಂಬೈನ ಟಾಡಾ ಕೋರ್ಟ್ ಕೇವಲ ಎಂಟು ವರ್ಷ ಜೈಲು ಶಿಕ್ಷೆ ವಿಧಿಸಿ ಅವರನ್ನು ಬಿಡುಗಡೆ ಮಾಡಿದೆ. ಆದರೆ ಟಾಡಾ ಕೋರ್ಟ್ ಇಷ್ಟು ಕಡಿಮೆ ಶಿಕ್ಷೆ ಕೊಟ್ಟಿದ್ದರ ವಿರುದ್ಧ ಮೇಲಿನ ಕೋರ್ಟಿಗೆ ಯಾರೂ ಹೋಗದಿರುವುದು ಮಹಾರಾಷ್ಟ್ರ ಪೊಲೀಸರ ಮತ್ತು ಸರಕಾರದ ಪಕ್ಷಪಾತ ಸೂಚಿಸುತ್ತದೆ.

ಇನ್ನು ಮುಂಬೈಯಲ್ಲಿ ಹತ್ತಾರು ಕಡೆ ಬಾಂಬ್ ಇಟ್ಟವರನ್ನೂ ಬಂಧಿಸಲಾಗಿತ್ತು. ಇವರದು ಯಾಕೂಬನಿಗಿಂತ ಹೆಚ್ಚು ಗುರುತರ ಅಪರಾಧ. ಇವರಿಗೂ ನಿಜವಾಗಿ ಯಾಕೂಬನಿಗಿಂತ ಮೊದಲೇ ಗಲ್ಲಾಗಬೇಕಿತ್ತು. ಆದರೆ ಇವರಿಗೆ ಕೇವಲ ಆಜೀವ ಕಾರಾಗೃಹದ ಶಿಕ್ಷೆ ಮಾತ್ರ ಕೊಡಲಾಗಿದೆ. ಅಂದರೆ ಹೆಚ್ಚಿನ ಅಪರಾಧಕ್ಕೆ ಕಡಿಮೆ ಶಿಕ್ಷೆ ಸರಿಯೇ?

- ಜಿ. ರವಿಕಿರಣ, ಮೈಸೂರು



ದಾರುಲ್ ವಿವಿಯ ತಲೆಕೆಟ್ಟ ಫತ್ವಾಗಳು

ಮಾಡಲು ಕೆಲಸವಿಲ್ಲದವರು ಇನ್ನೊಬ್ಬರಿಗೆ ಬುದ್ಧಿಮಾತು ಹೇಳೋ ಕಾಯಕ ಶುರುವಿಟ್ಟುಕೊಳ್ಳುತ್ತಾರೆ. ಒಬ್ಬ ವ್ಯಕ್ತಿ ತೊಡುವ ಧಿರಿಸು, ತಿನ್ನುವ ಆಹಾರ, ಮಾಡುವ ಕಾಯಕದ ಬಗ್ಗೆ ಅನಗತ್ಯವಾಗಿ ಈ ತಿಳಿಗೇಡಿಗಳು ಹುಚ್ಚುಹುಚ್ಚಾಗಿ ಮಾತಾಡುತ್ತಲೇ ಇರುತ್ತಾರೆ. ಇದೀಗ ಇಂತಹದ್ದೊಂದು ವಿವಾದಕ್ಕೊಳಗಾಗಿರುವುದೇ ದೇವಬಂದ್ ದಾರುಲ್ ಉಲೂಮ್ ವಿವಿ ಹೊರಡಿಸಿರುವ ನೂತನ ಫತ್ವಾ.


ಮುಸ್ಲಿಂ ಸಮುದಾಯದ ಯುವಕರು ಹೇರ್ ಸೆಲೂನ್ ನಡೆಸುವುದು ತಪ್ಪು ಎನ್ನುವ ಎಡಬಿಡಂಗಿ ಹೇಳಿಕೆಯೊಂದನ್ನು ನೀಡಿದೆ. ತಲೆಗೂದಲು ಕತ್ತರಿಸುವುದಾಗಲೀ ಇಲ್ಲವೇ ಮುಖ ಕ್ಷೌರ ಮಾಡುವುದಾಗಲಿ ಷರಿಯಾ ಕಾನೂನಿನಡಿ ಸರಿಯಲ್ಲ. ಆದ್ದರಿಂದ ಅಂತಹ ವೃತ್ತಿ ಮಾಡುವವರು ತಮ್ಮ ವೃತ್ತಿ ಬದಲಿಸಿ ಎಂದು ಕರೆ ನೀಡಿದೆ. ಬರೀ ಇಂತಹ ವಿವಾದಾತ್ಮಕ ಫತ್ವಾ ಹೊರಡಿಸುವುದೇ ಕಾಯಕವಾಗಿಸಿರುವ ದೇವಬಂದ್ ವಿವಿಯು ಕೆಲವು ವರ್ಷಗಳ ಹಿಂದೆ ವಿವಾಹ ಸಮಯದಲ್ಲಿ ಸಾಕ್ಷಿಯಾಗಬಲ್ಲ ವೀಡಿಯೋಗ್ರಫಿ ಹಾಗೂ ಫೋಟೋಗ್ರಫಿ ಮಾಡಿಸುವುದು ಸರಿಯಲ್ಲ ಎಂದಿತ್ತು. ಇದಲ್ಲದೇ ಇನ್ನೂ ಹಲವು ರೀತಿಯಲ್ಲಿ ತನಗೆ ತೋಚಿದ್ದ ಫತ್ವಾವನ್ನು ಹೊರಡಿಸುತ್ತಾ ಬಂದಿರುವ ಈ ವಿವಿ ಮುಸ್ಲಿಂ ಸಮುದಾಯದ ಬಡಪಾಯಿ ನಿರುದ್ಯೋಗಿಗಳ ಬಗ್ಗೆ ಚರ್ಚಿಸಿಲ್ಲ, ಸಮುದಾಯದ ಕಷ್ಟಗಳಿಗೆ ಸ್ಪಂದಿಸಿದ ಉದಾಹರಣೆಯೇ ಇಲ್ಲ.

ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಫತ್ವಾ ಹೇಳಿಕೆಯನ್ನು ಅನುಸರಿಸುವ ಒತ್ತಡ ಯಾರ ಮೇಲೆಯೂ ಸಲ್ಲದು ಎನ್ನುವುದನ್ನು ಕಳೆದ ಬಾರಿ ಸುಪ್ರೀಂ ಕೋರ್ಟ್ ಸೂಚನೆ ನೀಡಿತ್ತು. ಇದಾಗ್ಯೂ ಉತ್ತರ ಪ್ರದೇಶದ ಇಬ್ಬರು ಬಡಪಾಯಿ ಮುಸ್ಲಿಂ ಯುವಕರು ನಡೆಸುತ್ತಿದ್ದ ಸೆಲೂನ್ ವಿರು... ದಾರೂಲ್ ಉಲೂಂ ವಿವಿ ಫತ್ವಾ ಹೊರಡಿಸಿರು... ಖಂಡನೀಯ.

- ಇರ್ಷಾದ್ ಮುಹಮ್ಮದ್, ಕಿನ್ನಿಗ...

ಕಲಾಂ, ಭಾರತದಲ್ಲಿ ಮತ್ತೆ ಹುಟ್ಟಬೇ...

ನಮ್ಮ ಮಾಜಿ ರಾಷ್ಟ್ರಪತಿ ಡಾ.ಕಲಾಂ ತೀರಿ... ಮೇಲೆ ಎಲ್ಲರೂ ಹಾರೈಸಿದ್ದು "ಮತ್ತೆ ಭಾರತದಲ್ಲೇ ... ಬನ್ನಿ" ಎಂದು. ಒಂದೊಮ್ಮೆ ಅವರು ಭಾರತದ...



ಹುಟ್ಟಿ ಬಂದರೆನ್ನಿ, ಆಗ ನಮ್ಮ ಭ್ರಷ್ಟ ಸಮಾಜ ಅ... ಮತ್ತೆ ಅಷ್ಟೇ ದೊಡ್ಡ ವಿಜ್ಞಾನಿಯಾಗಲು ಹಾಗೂ ನಿ... ದೇಶಸೇವೆ ಮಾಡಲು ಬಿಡುತ್ತದೆಯೇ? ಮತ್ತೆ ಹುಟ... ಅವರೇನೂ ಹಿಂದಿನ ಜನುಮದಲ್ಲಿ ನಾನು ಡಾ... ಆಗಿದ್ದೆ ಎಂಬ ಹಣೆಪಟ್ಟಿಯೊಂದಿಗೆ ಹುಟ್ಟು... ಸಾಧಾರಣ ಮಗುವಾಗಿ ಹುಟ್ಟುತ್ತಾರೆ. ಬಡ ಹಿಂ... ಜಾತಿಯ ಅಥವಾ ಅಲ್ಪಸಂಖ್ಯಾತ ಜನಾಂಗದ ... ಕುಟುಂಬದಲ್ಲಿ ಹುಟ್ಟಿಬಂದರೆ ಆಗ ಅವರ ಬಾಲ್ಯ ... ಸಾಮಾಜಿಕ ಸ್ಥಿತಿಗೆ ಅನುಗುಣವಾಗಿ ಕಷ್ಟದಲ್ಲಿಯೇ ... ಸರಕಾರಿ ಶಾಲೆಗೆ ಹೋಗಿ ಅಲ್ಲಿ ಎಷ್ಟೇ ಪ್ರತಿಭೆ ತೋರಿ... ಟೀಚರ್‌ಗಳಿಂದ ತಾರತಮ್ಯ ಮತ್ತು ನಿರ್ಲಕ್ಷ್ಯಕ್ಕೆ ಬ... ಅವರ ಎಲ್ಲಾ ಪ್ರತಿಭೆ ಪ್ರಾಥಮಿಕ ಶಾಲೆಯ... ಒಣಗಿಹೋಗುತ್ತದೆ. ಹೇಗೋ ಕಾಲೇಜಿಗೆ ಹೋ... ಮಟ್ಟಿಗೆ ಹಠ ಹಿಡಿದು ಕಲಿತರೂ ನಂತರ ... ಕಾಲೇಜುಗಳ ಭಾರಿ ಫೀಸು, ಭಯಂಕರ ಕ್ಯಾಪಿಟೇ... ಕಾಟ ಮತ್ತು ವ್ಯಾಪಂನಂತಹ ಮೋಸದಿಂದಾಗಿ ... ಇಂಜಿನಿಯರಿಂಗ್ ಕಾಲೇಜಿಗೆ ಹೋಗಲು ಸ... ಆಗುವುದಿಲ್ಲ. ಕೊನೆಗೆ ಹೇಗೋ ಸಾಮಾನ್ಯ ಪದವಿ ... ನಂತರ ಯಾವುದಾದರೂ ರಾಜಕಾರಣಿಗೆ ... ಬ್ರೋಕರ್‌ಗೆ ಲಂಚ ಕೊಟ್ಟು ಒಂದು ಸರಕಾರಿ ಇಲಾ... ಅಥವಾ ಖಾಸಗಿ ಕಂಪನಿಯಲ್ಲಿ ಗುಮಾಸ್ತ ಹುದ್ದೆ ... ಅಲ್ಲಿಯ ಮಹಾಭ್ರಷ್ಟ ಸಹೋದ್ಯೋಗಿಗಳ ನಡುವ... ಕೈ ಇಟ್ಟುಕೊಳ್ಳಲು ಹೆಣಗಿ, ನೌಕರ ಸಂಘದ ನ... ಕಿರುಕುಳ ಅನುಭವಿಸಿ, ಜಾತಿ-ಜನಾಂಗ ತಾರತಮ್ಯದ ... ಈಜಾಡಿ, ಕ್ರಿಕೆಟ್ ಕಾಮೆಂಟರಿ ಕೇಳುತ್ತಾ, ಕಳಪೆ ... ನೋಡುತ್ತಾ, ಕುಟುಂಬದ ಮೌಢ್ಯಭರಿತ ಹೆಂ... ದೇವಸ್ಥಾನಗಳಿಗೆ ಸುತ್ತಾಡಿಸುತ್ತಾ ಜೀವನ ಸವೆಸುವ... ಅವರ ಎಲ್ಲಾ ಪ್ರತಿಭೆ ಕಮರಿಹೋಗುತ್ತದೆ. ... ಗುರಿಯಿಲ್ಲದ ಸಾಧನೆಗಾಗಿ ಡಾ.ಕಲಾಂರವರು ಭಾ... ಮತ್ತೆ ಹುಟ್ಟಿಬರಬೇಕೆ?

1931 ರಲ್ಲಿ ಡಾ.ಕಲಾಂ ಹುಟ್ಟುವಾಗ ದೇಶದ... ಮಟ್ಟ ಈಗಿನಷ್ಟು ಕೆಟ್ಟದಾಗಿರಲಿಲ್ಲ, ಆಗ ... ಇಷ್ಟೊಂದು ಧನದಾಹಿ ಮತ್ತು ಸ್ವಾರ್ಥಿಗಳಾಗಿ... ಇಷ್ಟೊಂದು ಕೋಮುವಾದಿಗಳಲ್ಲ. ಬಡತನದ ಹೊ... ಕಲಾಂರವರು ಹಳ್ಳಿಯ ಶಾಲೆಗೆ ಹೋಗಿ ಮುಂದೆ ... ಕಲಿತು ಮದ್ರಾಸಿನ ಪ್ರತಿಷ್ಠಿತ ಎಮ್‌ಐಟಿಯಲ್ಲಿ ... ಮೆರಿಟ್ ಆಧಾರದಲ್ಲಿ ಪ್ರವೇಶ ಪಡೆದು ... ಪರಿಶ್ರಮದಿಂದ ಮುಂದೆ ಬಂದಿದ್ದರು. ಈಗ ಮತ್ತೆ ... ಭಾರತದಲ್ಲಿ ಹುಟ್ಟಿದರೆ ಅಂತಹದ್ದೇ ಸಾಧನೆ ಮ... ಅವರಿಗೆ ನಮ್ಮ ಈಗಿನ ಸ್ವ-ಕೇಂದ್ರಿತ ಸಮಾಜ... ಕೊಡುವುದೇ? ಅದಕ್ಕಾಗಿ ನಾನು ಹೇಳು... ಕಲಾಂರವರೇ ಭಾರತದಲ್ಲಿ ಮತ್ತೆ ಹುಟ್ಟಿ ಬರಬೇ...

- ಪ್ರವೀಣ್ ಎಸ್ ಶೆಟ್ಟಿ, ಮಂಗ...

ವಿ.ಸೂ. : ನಿಮ್ಮ ಅನಿಸಿಕೆಗಳನ್ನು
lankesh70@rediffmail.com
ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು...
ಪ್ರತಿಕ್ರಿಯೆಗಳನ್ನು **9980331427** ನಂಬ...
ಚಿಕ್ಕದಾಗಿ ಮತ್ತು ಚೊಕ್ಕದಾಗಿ **SMS** ಕಳುಹಿಸ...



...ಕ್ಷನ್ ಪಾತ್ರ ನಿರ್ವಹಿಸುವುದು ಕಷ್ಟ: ರಾಧಿಕಾ

...ಡಲ್‌ವುಡ್‌ನ ಬಹುಬೇಡಿಕೆಯ ನಟಿ ...ಧಿಕಾ ಪಂಡಿತ್. ಮೊದಲ ಚಿತ್ರದಿಂದ ...ನ್ನಷ್ಟೇ ಬಿಡುಗಡೆ ಆಗಬೇಕಿರುವ ...ಜೂಮ್' ಚಿತ್ರದವರೆಗೂ ವಿಭಿನ್ನ ...ಪಾತ್ರಗಳನ್ನು ಮಾಡುತ್ತಾ ಬಂದವರು. ...ಬೇಡಿಕೆ ಇದ್ದರೂ ಪರಭಾಷಾ ...ಚಿತ್ರಗಳನ್ನು ಒಪ್ಪದೇ, ...ಕನ್ನಡದಲ್ಲೇ ತಮ್ಮ ಸ್ಥಾನವನ್ನು ...ಭದ್ರಪಡಿಸಿಕೊಂಡಿದ್ದಾರೆ.



* ನಂಬರ್ ಒನ್ ಸ್ಥಾನದ ಪೈಪೋಟಿಯಲ್ಲಿ ...ಇದ್ದೀರಾ?

...ನಂಬರ್ ಒನ್ ಆಗಬೇಕು ಎಂದು ...ಯತ್ತೂ ಆಸೆ ಪಟ್ಟವಳಲ್ಲ ನಾನು. ಒಳ್ಳೆಯ ... ಕೊಡಬೇಕು ಅನ್ನುವುದು ನನ್ನ ಕನಸು. ...ಮಾನಿಗಳು, ಸಿನಿಮಾ ಇಂಡಸ್ಟ್ರಿನವರು ನಂಬರ್ ...ನಾನು ಅಂತೆಲ್ಲ ಕರೆಯುತ್ತಾರೆ. ಸಹಜವಾಗಿಯೇ ... ಆಗುತ್ತದೆ.

...ಕಾಂಪಿಟೇಶನ್ ಎಲ್ಲಾ ಕ್ಷೇತ್ರದಲ್ಲಿಯೂ ಇದೆ, ...ಬೇಕು. ಸ್ಪರ್ಧೆ ಇದ್ದಾಗಲೇ ಬೆಳೆಯೋಕೆ ಸಾಧ್ಯ. ಅದು ಆರೋಗ್ಯ ಪೂರ್ಣವಾಗಿರಬೇಕು. ನಾನು ಯಾರನ್ನೂ ಸ್ಪರ್ಧಾಳು ಅಂದುಕೊಂಡಿಲ್ಲ. ಅದಕ್ಕಾಗಿಯೇ ನಾನು ಕಡಿಮೆ ಚಿತ್ರಗಳಲ್ಲಿ ನಟಿಸಿದ್ದೇನೆ.

* ಸದ್ಯ ಯಾವ ಚಿತ್ರದಲ್ಲಿ ನಟಿಸುತ್ತಿದ್ದೀರಿ?

ಪುನೀತ್ ರಾಜ್‌ಕುಮಾರ್ ಮುಖ್ಯ ಭೂಮಿಕೆಯ 'ದೊಡ್ಮನೆ ಹುಡುಗ' ಚಿತ್ರದಲ್ಲಿ ನಟಿಸುತ್ತಿದ್ದೇನೆ. ಪುನೀತ್ ಜತೆ ಮತ್ತೆ ನಟಿಸುತ್ತಿರುವುದಕ್ಕೆ ಖುಷಿ ಆಗುತ್ತಿದೆ. 'ಜೂಮ್' ಅನ್ನುವ ಮತ್ತೊಂದು ಚಿತ್ರದಲ್ಲಿ ನಟಿಸಿದ್ದೇನೆ. ಅದು ಬಿಡುಗಡೆಗೆ ಸಿದ್ಧವಾಗಿದೆ. ಈ ಚಿತ್ರದಲ್ಲಿ ಗಣೇಶ್ ನಾಯಕ. ಇಲ್ಲಿ ಹೊಸ ರೀತಿಯ ಪಾತ್ರ ಮಾಡಿದ್ದೇನೆ. ಗ್ಲಾಮರ್ ಲುಕ್‌ನಲ್ಲಿ ಕಾಣಿಸಿಕೊಂಡಿದ್ದೇನೆ.

* ಮೊನ್ನೆಯಷ್ಟೇ 'ಮಿಸ್ಟರ್ ಅಂಡ್ ಮಿಸೆಸ್ ರಾಮಾಚಾರಿ' ಚಿತ್ರಕ್ಕೆ ಹತ್ತು ಪ್ರಶಸ್ತಿ ಬಂದಿವೆ. ಅದರಲ್ಲಿ ನಿಮಗೂ ಪ್ರಶಸ್ತಿ ಸಿಕ್ಕಿದೆ. ಪ್ರಶಸ್ತಿ ಮತ್ತು ಅಭಿಮಾನಿಗಳ ಹೊಗಳಿಕೆ ಮಧ್ಯೆ ಯಾವುದು ನಿಮಗೆ ಇಷ್ಟ?

ಪ್ರಶಸ್ತಿ ಸಿಗುತ್ತದೆ ಅಂತ ಯಾವತ್ತೂ ನಾನು ಪಾತ್ರ ಮಾಡಿದವಳಲ್ಲ, ಆಸೆ ಪಟ್ಟವಳೂ ಅಲ್ಲ. ಸ್ಥಾನ ಮತ್ತು ಪ್ರಶಸ್ತಿ ಎರಡೂ ನನಗೆ ಖುಷಿ ಕೊಡುವುದಿಲ್ಲ. ಹೊಗಳಿಕೆಗೆ ಕಿವಿಗೊಡಬೇಡ ಎಂದು ನನ್ನಪ್ಪ ಯಾವಾಗಲೂ ಹೇಳುತ್ತಿರುತ್ತಾರೆ. ನಿಜವಾದ ಪ್ರೇಕ್ಷಕ ಪಾತ್ರವನ್ನು ಮೆಚ್ಚಿಕೊಂಡಾಗ, ಹೆಮ್ಮೆ ಅನಿಸುತ್ತದೆ.

* ಸಿನಿಮಾ ಇಂಡಸ್ಟ್ರಿಯಲ್ಲಿ ನಾಯಕರೇ ಪವರ್‌ಫುಲ್ ಅಂತ ಅನ್ನಿಸುತ್ತಾ?

ಇಲ್ಲಿ ಎಲ್ಲರೂ ತಮ್ಮದೇ ಆದ ಕೆಲಸ ಮಾಡೋಕೆ ಬಂದವರು. ಹೀಗಾಗಿ ಇಲ್ಲಿ ಪವರ್‌ಫುಲ್ ಪ್ರಶ್ನೆ ಉದ್ಭವಿಸಲ್ಲ. ಕನ್ನಡ ಇಂಡಸ್ಟ್ರಿ ಸೇರಿದಂತೆ ಎಲ್ಲಾ ಕಡೆಯೂ ಪುರುಷ ಪ್ರಧಾನ ವ್ಯವಸ್ಥೆ ಇದೆ. ಚಿತ್ರದ ಹೀರೋ ಯಾರು ಎಂದು ಕೇಳುತ್ತಾರೆ ಹೊರತು, ನಾಯಕಿ ಯಾರು ಎಂದು ಕೇಳುವುದಿಲ್ಲ. ಇಂತಹ ವ್ಯವಸ್ಥೆಯಲ್ಲಿ ನಾವೂ ಸ್ಥಾನ ಗಳಿಸುತ್ತೇವೆಯಲ್ಲ, ಅದು ಸಾಧನೆ. ನಾಳೆ ಎಲ್ಲವೂ ಸರಿಹೋಗಬಹುದು.

* ಸಾಹಸ ಪ್ರಧಾನ ಪಾತ್ರಗಳು ಸಿಕ್ಕರೆ, ನೀವು ಆಕ್ಷನ್ ಮಾಡೋಕೆ ರೆಡಿನಾ?

ಎಲ್ಲರೂ ಆಕ್ಷನ್ ಹೀರೋ ಆಗೋಕೆ ಸಾಧ್ಯವಾ? ಹಾಗೆಯೇ ನಾಯಕಿಗೂ ಎಲ್ಲಾ ಪಾತ್ರವನ್ನು ಮಾಡೋಕೆ ಆಗಲ್ಲ. ಅದಕ್ಕೆ ತನ್ನದೇ ಆದ ತಯಾರಿ ಬೇಕಾಗುತ್ತದೆ. ಸದ್ಯಕ್ಕೆ ಅಂತಹ ಪಾತ್ರ ಮಾಡೋಕೆ ಕಷ್ಟ.

* ಗಾಸಿಪ್ ಕೇಳಿಬಂದಾಗ ಏನನಿಸುತ್ತದೆ?

ನಾವು ಕೆಲಸ ಮಾಡುವ ರಂಗಕ್ಕೂ ಗಾಸಿಪ್‌ಗೂ ಅವಿನಾಭಾವ ಸಂಬಂಧವಿದೆ. ಈ ಕಾಲಂಗಳಲ್ಲಿ ಕಾಣಿಸಿಕೊಳ್ಳದ ಕಲಾವಿದರೇ ಇಲ್ಲ. ರೂಮರ್‌ಗಳೆಂದರೆ ಅದು ಸುಳ್ಳು ಸುದ್ದಿ. ತಲೆ ಕೆಡಿಸಿಕೊಳ್ಳಲ್ಲ.

* ಪರ ಭಾಷೆಯ ಸಿನಿಮಾಗಳಲ್ಲಿ ಯಾಕೆ ನಟಿಸುತ್ತಿಲ್ಲ?


ಬೇರೆ ಭಾಷೆಯ ಸಿನಿಮಾಗಳಲ್ಲಿ ಕಾಣಿಸಿಕೊಳ್ಳಬೇಕು ಎಂಬ ಕ್ರೇಜ್ ನನಗಿಲ್ಲ. ಹೀಗಾಗಿಯೇ ನಾನು ಹೋಗುತ್ತಿಲ್ಲ. ಅಲ್ಲದೇ ಇಲ್ಲಿಯೇ ನಾನು ಬಿಝಿ ಆಗಿದ್ದೇನೆ. ಹೀಗಾಗಿ ಕರೆ ಬಂದರೂ, ನಾನು ಅಲ್ಲಿಗೆ ಹೋಗಲ್ಲ. ಈವರೆಗೂ ನನಗೆ ಒಳ್ಳೊಳ್ಳೆ ಪಾತ್ರಗಳು ಸಿಕ್ಕಿವೆ. ಹೆಸರಾಂತ ಕಲಾವಿದರು ಮತ್ತು ನಿರ್ದೇಶಕರ ಜತೆ ಕೆಲಸ ಮಾಡಿದ್ದೇನೆ. ನನಗೆ ಏನು ಬೇಕೋ ಅದು ಸಿಗುತ್ತಿದೆ. ಬೇರೆ ಭಾಷೆಗೆ ಯಾಕೆ ಹೋಗಲಿ? ■

...ಂಬಾರಗೆ ವರುಷ ದೊಣ್ಣೆಗೆ ನಿಮಿಷ

ಮೋದಿ ಸರ್ಕಾರದ "ಅಭಿವೃದ್ಧಿ" ಈ ಹೊತ್ತು ...ದೇಶವನ್ನು ಧನದಾಹಿ ಕಾರ್ಪೊರೇಟು ಧಣಿಗಳು ... ಅವರ ಭ್ರಷ್ಟ ರಾಜಕೀಯ ಸಂಗಾತಿಗಳ ...ಬೊಲವಾಗಿ ಪರಿವರ್ತಿಸಲು ಹೊರಟಿದೆ. ಈ ...ಥಿತ "ಅಭಿವೃದ್ಧಿ"ಯ ಮಹಾಪೂರಕ್ಕೆ ಭಾರತದ ..., ದೀನದಲಿತರು, ಹೊಲಗದ್ದೆಗಳು, ಅರಣ್ಯ ಸಂಪತ್ತು, ...ವರಣಗಳೆಲ್ಲವೂ ಎತ್ತಲೋ ಕೊಚ್ಚಿಹೋಗುತ್ತಿವೆ. ... ಕಡೆ ಜಾಗತೀಕರಣದ ಭಾಗವಾಗಿ ಸಮಾಜ ಕಲ್ಯಾಣ ...ಜನೆಗಳಿಗೆ ಹಣಕಾಸು ಕಡಿತಗೊಳಿಸುತ್ತ ಇನ್ನೊಂದು ...ಪರಿಸರ ಸಂರಕ್ಷಣೆಯನ್ನು ಗಾಳಿಗೆ ತೂರಿ ಎಲ್ಲಾ ...ರು ಉದ್ದಿಮೆಗಳಿಗೆ ಬೇಕಾಬಿಟ್ಟಿ ಪರವಾನಗಿ ...ತ್ತಲಿರುವುದನ್ನು ಇನ್ಯಾವ ರೀತಿಯಲ್ಲಿ ...ನಿಸಬೇಕೊ ತಿಳಿಯುತ್ತಿಲ್ಲ. ಪರವಾನಗಿ ನೀಡುವ ...ಯಲ್ಲಿ ವಿಪರೀತ ವಿಳಂಬಗಳಾಗುತ್ತಿವೆ; ಇದರಿಂದಾಗಿ ... ಅಭಿವೃದ್ಧಿ ಕುಂಠಿತವಾಗುತ್ತಿದೆ ಎಂಬ ನೆಪವೊಡ್ಡಿ ... ಸಂರಕ್ಷಣೆ, ಹಸಿರು ವಲಯ ಸಂರಕ್ಷಣೆ, ಅರಣ್ಯ ...ಣೆ ಮುಂತಾದ ಕಾಯಿದೆಗಳಿಂದ ಪಾರಾಗಲು ...ದಿಗಳನ್ನು ಹಿಡಿಯಲಾಗುತ್ತಿದೆ. ಶೀಘ್ರ ಪರವಾನಗಿಯ ...ನಲ್ಲಿ ನಾಡಿನ ಪರಿಸರವನ್ನು ವಿನಾಶದಂಚಿಗೆ ತಳ್ಳುವ ... ಸದ್ದಿಲ್ಲದೆ ನಡೆಯುತ್ತಿದೆ. ಇಂಥಾ ನೂರಾರು ...ಜನೆಗಳ ಪೈಕಿ ನವಿ ಮುಂಬಯಿ ವಿಮಾನ ನಿಲ್ದಾಣ ...ಜನೆ, ಆಂಧ್ರ ಪ್ರದೇಶದ ಪೋಲಾವರಂ ಯೋಜನೆ, ...ಾಚಲ ಪ್ರದೇಶದ ದಿಬಾಂಗ್ ಯೋಜನೆ ಮುಂತಾದ ... ದೊಡ್ಡ ಯೋಜನೆಗಳನ್ನು ಉದಾಹರಣೆಯಾಗಿ ...ಕೊಳ್ಳಬಹುದು.

...ವಿ ಮುಂಬಯಿಯಲ್ಲಿ ನೂತನ ಎರಡನೆ ವಿಮಾನ ...ಕ್ಕಾಗಿ ಗುರುತಿಸಲಾದ ಪ್ರದೇಶದಲ್ಲಿ ವಿಫುಲ ...ಗ್ರೋವ್ ಪೊದೆಗಳಿವೆ. ಹಲವು ಸಹಸ್ರಮಾನಗಳಿಂದ ...ಬೆಳೆದಿರುವ ಈ ಮ್ಯಾಂಗ್ರೋವ್‌ಗಳು ಸಾವಿರಾರು ...ಳಿಗೆ ಆಶ್ರಯತಾಣಗಳಾಗಿವೆ. ಇಂತಹ ಪರಿಸರಕ್ಕೆ ...ಸೂಕ್ಷ್ಮವಾದ ಮ್ಯಾಂಗ್ರೋವ್‌ಗಳನ್ನು ವಿಮಾನ ...ಕ್ಕೋಸ್ಕರ ಕಡಿಯುವುದಕ್ಕೆ ಪರಿಸರ ಇಲಾಖೆಯ ...ಧವಿತ್ತು, ಆದುದರಿಂದಲೆ ಅದು ಇದುವರೆಗೂ ...ಜನೆಗೆ ಅನುಮತಿ ನೀಡಿರಲಿಲ್ಲ. ಆದರೆ ಈಗ ...ದೋಜರ್ ಮೋದಿ ಸರ್ಕಾರದಡಿ ಎಲ್ಲಾ ...ಗಳನ್ನೂ ಬದಿಗೊತ್ತಲಾಗಿದೆ. ಯೋಜನೆಗೆ ಹಸಿರು ...ತೋರಿಸಿರುವ ಪರಿಸರ ಮಂತ್ರಿ ಪ್ರಕಾಶ ಜಾವಡೇಕರ್, ... ಮ್ಯಾಂಗ್ರೋವ್‌ಗಳಿಗೆ ಬರುವುದನ್ನು ತಡೆಯಬೇಕು ... ಅಸಾಧ್ಯ ಷರತ್ತನ್ನು ವಿಧಿಸಿದ್ದಾರೆ. ಅಂದರೆ ...ಗ್ರೋವ್ ಕಡಿಯಿರಿ ಎಂದು ನೇರವಾಗಿ ಹೇಳುವ ... ಅದನ್ನು ಸುತ್ತಿ ಬಳಸಿ ಪರೋಕ್ಷವಾಗಿ ...ಲಾಗಿದೆ!

...ಧ್ರ ಪ್ರದೇಶದ ನೂತನ, ಮೋದಿ ಬೆಂಬಲಿಗ ಮುಖ್ಯಮಂತ್ರಿ ಈಗಾಗಲೆ ರಾಜ್ಯದ ಬೃಹತ್ ಪೋಲಾವರಂ ಅಣೆಕಟ್ಟು ಹಾಗೂ 950 ಮೆವಾ ಸಾಮರ್ಥ್ಯದ ಜಲ ವಿದ್ಯುತ್ ಸ್ಥಾವರ ಯೋಜನೆಗೆ ಮೋದಿ ಸರ್ಕಾರದ ಬೆಂಬಲ ಪಡೆದುಕೊಂಡಾಗಿದೆ.



ವಿಶಾಖಪಟ್ಟಣ-ಕಾಕಿನಾಡ ಕರಾವಳಿ ಕಾರಿಡಾರ್‌ನ ಪೆಟ್ರೊಕೆಮಿಕಲ್ ಹೂಡಿಕೆ ವಲಯಕ್ಕೂ (ಪಿಸಿಪಿಐಆರ್) ಕೇಂದ್ರದಿಂದ ಸಕಲ ಸಹಕಾರದ ಭರವಸೆ ದೊರೆತಿದೆ.

ಇನ್ನೊಂದು ಮಹತ್ವಾಕಾಂಕ್ಷಿ ಯೋಜನೆಯಾದ ಸೋಮ್‌ಪೇಟ ವಿದ್ಯುತ್ ಸ್ಥಾವರಕ್ಕೆ ರಾಷ್ಟ್ರೀಯ ಹಸಿರು ನ್ಯಾಯಾಲಯದ ಅನುಮತಿ ದೊರೆತಿರಲಿಲ್ಲ. 2012ರಲ್ಲಿ ನ್ಯಾಯಾಲಯ ಪರವಾನಗಿ ರದ್ದುಪಡಿಸಿದ ಸಂದರ್ಭದಲ್ಲಿ ಪರಿಸರ ಸೂಕ್ಷ್ಮ ಪ್ರದೇಶಗಳ ಸಮೀಕ್ಷೆ ನಡೆಸುವಂತೆ ಸರ್ಕಾರಕ್ಕೆ ಸೂಚಿಸಿತ್ತು. ಆದರೆ ಇಂದು ನ್ಯಾಯಾಲಯದ ಆದೇಶಕ್ಕೆ ಕ್ಯಾರೆ ಎನ್ನದೆ ಅದೇ ಜಾಗದಲ್ಲಿ ಸುಮಿಟೊಮೊ ಯೋಜನೆಯನ್ನು ಸ್ಥಾಪಿಸಲು ಸಿದ್ಧತೆಗಳಾಗುತ್ತಿವೆ.

ಅರುಣಾಚಲ ಪ್ರದೇಶದ ಉದ್ದೇಶಿತ 3000 ಮೆವಾ ಸಾಮರ್ಥ್ಯದ ವಿವಿಧೋದ್ದೇಶ ದಿಬಾಂಗ್ ಜಲ ವಿದ್ಯುತ್ತು ಯೋಜನೆ ಗಾತ್ರದಲ್ಲಿ ನರ್ಮದಾ ಯೋಜನೆಯನ್ನೂ ಮೀರಿಸುತ್ತದೆ. ಈ ಯೋಜನೆ ಮಾತ್ರವಲ್ಲ ಇನ್ನೂ ಹಲವಾರು ಯೋಜನೆಗಳಿಂದಾಗಿ ಪರಿಸರದ ಮೇಲೆ ಆಗಬಹುದಾದ ಪರಿಣಾಮಗಳ ಕುರಿತು ಸರಿಯಾದ ಅಧ್ಯಯನ ನಡೆದಿಲ್ಲ. ಈ ಹಿಂದೆ ಎರಡು ಬಾರಿ ತಿರಸ್ಕರಿಸಲ್ಪಟ್ಟಿರುವ ಈ ಯೋಜನೆಗೆ ಮೋದಿ ಸರ್ಕಾರ ಮರುಜೀವ ಒದಗಿಸಿದೆ.

ಈಗಾಗಲೆ ಪರಿಸರ ಸಂರಕ್ಷಣೆ ಬಗ್ಗೆ ಅಧ್ಯಯನ ನಡೆಸಿರುವ ಗಾಡ್ಗೀಲ್ ಸಮಿತಿ, ಕಸ್ತೂರಿರಂಗನ್ ಸಮಿತಿ ಮುಂತಾದವು ಅಭಿವೃದ್ಧಿ ಮತ್ತು ಪರಿಸರ ಎರಡನ್ನೂ ಮನಸ್ಸಿನಲ್ಲಿಟ್ಟುಕೊಂಡು ಕಾನೂನುಗಳಲ್ಲಿ ಸುಧಾರಣೆ ತರಲು ಸಲಹೆ ಮಾಡಿವೆ. ಆದರೆ ಮೋದಿ ಸರ್ಕಾರಕ್ಕೆ ಅದ್ಯಾವುದೂ ಬೇಕಾಗಿಲ್ಲ. ಅದು ರಾಷ್ಟ್ರೀಯ ಹಸಿರು ನ್ಯಾಯಾಲಯ (NGT) ಮತ್ತು ಪರಿಸರೀಯ ಪರಿಣಾಮಗಳ ಅಂದಾಜು ಪ್ರಕ್ರಿಯೆ (EIA)ಗಳನ್ನು ಪೂರ್ತಿ ದುರ್ಬಲಗೊಳಿಸಲು ಕಾತರದಿಂದಿದೆ. ರಾಷ್ಟ್ರೀಯ ಹಸಿರು ನ್ಯಾಯಾಲಯಕ್ಕೆ ಪ್ರಕರಣಗಳನ್ನು ಕಾನೂನುಬದ್ಧತೆ ಒಂದೇ ಅಲ್ಲದೆ ಅರ್ಹತೆಯ ಆಧಾರದ ಮೇರೆಗೂ (ನಿರ್ದಿಷ್ಟ ಜಾಗಕ್ಕೆ ಸೀಮಿತ ಆಗಬೇಕಿಲ್ಲ) ಮರುಪರಿಶೀಲನೆ ನಡೆಸಿ ತೀರ್ಮಾನಕ್ಕೆ ಬರುವ ಅಧಿಕಾರ ಇದೆ. ಆದರೆ ಮೋದಿ ಸರ್ಕಾರ ಇವತ್ತು ನ್ಯಾಯಾಲಯದ ಅಧಿಕಾರಗಳನ್ನು ಮೊಟಕುಗೊಳಿಸಿ ಅದನ್ನು ದುರ್ಬಲಗೊಳಿಸಲು ಮುಂದಾಗಿದೆ.

ಮೋದಿ ಸರ್ಕಾರ ಇತ್ತೀಚೆಗೆ ಟಿ.ಎಸ್.ಆರ್ ಸುಬ್ರಮಣ್ಯಂ ಸಮಿತಿಯನ್ನು ನೇಮಿಸಿದ ಉದ್ದೇಶವೆ ಈಗಿರುವ ಸಂರಕ್ಷಣಾ ವ್ಯವಸ್ಥೆಯನ್ನು ಮುರಿದು ಉದ್ದಿಮೆಗಳು ತಮಗೆ ತಾವೇ ಸರ್ಟಿಫಿಕೇಟು ಕೊಟ್ಟುಕೊಳ್ಳುವ ವ್ಯವಸ್ಥೆಯನ್ನು ಜಾರಿಗೊಳಿಸುವುದಾಗಿದೆ. ಸಂಸತ್ತಿನ ಸಮಿತಿಯೊಂದು ಈಗಾಗಲೆ ಈ ವರದಿಯನ್ನು ತಿರಸ್ಕರಿಸಿದೆ. ಆದರೂ ಸುಬ್ರಮಣ್ಯಂ ಸಮಿತಿಯ ಸಲಹೆಯಂತೆ ಸರ್ಕಾರಿ ಕಚೇರಿಗಳಿಂದ ಸುತ್ತೋಲೆ, ತಿದ್ದುಪಡಿ, ಅನೌಪಚಾರಿಕ ಪತ್ರಗಳನ್ನು ಕಳುಹಿಸುವ ಮೂಲಕ ನಿಯಮಗಳಲ್ಲಿ ಮಾರ್ಮಿಕ ಬದಲಾವಣೆಗಳನ್ನು ತರಲಾಗುತ್ತಿದೆ.

ಅರಣ್ಯವಾಸಿಗಳ ಹಕ್ಕುಗಳು, ಕಾಡುಪ್ರಾಣಿಗಳ ನೈಸರ್ಗಿಕ ನೆಲೆಗಳು ಮತ್ತು ದಟ್ಟಡವಿಗಳ ಸಂರಕ್ಷಣೆಗಾಗಿರುವ ಅನೇಕ ನಿಯಮಗಳನ್ನು ದುರ್ಬಲಗೊಳಿಸಿ ಬಂಡವಾಳಿಗರಿಗೆ ಕೆಂಪು ಕಂಬಳಿಯನ್ನು ಹಾಸಲಾಗುತ್ತಿದೆ. ಅರಣ್ಯ ಹಕ್ಕು ಕಾಯ್ದೆಯ ವಿಷಯಕ್ಕೆ ಬಂದರೆ ಅರಣ್ಯವಾಸಿಗಳ ಹಕ್ಕುಗಳನ್ನು ಒಪ್ಪಿಕೊಳ್ಳುವ ನಿಟ್ಟಿನಲ್ಲಿ ಇದುವರೆಗೂ ಯಾವುದೇ ಪ್ರಯತ್ನಗಳು ಆಗದಿರುವುದನ್ನು ಕಾಣಬಹುದು. ಒಟ್ಟು ಲಭ್ಯವಿರುವ ಅರಣ್ಯಪ್ರದೇಶದಲ್ಲಿ (ಸುಮಾರು 40 ಕೋಟಿ ಹೆಕ್ಟೇರ್) ಕೇವಲ ಶೇಕಡಾ 1.2ರಷ್ಟು ವಿಸ್ತೀರ್ಣದಲ್ಲಷ್ಟೆ ಸಾಮುದಾಯಿಕ ಅರಣ್ಯ ಸಂಪನ್ಮೂಲ ಹಕ್ಕುಗಳನ್ನು ಗುರುತಿಸಲಾಗಿದೆ. ಆದರೆ ಮೂಲಗಳ ಪ್ರಕಾರ ಅರಣ್ಯ ಇಲಾಖೆಯ ಅಧಿಕಾರಶಾಹಿ ಈ ಹಕ್ಕುಗಳಿಗೆ ಅಡ್ಡಿ ಉಂಟುಮಾಡಲು ಅಥವಾ ಬುಡಮೇಲುಗೊಳಿಸಲು ಪ್ರಯತ್ನಿಸುತ್ತಿದೆ. ಮೋದಿ ಸರ್ಕಾರಕ್ಕೆ ಅರಣ್ಯವಾಸಿಗಳಿಗೆ ಹಕ್ಕು ನೀಡುವುದಕ್ಕಿಂತ ಕಾರ್ಪೊರೇಟುಗಳನ್ನು ಸಂತುಷ್ಟಪಡಿಸುವುದೇ ಮುಖ್ಯವಾಗಿದೆ. ಬಾಯಲ್ಲಿ ದುಗುದುಗ ಹೊಟ್ಟೆಯಲ್ಲಿ ಧಗಧಗ ಎಂಬ ಆಡುಮಾತಿನಂತೆ ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಹವಾಮಾನ ಬದಲಾವಣೆ ಬಗ್ಗೆ ಉದ್ದುದ್ದ ಭಾಷಣ ಬಿಗಿಯುವವರು ತಮ್ಮದೇ ನೆಲದಲ್ಲಿ ಸರ್ಕಾರದ "ಅಭಿವೃದ್ಧಿ" ಮಾದರಿಗಳನ್ನು ಪ್ರಶ್ನಿಸುವ ಪರಿಸರವಾದಿಗಳ ಮೇಲೆ ದಿಗ್ಬಂಧನ ಹೇರುವ ವಿಪರ್ಯಾಸ ನಮ್ಮ ಮುಂದಿದೆ. ಗ್ರೀನ್‌ಪೀಸ್ ಸಂಸ್ಥೆಗೆ ನೀಡುತ್ತಿರುವ ಕಿರುಕುಳಗಳ ಸರಮಾಲೆ ಇನ್ನೂ ಹಸಿರಾಗಿದೆ.


ಮೋದಿ ಸರ್ಕಾರದಡಿ ಯೋಜನೆಗಳಿಗೆ ಪರವಾನಗಿ ನೀಡುವ ಜವಾಬ್ದಾರಿಯನ್ನು ಕೇಂದ್ರದಿಂದ ರಾಜ್ಯಗಳಿಗೆ ವರ್ಗಾಯಿಸಲಾಗಿದೆ. ಇದರರ್ಥ ಇನ್ನು ಮುಂದೆ ಉಷ್ಣ ವಿದ್ಯುತ್ ಸ್ಥಾವರ, ನೀರಾವರಿ, ಗಣಿಗಾರಿಕೆ ಮುಂತಾದ ಯೋಜನೆಗಳ ಬಗ್ಗೆ ರಾಜ್ಯಗಳು ತಮಗೆ ಬೇಕಾದಂತೆ ನಿರ್ಧಾರ ಕೈಗೊಳ್ಳಬಹುದು. ಇದರ ಜೊತೆಗೆ ಸಾರ್ವಜನಿಕ ಅಹವಾಲು ಪ್ರಕ್ರಿಯೆಯನ್ನೂ ದುರ್ಬಲಗೊಳಿಸಲಾಗಿದೆ. ಪೈಪ್‌ಲೈನ್ ಅಳವಡಿಕೆ, ರೈಲುಮಾರ್ಗ ನಿರ್ಮಾಣಗಳಂತಹ ಯೋಜನೆಗಳ ವಿಷಯದಲ್ಲಿ ಗ್ರಾಮಸಭೆಗಳಿಗೆ ಯಾವ ಹಕ್ಕೂ ಇಲ್ಲವೆಂದಾಗಿದೆ. ಆದರಲ್ಲೂ ಕೇರಳದ ಪರಿಸ್ಥಿತಿ ತೀರ ಕೆಟ್ಟದಾಗಿದೆ. ಅರಣ್ಯ ಮತ್ತು ಅರಣ್ಯದ ಲಘು ಉತ್ಪನ್ನಗಳ ಮೇಲೆ ಕೇವಲ ಒಂದು ಗ್ರಾಮಸಭೆಗೆ (ಮಲಕ್ಕಪರ) ಅದೂ ಭಾಗಶಃ ಹಕ್ಕು ನೀಡಿರುವುದನ್ನು ಬಿಟ್ಟರೆ ಮಿಕ್ಕ ಸಾವಿರಕ್ಕೂ ಅಧಿಕ ಗ್ರಾಮಸಭೆಗಳ ಹಕ್ಕುಗಳನ್ನು ಪೂರ್ತಿ ಕಸಿದುಕೊಳ್ಳಲಾಗಿದೆ.

ಒಟ್ಟಾರೆಯಾಗಿ ನೆಲ, ಜಲ, ಕಾಡು ಮತ್ತು ಗಾಳಿಯ ಸಂರಕ್ಷಣೆಗಾಗಿರುವ ಕಾನೂನುಗಳನ್ನು ಬಾಹ್ಯಕ್ಕ ವಿಧಾನಗಳ ಮೂಲಕ ಬಹು ಜಾಗರೂಕತೆಯಿಂದ ದುರ್ಬಲಗೊಳಿಸಲಾಗುತ್ತಿದೆ. ದೇಶವನ್ನು "ಅಭಿವೃದ್ಧಿ" ಮಾಡಲು ಬುಲೆಟ್ ವೇಗದಲ್ಲಿ ಮುನ್ನುಗ್ಗುತ್ತಿರುವ ಮೋದಿ ಸರ್ಕಾರ ಪ್ರಕೃತಿಯು ಲಕ್ಷಾಂತರ ವರ್ಷಗಳಲ್ಲಿ ಬೆಳೆಸಿದ ಸಮೃದ್ಧ ಹಸಿರನ್ನು ಕೆಲವೇ ದಶಕಗಳೊಳಗಾಗಿ ನಾಶವಾಗಲು ಮಾಡಿಕೊಟ್ಟಿರುವಂತಿದೆ.

(ಆಧಾರ: *Red Signal for Greens*, ಔಟ್‌ಲುಕ್ 10.8.2015)

ಬೂಸಿ ಬಸ್ಯ... ಮೋದಿ!

75



Registered No.RNP/KA/BGS/2036/2014-16 Posted at :BGPSO, Mysore Road, Bangalore-26 Friday R B P LANKESH, Kannada Weekly Price Rs. 15/- 26-08-2015 RNI No. KARKAN




ಶುಭಾ ಪೂಂಜಾ

ಕ್ರಾಂತಿ ಕಹಳೆ ಊದಿದ ಶು...

ಶುಭಾ ಪೂಂಜಾ ಎಲ್ಲಿ ಹೋದರು ಎಂಬ ಪ್ರಶ್ನೆ ಮೂಡುವ ಮುನ್ನವೇ, ಹೊಸ ಚಿತ್ರಕ್ಕೆ ... ಸುದ್ದಿ ಆಗಿದ್ದಾರೆ. ಈ ಸಲ ಅವರು ಸ್ವಾತಂತ್ರ್ಯ ಪೂರ್ವ ಕಥಾವಸ್ತು ಹೊಂದಿರುವ 'ಕ್ರಾಂ... ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಇದೇ ಮೊದಲ ಬಾರಿಗೆ ಶುಭಾ ಇಂಥ ಪಾತ್ರದಲ್ಲಿ ಕಾಣಿಸಿಕೊ...

ಹಿರಿಯ ನಿರ್ದೇಶಕ ಎ.ಆರ್.ಬಾಬು ಅನಾರೋಗ್ಯದ ನಡುವೆಯೂ ಈ ಚಿತ್ರಕ್ಕೆ ಆ... ಹೇಳಿದ್ದು ವಿಶೇಷ. ಕುಶಾಲನಗರ, ಮಡಿಕೇರಿ, ಮೈಸೂರು ಹಾಗೂ ಬೆಂಗಳೂರು ಸುತ್ತಮು...ರಿಂದ 1942ರ ದಿನಮಾನದ ಸಂದರ್ಭಕ್ಕೆ ತಕ್ಕಂತೆ ಸ್ಥಳಗಳನ್ನು ಹುಡುಕಿ, ಈ ಸಿನಿ... ಚಿತ್ರೀಕರಿಸಿದ್ದಾರೆ ನಿರ್ದೇಶಕರು. ಸಿನಿಮಾದ ಮತ್ತೊಂದು ವಿಶೇಷ ಅಂದರೆ, ದ... ಸಿದ್ದಲಿಂಗಯ್ಯ ಸಾಹಿತ್ಯ ಹಾಗೂ ಸಂಭಾಷಣೆ ರಚಿಸಿದ್ದಾರೆ. ಅನೇಕ ಘಟನೆಗಳು ಸಿದ್ದಲಿಂ... ಕಡೆಯಿಂದ ಅನಾವರಣಗೊಂಡಿವೆ.

'ತರ್ಲೆ' ಚಿತ್ರದಲ್ಲಿ ರವಿಚಂದ...



ಸ್ಯಾಂಡಲ್‌ವುಡ್ ನಾಯಕರ ಕಾಲೆಳೆತ ಜಾಸ್ತಿ ಆಗುತ್ತಿದೆ. ಎಲ್ಲಾ ನಾಯಕರನ್ನು 'ಉಪ್ಪಿ 2' ಚಿತ್ರದ ಹಾಡಿನ ಮೂಲಕ ಉಪೇಂದ್ರ ಕಾಲೆಳೆದರೆ, 'ತರ್ಲೆ ನನ್ಮಕ್ಳು' ಸಿನಿಮಾದ ನಿರ್ದೇಶಕ ರಾಕೇಶ್ ಕೂಡ ಅದೇ ಹಾದಿ ಹಿಡಿದಿದ್ದಾರೆ. ತಮ್ಮ ಚಿತ್ರದಲ್ಲಿ ನಿರ್ದೇಶಕ ರವಿಚಂದ್ರನ್ ಅವರ ನಟನೆಯ ಅನುಕರಣೆ ಮಾಡಿಸಿದ್ದಾರೆ. ರವಿಚಂದ್ರನ್ ಸಿನಿಮಾ, ಅವರ ಹಾಡಿನ ಸ್ಟೈಲ್, ನಾಯಕಿಯರ ಜತೆಗಿನ ರೊಮ್ಯಾನ್ಸ್ ಎಲ್ಲವೂ ಯಥಾವತ್ತಾಗಿವೆ. ಹೀಗಾಗಿಯೇ ಸೆನ್ಸಾರ್ ಮಂಡಳಿಯು, ಈ ಚಿತ್ರಕ್ಕೆ ಯಾವುದೇ ಸರ್ಟಿಫಿಕೇಟ್ ನೀಡದೆ, ಮುಂದಿನ ಹಂತಕ್ಕೆ ಸಾಗ ಹಾಕಿದೆ.

'ತರ್ಲೆ ನನ್ಮಕ್ಳು' ಸಿನಿಮಾದ ನಾಯಕ ರವಿಚಂದ್ರನ್ ಅವರ ಅಪ್ಪಟ ಅಭಿಮ... ತನ್ನ ನೆಚ್ಚಿನ ನಾಯಕ ರವಿಚಂದ್ರನ್ ರೀತಿಯಲ್ಲೇ ಆತ ಬದುಕು ನಡೆಸುತ್ತಾನೆ. ಹಿ... ರವಿಚಂದ್ರನ್ ಅವರ ಸಿನಿಮಾದ ದೃಶ್ಯಗಳಂತೆ ಇಲ್ಲಿಯೂ ಸಾಕಷ್ಟು ಹಾಟ್ ... ರಿವೈಸಿಂಗ್ ಕಮಿಟಿ ಮುಂದೆ ಈ ಸಿನಿಮಾ ಹೋಗಿತ್ತು, ಅಲ್ಲಿಯೂ ಕತ್ತರಿ... ಸೂಚನೆ ನೀಡಲಾಗಿದೆ. ಇದನ್ನು ಒಪ್ಪದ ನಿರ್ದೇಶಕ ಟ್ರಿಬ್ಯೂನಲ್‌ಗೆ ಹೋಗಿದ್ದಾ...


ಧನಂಜಯ್ ಹೊಸ ಚ...



ಹಲವು ಸಿನಿಮಾಗಳಲ್ಲಿ ಬಿಜಿ ಆಗಿರುವ ಧನಂಜಯ್ ಈ ನಡುವೆಯೂ ಮತ್ತೊಂದು ಚಿತ್ರಕ್ಕೆ ಸಹಿ ಮಾಡಿದ್ದಾರೆ. ಈ ಚಿತ್ರವನ್ನು ಹೆಸರಾಂತ ನಿರ್ಮಾಪಕ ಜಯಣ್ಣ ಮತ್ತು ಭೋಗೇಂದ್ರ ನಿರ್ಮಾಣ ಮಾಡುತ್ತಿದ್ದಾರೆ. ವಿಖ್ಯಾತ್ ಎಂಬ ನವ ನಿರ್ದೇಶಕ ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳುತ್ತಿದ್ದಾರೆ. ಪವನ್ ಒಡೆಯರ್ ಸೇರಿದಂತೆ ಇತರ ನಿರ್ದೇಶಕರ ಜತೆ ಕೆಲಸ ಮಾಡಿರುವ ವಿಖ್ಯಾತ್‌ಗೆ ಇದು ಚೊಚ್ಚಲು ಸಿನಿಮಾ.

ಇದೊಂದು ಟ್ರಾವೆಲಿಂಗ್ ಸ್ಟೋರಿ. ಕಾಶ್ಮೀರದಿಂದ ಕನ್ಯಾಕುಮಾರಿವರೆಗಿನ ಪ್ರವಾಸದಲ್ಲಿ ಏನೆಲ್ಲ ಘಟನೆಗಳು ನಡೆಯುತ್ತವೆ. ಅದಕ... ಮತ್ತು ನಾಯಕಿ ಹೇಗೆ ಸ್ಪಂದಿಸುತ್ತಾರೆ ಅನ್ನುವ ಕತೆ ಇಲ್ಲಿದೆ. ಇದು ಟ್ರಾವೆ... ಆಗಿರುವುದರಿಂದ ನಿರ್ದೇಶಕರು ಅಪರೂಪದ ಲೊಕೇಶನ್ ನೋಡಿದ್ದಾರೆ. ಸಾಕಷ... ಮಾಡಿಕೊಂಡೇ ಶೂಟಿಂಗ್‌ಗೆ ಹೊರಡಲಿದ್ದಾರೆ.

ಬೊಗಳೆ ಪ್ರೇಮ್



'ಜೋಗಿ' ಪ್ರೇಮ್ ಸುಮ್ಮನೆ ಕುಳಿತುಕೊಳ್ಳುವ ಆಸಾಮಿಯೇ ಅಲ್ಲ. ಪ್ರಚಾರದಲ್ಲಿ ಇರದೇ ಇದ್ದರೆ ಅವರಿಗೆ ತಿಂದದ್ದು ಅರಗುವುದಿಲ್ಲ. ಹೀಗಾಗಿ ಸದಾ ಸುಳ್ಳು ಸುದ್ದಿಯನ್ನು ತೇಲಿಬಿಡುತ್ತಲೇ ಇರುತ್ತಾರೆ. ಈಗ ಬಿಚ್ಚಿಟ್ಟ ಪುರಾಣದಂತೆ ಅವರು ನೂರು ಕೋಟಿಯಲ್ಲಿ ಸಿನಿಮಾ ಮಾಡುತ್ತಾರಂತೆ: ಐವತ್ತು ಕೋಟಿ ರೂಪಾಯಿಯನ್ನು ಕಲಾವಿದರ ಸಂಭಾವನೆಗೆ ಅವರು ಮೀಸಲಿಡುತ್ತಾರಂತೆ.

ಪ್ರೇಮ್ ಹೇಳಿದ್ದೆಲ್ಲ ನಿಜ ಅಲ್ಲ ಅನ್ನುವುದು ಬಹುತೇಕರಿಗೆ ಗೊತ್ತಿದ್ದರೂ, ಐವತ್ತು ಕೋಟಿ ತೆಗೆದುಕೊಂಡು ನಟಿಸುವ ನಟ ಯಾರು? ಎಂಬ ಕುತೂಹಲ ಗಾಂಧಿನಗರದಲ್ಲಿ ಮೂಡಿದೆ. ಐವತ್ತು ಕೋಟಿಯ ನಟನ ಬಗ್ಗೆ ಚರ್ಚೆ ಶುರುವಾಗುತ್ತಿದ್ದಂತೆಯೇ, ಆ ನಟ ಸುದೀಪ್ ಎಂದು ಹೇಳುತ್ತಿವೆ ಪ್ರೇಮ್ ಆಪ್ತ ವಲಯ: ಕನ್ನಡದ ನಂಬರ್ ವನ್ ನಟನಿಗೇ ನಾಲ್ಕು ಕೋಟಿ ಕೊಡಲು ನಿರ್ಮಾಪಕ ಹಿಂದೇಟು ಹಾಕುವಾಗ, ಐವತ್ತು ಕೋಟಿ ಸಂಭಾವನೆ ಕೇಳಿ ಗಾಂಧಿನಗರ ನಗುತ್ತಿದೆ. ಅಲ್ಲದೇ ಇದು ನೂರು ಕೋಟಿ ಸಿನಿಮಾ ಅನ್ನುವುದನ್ನು ಕೇಳಿ ಬೆಚ್ಚಿದೆ. ಆದರೂ, ಇದು ನಿಜ ಅನ್ನುತ್ತಾರೆ ಪ್ರೇಮ್. ಮೂರು ಭಾಷೆಯಲ್ಲಿ ಈ ಸಿನಿಮಾವನ್ನು ನಿರ್ಮಾಣ ಮಾಡುತ್ತಿದ್ದಾರಂತೆ. ಅಲ್ಲದೇ ಭಾರೀ ಬಜೆಟ್‌ಗೆ ಹೆಸರಾಗಿರುವ ಸಿ.ಆರ್.ಮನೋಹರ್ ಚಿತ್ರಕ್ಕೆ ಬಂಡವಾಳ ಹೂಡಿದ್ದಾರಂತೆ. ಇದು ಸೆಟ್ಟೇರುವುದು ಮಾತ್ರ ಇನ್ನೆರಡು ವರ್ಷವಂತೆ.



ಅದಿತಿ ಕನಸು

'ಹುಚ್ಚು ಹುಡುಗ್ರು' ಸಿನಿಮಾದ ನಂತರ ಅದಿತಿ ರಾವ್ ನಟನೆಯ ಯಾವ ಚಿತ್ರಗಳೂ ಬಿಡುಗಡೆ ಆಗಿಲ್ಲ. ಹೀಗಾಗಿ 'ದವ್' ಚಿತ್ರದ ಬಗ್ಗೆ ಅವರಿಗೆ ಸಾಕಷ್ಟು ನಿರೀಕ್ಷೆ ಇದೆ. ಇದೇ ಅವರ ಚೊಚ್ಚಲು ಸಿನಿಮಾ ಆಗಿದ್ದರೂ ಈವರೆಗೂ ಅದಕ್ಕೆ ಬಿಡುಗಡೆಯ ಭಾಗ್ಯ ಸಿಕ್ಕಿಲ್ಲ. ಮುಂದಿನ ತಿಂಗಳು ರಿಲೀಸ್ ಮಾಡುವ ಪ್ಲ್ಯಾನ್ ನಿರ್ಮಾಪಕರದ್ದು. ಹೀಗಾಗಿ ಅವರಿಗೆ ನಿರೀಕ್ಷೆ ಇಮ್ಮಡಿ ಆಗಿದೆ.

'ದವ್'ನಲ್ಲಿ ಇವರು ಬಬ್ಲಿ ರೀತಿಯ ಪಾತ್ರ ಮಾಡಿದ್ದಾರೆ. ತುಂಬಾ ಗ್ಲಾಮರ್ ಪಾತ್ರವೇನಲ್ಲ. ಮಧ್ಯಮ ವರ್ಗದ ಹುಡುಗಿಯ ಪಾತ್ರವದು. ಹೀಗಾಗಿ ಈ ಪಾತ್ರ ಎಲ್ಲರ ಮನಸ್ಸಲ್ಲಿ ಮೂಡುತ್ತದೆ ಎಂಬ ವಿಶ್ವಾಸ ಅವರದ್ದು.

ಸಿನಿಮಾದಲ್ಲಿ ನಟಿಸುತ್ತಲೇ ಓದಬೇಕು ಎಂಬ ಆಸೆ ಅವರದ್ದು. ಬಿಬಿಎಮ್ ಮುಗಿಸಿರುವ ಅದಿತಿಗೆ ನಟನೆಯಷ್ಟೇ ಓದಿನಲ್ಲೂ ಆಸಕ್ತಿ ಇದೆ. ಎರಡನ್ನೂ ನಿಭಾಯಿಸಿಕೊಂಡು ಹೋಗುವಂಥ ಅವಕಾಶ ಸಿಕ್ಕರೆ ಖಂಡಿತಾ ಓದುತ್ತಾರಂತೆ.



ಅದಿತಿ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com